ಸಂಪುಟ ೨ ಸಂಚಿಕೆ ೧

ಮಾನವಿಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜನವರಿ, ೧೯೭೮

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ, ಹಾಗೂ ಅನುವಾದಿತ ಲೇಖನಗಳನ್ನು 'ಮಾನವಿಕ ಭಾರತಿ'ಯಲ್ಲಿ ಪ್ರಕಟಿಸಲಾಗುವುದು. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ, ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

೨ ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು. ಲೇಖಕರು ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಬೇಕು. ಲೇಖನವನ್ನು ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೩ ಲೇಖನಕ್ಕೆ ಅವಶ್ಯವಾದ ಚಿತ್ರಗಳಿದ್ದರೆ ಅವನ್ನು ಕಲಾಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಯಿಸಿ ಕಳುಹಿಸಬೇಕು.

೪ ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

೫ ಲೇಖಕರಿಗೆ, ಅಚ್ಚಾದ ಅವರ ಲೇಖನದ ೨೫ ಪ್ರತಿಗಳನ್ನು ಒದಗಿಸಲಾಗುವುದು. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

೬ ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಮಾನವಿಕ ಭಾರತಿ', ರಾಜಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸಬಯಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

೭ ಮಿಕ್ಕ ವಿವರಗಳಿಗೆ **ನಿರ್ದೇಶಕರು, ಪ್ರಸಾರಾಂಗ ವಿಸ್ತರಣ-ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಬರೆಯಬೇಕು.

ಮಾನವಿಕ ಭಾರತಿ

ಷಾಣ್ಮಾಸಿಕ ಪತ್ರಿಕೆ

ಸಂಪುಟ : ೨ ಸಂಚಿಕೆ : ೧

ಪ್ರಧಾನ ಸಂಪಾದಕರು :

ಡಾ. ಎ. ಎಂ. ರಾಜಶೇಖರಯ್ಯ

ಸಹಾಯಕ ಸಂಪಾದಕರು :

ಡಾ. ಕೆ. ಜಿ. ಗುರುಮೂರ್ತಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಾನವಿಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ಷಾಣ್ಮಾಸಿಕ ಪತ್ರಿಕೆ

ಸಂಪುಟ : ೨ ಸಂಚಿಕೆ : ೧

ಜನವರಿ, ೧೯೭೮

ಪ್ರಕಾಶಕರು :

ಶ್ರೀ ಸಿ. ಎಸ್. ಕಣವಿ
ನಿರ್ದೇಶಕರು, ವ್ಯಾಸಂಗವಿಸ್ತರಣ–ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಶ್ರೀ ಜಿ. ಬಿ. ಮನ್ವಾಚಾರ
ಸಹಾಯಕ ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ–೫೮೦೦೦೩

ಪರಿವಿಡಿ

೧. ಸಿದ್ದಿ ಜನರ ಸಂಸ್ಕೃತಿ ಮತ್ತು ಭಾಷೆ

—ಜಿ. ಎಂ. ಹೆಗಡೆ ೧

೨. ಮೆಕ್ಸಿಕನ್ ಗ್ರಾಮವೊಂದರಲ್ಲಿ ರೈತಾಪಿ ಬಂಡಾಯ

—ಎಚ್. ವಿ. ನಾಗೇಶ ೯

೩. ಸೋಮನಾಥಪುರದ ಕೇಶವ ದೇವಾಲಯ, ಪ್ರಾಕಾರ ದೇವತೆಗಳು:

ಒಂದು ವಿವೇಚನೆ —ವಿದ್ಯಾ ಮರಳಿಹಳ್ಳಿ ೧೪

೪ ಗಜೇಂದ್ರಮೋಕ್ಷ: ಕಥೆ ಹಾಗೂ ಶಿಲ್ಪ– ಕೆಲವು ಹೆಚ್ಚಿನ ವಿಷಯಗಳು

—ಶ್ರೀನಿವಾಸ ಪಾಡಿಗಾರು ೨೨

೫ ಪವಾಡಗಳ ಉಗಮದ ಬಗ್ಗೆ ಒಂದು ಸಾಧಾರ ಕಲ್ಪನೆ

—ವ್ಹಿ. ಜಿ. ಪೂಜಾರ ೨೭

೬ ಚಿತ್ರದುರ್ಗ ಪರಿಸರ: ಇತ್ತೀಚಿನ ಪುರಾತತ್ವ ಶೋಧನೆಗಳು ೩೨

—ಅ. ಸುಂದರ

೭ ಗ್ರಾಮೀಣ ಮಹಿಳೆ

—ಕೆ. ಜಿ. ಗುರುಮೂರ್ತಿ ೪೭

೮ ಕಪ್ಪು ಹಣ ಹಾಗೂ ಹಣದುಬ್ಬರ

—ಎಮ್. ಸಿ. ಕೊಡ್ಲಿ ೫೬

೯ ಲಕ್ಷ್ಮೇಶ್ವರ ದೇಸಾಯಿಯವರಿಗೆ ಬರೆದುಕೊಟ್ಟ ಕ್ರಯಪತ್ರ

—ಕೆ. ಎನ್. ಚಿಟ್ನೀಸ ೬೨

೧೦ ಚಿತ್ರಕಂಠ

—ಸಿ. ವ್ಹಿ. ರಂಗಸ್ವಾಮಿ ೭೦

೧೧ ಏಕಸ್ವಾಮ್ಯತೆಯ ತತ್ವ

—ಟಿ. ಆರ್. ಚಂದ್ರಶೇಖರ ೭೫

೧೨ ಸಾರ್ವಜನಿಕ ಆಡಳಿತ (ಪುಸ್ತಕ ವಿಮರ್ಶೆ)

—ಎನ್. ಎ. ಪಾಟೀಲ ೮೧

೧೩ ಕಿತ್ತೂರು ನಾಡಿನ ಇತಿಹಾಸ ಹಾಗೂ ಸಂಸ್ಕೃತಿ (ಪುಸ್ತಕ ವಿಮರ್ಶೆ:

ಒಂದು ಪ್ರತಿಕ್ರಿಯೆ) —ಎಸ್. ಕೆ. ಕೊಪ್ಪಾ ೮೫

೧೪ ಭಾರತೀಯ ಸಮಾಜದಲ್ಲಿ ಸ್ತ್ರೀಯರ ಚಿತ್ರಣ (ಒಂದು ಪ್ರತಿಕ್ರಿಯೆ)

—ಆರ್. ವೆಂಕಟೇಶ ೯೩

ಸಿದ್ದಿ ಜನರ ಸಂಸ್ಕೃತಿ ಮತ್ತು ಭಾಷೆ

● ಜಿ. ಎಂ. ಹೆಗಡೆ

ಒಂದು ಬುಡಕಟ್ಟಿಗೆ ಸೇರಿದ ಜನರ ವೈವಿಧ್ಯಮಯವಾದ ಬದುಕನ್ನು ಅಧ್ಯಯನ ಮಾಡುವದೆಂದರೆ ನಿಜವಾಗಿಯೂ ಆ ಜನಾಂಗ ಪ್ರತಿನಿಧಿಸುವ ಸಂಸ್ಕೃತಿಯನ್ನು ಅಭ್ಯಾಸ ಮಾಡಿದಂತೆಯೇ ಎಂಬ ಸಂಗತಿ ಬಹುಪ್ರಚಲಿತವಾಗಿದೆ. ಎಂದರೆ "ಸಂಸ್ಕೃತಿ ಎಂಬುದು ಮನುಷ್ಯ ತನ್ನ ಅನುಕೂಲಕ್ಕಾಗಿ ಏನೇನನ್ನು ಸೃಷ್ಟಿಸಿಕೊಂಡಿದ್ದಾನೆಯೋ ಅದೆಲ್ಲವನ್ನೂ ಒಳಗೊಳ್ಳುತ್ತದೆ. ಅವನ ಭಾಷೆ, ಉಡುಪು, ಮನೆ, ಉಪಕರಣ, ಮತ, ನಂಬಿಕೆ, ಬಳಸುವ ಸಾಮಗ್ರಿಗಳು, ಸಾಮಾಜಿಕ ಸಂಬಂಧಗಳು, ಆಡಳಿತದ ಆರ್ಥಿಕ ವಿಧಾನಗಳು ಇವೆಲ್ಲವನ್ನೂ ಸಂಸ್ಕೃತಿ ಪದ ಒಳಗೊಳ್ಳುತ್ತದೆ. ಒಂದು ಜನರ ಜೀವನವಿಧಾನದ ಉತ್ತಮಾಂಶಗಳನ್ನು ಮಾತ್ರ ಸಂಸ್ಕೃತಿ ಹೇಳುವದಿಲ್ಲ. ಒಟ್ಟು ಅವರ ಜೀವನವಿಧಾನ ವನ್ನೇ ಹೇಳುತ್ತದೆ."[೧] ಆದ್ದರಿಂದ ಸಿದ್ದಿ ಜನರ ಜೀವನವನ್ನು ಪರಿಚಯಿಸುವ ಈ ಪ್ರಬಂಧ ಅವರ ಸಂಸ್ಕೃತಿಯ ವಿವಿಧ ಮುಖಗಳನ್ನೂ ಪ್ರಕಟಿಸುವ ಉದ್ದೇಶವನ್ನೊಳ ಗೊಂಡಿದೆ.[೨]

---

೧. ಎಂ. ಚಿದಾನಂದಮೂರ್ತಿ – "ಪ್ರಾಚೀನ ಕರ್ನಾಟಕದ ಸಾಂಸ್ಕೃತಿಕ ಕೇಂದ್ರಗಳು." ಕನ್ನಡ ನುಡಿ. ಸಂಪುಟ ೪೦ ಸಂಚಿಕೆ ೪, ಪು. ೬-೧೧-೧೮.

೨. ಬೆಂಗಳೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ ಜರುಗಿದ ಅಖಿಲಭಾರತ ೭ನೇ ದ್ರಾವಿಡ ಭಾಷಾವಿಜ್ಞಾನಿಗಳ ಸಮ್ಮೇಳನದಲ್ಲಿ ಪ್ರಬಂಧವೊಂದನ್ನು ಸಾದರಪಡಿಸಲು ೧೯೭೭ರ ಎಪ್ರಿಲ್, ಮೇ ತಿಂಗಳಿನಲ್ಲಿ ಉತ್ತರ ಕನ್ನಡದ ಸಿದ್ದಿ ಜನರ ಜೀವನ ವಿಧಾನ, ಸಂಸ್ಕೃತಿ, ಭಾಷೆಯನ್ನು ಅಧ್ಯಯನ ಮಾಡಲು ನಾನು ನಡೆಸಿದ ಕ್ಷೇತ್ರ ಕಾರ್ಯದ ಪರಿವೀಕ್ಷಣೆ ಈ ಪ್ರಬಂಧ. ಪರಿವೀಕ್ಷಣೆಯ ಕಾಲದಲ್ಲಿ ನನಗೆ ಸಹಾಯ ಮಾಡಿದ ಮಧುಕೇಶ್ವರ, ರಾಮಕೃಷ್ಣ, ಮಾಹಿತಿ ವಕ್ತೃಗಳಾದ ಅಪ್ಪು, ನಾಗು, ದುರ್ಗಿ ಮೊದಲಾದವರಿಗೆ ನಾನು ಕೃತಜ್ಞನಾಗಿರುವೆ.

ಕರ್ನಾಟಕದಲ್ಲಿ ನಿಸರ್ಗಸೌಂದರ್ಯದ ತವರೆಂದು, ಪ್ರಾಚೀನ ಇತಿಹಾಸ ಪರಂಪರೆಗಳ ಮಹತ್ವವನ್ನು ಪಡೆದ ಉತ್ತರ ಕನ್ನಡ ಜಿಲ್ಲೆ ಅನೇಕ ಆದಿವಾಸಿ ಜನಾಂಗಗಳ ವಾಸಸ್ಥಾನವೂ ಆಗಿದೆ. ಮಾನವ ಕುಲವಿವರಣಾಶಾಸ್ತ್ರದ ಸಂಶೋಧನೆಗೆ ಇಂದಿಗೂ ಇಲ್ಲಿ ಅನೇಕ ವಿಷಯಗಳು ಲಭ್ಯವಿವೆ. ಈ ದಿಶೆಯಲ್ಲಿ ಭಾರತೀಯ ಹಾಗೂ ಪಾಶ್ಚಾತ್ಯ ಮಾನವ ಶಾಸ್ತ್ರಜ್ಞರ, ಭಾಷಾವಿಜ್ಞಾನಿಗಳ ಮನಸ್ಸನ್ನು ಸೆರೆಹಿಡಿಯುವ ಪ್ರದೇಶ ಪ್ರಾಯಶಃ ಇನ್ನೊಂದಿಲ್ಲ. ಉತ್ತರ ಕನ್ನಡದ ವೈಶಿಷ್ಟ್ಯಪೂರ್ಣ ಬುಡಕಟ್ಟುಗಳಲ್ಲಿ ಸಿದ್ದಿ ಜನರದು ಒಂದು ವಿಶಿಷ್ಟ ಪರಂಪರೆ. ತಮ್ಮ ಬೇರೆಯೇ ಆದ ರೂಪದಿಂದ ಎದ್ದು ಕಾಣುವ ಈ ಜನರು ಯಲ್ಲಾಪುರದ ಬೆಳಕಿ, ಕೊಡ್ಲಗದ್ದೆ, ಮಂಚಿಕೇರಿ, ಉಮ್ಮಚ್ಚಗಿ, ಹೆಚ್ಚುಂಬಳೆ, ನಂದೊಳ್ಳಿ ಭಾಗಗಳಲ್ಲೂ; ಅಂಕೋಲಾ ತಾಲೂಕಿನ ರಾಮನಗರ, ರಾಮನಗುಳಿ; ಹಳಿಯಾಳದ ಭಗವತಿ, ಸಾಮ್ರಾಣಿ; ಮುಂಡಗೋಡದ ಗುಂಜಾವತಿ ಮುಂತಾದ ಬೇರೆ ಬೇರೆ ಅರಣ್ಯಾವೃತವಾದ ಊರುಗಳಲ್ಲಿ ಸಾಮಾನ್ಯವಾಗಿ ಸಿದ್ಧಿ ಜನರು ನೋಡಲು ದೊರೆಯುತ್ತಾರೆ. ಸಿದ್ದಿಗಳ ದೇಹರಚನೆಯನ್ನು ನೋಡಿದಾಗ ಇವರು ನಿಗ್ರೋ ಜನಾಂಗಕ್ಕೆ ಸೇರಿರುವ ನಿಶ್ಚಿತವಾದ ದೈಹಿಕ ಗುರುತುಗಳು (**Definite physical Traits**) ಇರುವದು ಸ್ಪಷ್ಟವಾಗಿದೆ. ಗುಂಗರು ಕೂದಲು, ಕಪ್ಪನೆಯ ಮೈಬಣ್ಣ, ದೊಡ್ಡತಲೆ, ಚಿಕ್ಕ ಚಪ್ಪಟೆಯಾದ ಮೂಗು, ದಪ್ಪನೆಯ ತುಟಿಗಳು, ದೃಢವಾದ ದೇಹಕಾಯ ಅವರ ದೈಹಿಕ ವೈಶಿಷ್ಟ್ಯಗಳು. ಹಾಗೆಯೇ ಸಿದ್ದಿಗಳು ದಕ್ಷಿಣ ಅಫ್ರಿಕಾದ ನಿಗ್ರೋ ಜನರನ್ನು ಹೋಲುವದರಲ್ಲಿ ಯಾವ ಸಂದೇಹವೂ ಇಲ್ಲ.

ಯುರೋಪಿಯನ್ನರ ರಾಜ್ಯವಿಸ್ತಾರದ (೧೬ ರಿಂದ ೧೮ನೇ ಶತಮಾನಗಳಲ್ಲಿ) ಮಹತ್ವಾಕಾಂಕ್ಷೆಯ ಪ್ರಯತ್ನದಲ್ಲಿ ಗುಲಾಮರ ವ್ಯವಹಾರವು (**Slave Trade**) ಅವರ ಕಾರ್ಯಸಾಧನೆಯ ಕಾರಣಗಳಲ್ಲೊಂದಾಗಿತ್ತು. ಪೋರ್ತುಗೀಸರು, ಡಚ್ಚರು, ಫ್ರೆಂಚರು, ಮತ್ತು ಬ್ರಿಟೀಶರೇ ಪ್ರಮುಖ ಗುಲಾಮ ವ್ಯಾಪಾರಿಗಳಾಗಿದ್ದರು. ದಕ್ಷಿಣ ಆಫ್ರಿಕೆಯ ಆದಿವಾಸಿ ಜನರನ್ನು ಪ್ರಾಣಿಗಳಂತೆ ತಂದು ವ್ಯವಹರಿಸುವ ಈ ಗುಲಾಮ ಪದ್ಧತಿಯು ೧೯ನೇ ಶತಮಾನದಲ್ಲಿ ಮಾನವೀಯತೆಯ ಹೋರಾಟದಲ್ಲಿ ಕೊನೆಗೊಂಡಿತು. ಆದರೆ ಸುಮಾರು ೧೫–೧೬ನೇ ಶತಮಾನದಲ್ಲಿ ಪೋರ್ತುಗೀಸರು ದಕ್ಷಿಣ ಆಫ್ರಿಕಾದಿಂದ ಕೆಲವು ನಿಗ್ರೋ ಜನರನ್ನು (ಗುಲಾಮರನ್ನು) ಕಟ್ಟಿಕೊಂಡು ಕಾರವಾರಕ್ಕೆ ವಾಣಿಜ್ಯ ವ್ಯಾವಹಾರಗಳ ಉದ್ದೇಶದಿಂದ ಬಂದರು. ಆ ನಿಗ್ರೋ ಜನರ ಅವಶೇಷವೇ ಸಿದ್ದಿಗಳು. ಈ ೩೦೦–೪೦೦ ವರ್ಷಗಳಲ್ಲೂ ಯಾವುದೇ ಬದಲಾವಣೆ ಇಲ್ಲದೆ ಈ ಜನರು ಜಿಲ್ಲೆಯ ಕಾಡುಗಳಲ್ಲಿ ಅಲ್ಲಲ್ಲಿ ಗುಂಪುಕಟ್ಟಿಕೊಂಡು ವನ್ಯಜೀವಿಗಳಂತೆ ವಾಸವಾಗಿದ್ದಾರೆ. ಮೂಲತಃ ತಮ್ಮ ಸಂಸ್ಕೃತಿ, ಬಣ್ಣ, ಆಚಾರ–ವಿಚಾರ, ಉಡಿಗೆ–ತೊಡಿಗೆ

ಎಲ್ಲದರಲ್ಲೂ ಹಿಂದುಳಿದ ಈ ಜನಾಂಗ ನಾಗರಿಕತೆಯಿಂದ ಬಹುದೂರ ಉಳಿದಿದ್ದಾರೆ. ಇತ್ತೀಚೆಗೆ ಬೇರೆ ಬೇರೆ ಜನರ ಸಂಪರ್ಕದಿಂದ ಎಲ್ಲರೊಡನೆ ಬೆರೆಯುತ್ತಿದ್ದಾರೆ.

ಸಿದ್ದಿಗಳು ಮೂಲತಃ ಬುಡಕಟ್ಟು ಜನಾಂಗದವರಾದುದರಿಂದ ಅವರು ಬೇರೆಬೇರೆ ಧರ್ಮಗಳನ್ನು ಸ್ವೀಕರಿಸಿರುವದೂ, ಮತಾಂತರವನ್ನು ಹೊಂದಿರುವದೂ ತಿಳಿಯುತ್ತದೆ. ಕನ್ನಡನಾಡಿಗೆ ಗುಲಾಮರಾಗಿ ಬಂದ ಇವರನ್ನು ಬೇರೆ ಬೇರೆ ಧರ್ಮದ ಅನುಯಾಯಿಗಳು ತಮ್ಮ ಮತಗಳಿಗೆ ತೆಗೆದುಕೊಳ್ಳಲು ಯತ್ನಿಸಿದ್ದಾರೆ. ಹಿಂದೂ ಧರ್ಮವನ್ನು ಸ್ವೀಕರಿಸಿದ ಸಿದ್ದಿ ಜನರೂ ವಿಪುಲವಾಗಿದ್ದಾರೆ. ಆದರೆ ಯಲ್ಲಾಪುರ ತಾಲೂಕಿನ ಕಿರವತ್ತಿಯಲ್ಲಿ ಮುಸಲ್ಮಾನ ಸಿದ್ದಿಯರೂ. ಹಳಿಯಾಳದ ಭಗವತಿ ಮತ್ತು ಸಾವಾಗ್ರಾಣಿ, ಗುಂಜಾವತಿಯಲ್ಲಿ ಮುಸಲ್ಮಾನ, ಕ್ರೈಸ್ತ ಸಿದ್ದಿ ಜನರು ಅಪ್ಪಟವಾಗಿ ಧರ್ಮದ ಅನುಯಾಯಿಗಳಾಗಿ ಇರುವದನ್ನೂ ನೋಡಬಹುದು. ಹಿಂದೂ ಸಿದ್ದಿಗಳು, ಯುಗಾದಿ, ನಾಗರಪಂಚಮಿ, ಗಣೇಶಚತುರ್ಥಿ, ದಸರಾ, ಹೋಳಿಹುಣ್ಣಿವೆ, ದೀಪಾವಳಿ, ಸೀಗೆಹುಣ್ಣಿವೆ ಮುಂತಾದ ಹಬ್ಬಗಳನ್ನೂ, ಮುಸಲ್ಮಾನ ಸಿದ್ದಿಗಳು ಬಕ್ರೀದ್, ರಮಝಾನ್, ಮೊಹರಮ್ ಆಚರಿಸುವರು. ಕ್ರಿಶ್ಚಿಯನ್ ಸಿದ್ದಿಗಳು ನಾತಾಳ ಪೆಸ್ಟ, ಕ್ರಿಸ್‌ಮಸ್, ಮಿಲಗಿರಿ, ಇಂಥೋರ್ಸೆ, ಗುಡ್‌ಫ್ರಾಯಡೇ. ನವಪಸಾಚನ್ ಪೆಸ್ಟ (All Souls, day) ಸಖೀಬರತ್ (Ancestral worship) ಆಚರಣೆಯಲ್ಲಿ ತಮ್ಮ ಧಾರ್ಮಿಕ ಶ್ರದ್ಧೆಯನ್ನು ತೋರುತ್ತಾರೆ.[೩] ಹೀಗಿದ್ದರೂ ಭೂತ, ದೇವಿಯರಲ್ಲಿ ತುಂಬಾ ನಂಬಿಕೆಯಿರುವ ಸಿದ್ದಿಗಳು ಪ್ರತಿ ವರ್ಷವೂ ದ್ಯಾಮವ್ವ ಮತ್ತು ದುರ್ಗವ್ವನನ್ನೂ ಹೊರಡಿಸುವದು, ಕಲ್ಮೇಶ್ವರ ಉಚ್ಛ್ರಾಯಿ, ಸಿದ್ದಿ ರಹೀಮ ಉರ್ಸ, ಹನುಮಜಯಂತಿ, ಮುಂತಾದ ಸ್ಥಳೀಯ ಉತ್ಸವ-ಜಾತ್ರೆಗಳನ್ನು ನಿಷ್ಠೆಯಿಂದ ನಡೆಸಿಕೊಂಡು ಬಂದಿದ್ದಾರೆ. ಜಾತ್ರೆ-ಉತ್ಸವಗಳು ಇಂಥ ಸಮಾಜ ವ್ಯವಸ್ಥೆಯಲ್ಲಿ ಆಗಾಗ ನಡೆಯುವದರಿಂದ ಸಮಾಜದ ವಿವಿಧ ವರ್ಗಗಳಿಗೆ ಸೇರಿದ ಎಲ್ಲಾ ಜನರೂ ಒಂದೆಡೆ ಸೇರಿ ತಮ್ಮ ಜೀವನದ ಕಷ್ಟ-ನಷ್ಟಗಳನ್ನು ಮರೆತು ಕೆಲಕಾಲ ಮೋಜಿನ ಮೇಳದಲ್ಲಿ ಭಾಗವಹಿಸುವದು ಸಾಧ್ಯವಾಗುತ್ತದೆ. ದ್ಯಾಮವ್ವನನ್ನು ಉತ್ಸವದಲ್ಲಿ ಹೊರಡಿಸುವ ಪದ್ಧತಿ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುತ್ತದಾದರೂ ವೆಚ್ಚಕ್ಕೆ ಬೇಕಾದ ಹಣದ ಮುಗ್ಗಟ್ಟಿನಿಂದ ಸಾವಾಗ್ರಾಣಿಯಲ್ಲಿ ೧೯೨೭ ಮತ್ತು ೧೯೬೧ ರಲ್ಲಿ ಮಾತ್ರ ನಡೆಸಲಾಯಿತು. ಯುಗಾದಿಯಂದು ನಡೆಸುವ ಕಲ್ಮೇಶ್ವರಉಚ್ಛ್ರಾಯಿಯೆಂಬುದು ಒಂದು ದಿನದ ಜಾತ್ರೆ.ಜಾತ್ರೆಯ ವೇಳೆಯಲ್ಲಿ

೩. ವಿವರಗಳಿಗೆ ನೋಡಿ: "Fairs and Festivals among the Siddis"– C.P.Ankalgi.Dissertation. submitted to Deptt, of Anthropology Karnatak University, 1963 (Unpublished) ಈ ಮಹಾಪ್ರಬಂಧವನ್ನು ನೋಡಲು, ಅದರಲ್ಲಿಯ ಕೆಲವು ವಿಷಯಗಳ ಕಡೆಗೆ ನನ್ನ ಗಮನ ಸೆಳೆದ ಡಾ. ಕೆ. ಜಿ. ಗುರುಮೂರ್ತಿಗಳಿಗೆ ಕೃತಜ್ಞತೆಗಳು.

ಕುಸ್ತಿ ಪಂದ್ಯಾಟವನ್ನು ನಡೆಸಿ ಅದರಲ್ಲಿ ಹೆಚ್ಚಿನ ಮನರಂಜನೆಯನ್ನು ಈ ಜನಾಂಗ ಪಡೆಯುತ್ತದೆ. ಒಂದರ್ಥದಲ್ಲಿ ಬಲಶಾಲಿಗಳಾದ ಸಿದ್ದಿಗಳು ಶ್ರೇಷ್ಠ ಮಟ್ಟದ ಕುಸ್ತಿ ಪಟುಗಳು.

ಸಿದ್ದಿಗಳ ಉತ್ಸವ ಮತ್ತು ಜಾತ್ರೆಗಳು ಸಾಮಾಜಿಕ ಧಾರ್ಮಿಕ ಮಹತ್ವವನ್ನೂ ಹೊಂದಿರುತ್ತವೆ. ಹಬ್ಬದ ದಿನಗಳಲ್ಲಿ ದೇವರಲ್ಲಿ ಪ್ರಾರ್ಥನೆ ಸಲ್ಲಿಸುವದರಿಂದ ತಮ್ಮ ಜೀವನದ ಕಷ್ಟಗಳನ್ನು ದೂರವಾಗಿಸಲು ಹಾಗೂ ಎದುರಿಸುವ ಶಕ್ತಿಯನ್ನು ಅವನು ನೀಡುವನೆಂಬ ನಂಬಿಕೆ ಅವರಲ್ಲಿ ಪ್ರಬಲವಾಗಿದೆ. ಈ ವಿಶೇಷ ದಿನಗಳಲ್ಲಿ ಎಲ್ಲ ಕೆಲಸ ಗಳನ್ನೂ ಬಿಟ್ಟು ಒಂದೆಡೆ ಸೇರಿ, ಮನರಂಜನೆ, ಹಾಡು, ನೃತ್ಯ, ಕುಸ್ತಿ, ಮುಂತಾದವು ಗಳಲ್ಲಿ ಕಾಲಕಳೆಯುವಲ್ಲಿ ಅವರಲ್ಲಿರುವ ಸಾಮಾಜಿಕ ಸಾಮರಸ್ಯ ಸ್ಪಷ್ಟವಾಗುತ್ತದೆ. ಆದರೆ ಕ್ರೈಸ್ತ ಸಿದ್ದಿಗಳು ಹಿಂದುಗಳ ಹಬ್ಬದಲ್ಲಿಯೂ, ಮುಸಲ್ಮಾನ ಸಿದ್ದಿಗಳು ಕ್ರೈಸ್ತ ಹಬ್ಬ ಗಳಲ್ಲೂ ಭಾಗವಹಿಸದಂತೆ ಅವರ ಮೇಲೆ ಧರ್ಮಗುರುಗಳು ಆಜ್ಞಾಪಿಸಿದ್ದರೂ ಅವರ ಕಣ್ಣು ತಪ್ಪಿಸಿ ಸಿದ್ದಿಗಳು ಅವುಗಳಲ್ಲಿ ಭಾಗವಹಿಸುವದುಂಟು. ಸಿದ್ದಿಗಳಲ್ಲಿ ತಮ್ಮ ಧರ್ಮ ಆಚರಣೆಗಳು ಬೇರೆಯಾದರೂ ತಾವೆಲ್ಲರೂ ಒಂದೇ ಪಂಗಡದವರೆಂಬ ಭಾವನೆ ಪ್ರಬಲ ವಾಗಿದೆ. ಇದನ್ನು ನಾವು ಸಿದ್ದಿಗಳ ಜಾತ್ರೆಗಳಲ್ಲಿ ನೋಡಬಹುದು. ಕ್ರೈಸ್ತ ಸಿದ್ದಿಗಳು ಗೋವಾಕ್ಕೆ ಹೋಗಿ ಸೇಂಟ್ ಝೇವಿಯರ್‌ನನ್ನು ನೋಡಿ ಬಂದವರಿದ್ದಾರೆ. ದಸರಾ ಮುಂತಾದ ಉತ್ಸವಗಳಲ್ಲಿ ವೈಯಕ್ತಿಕ ಪ್ರತಿಭೆಯನ್ನು ತೋರಿಸಲು ಸಾಕಷ್ಟು ಅವಕಾಶ ವಿರುತ್ತದೆ. ದಸರಾದಲ್ಲಿ ಬನ್ನಿ ಕೊಡುವ ಸಂಪ್ರದಾಯವೂ ಸಿದ್ದಿಗಳಲ್ಲಿದೆ. ಇದರಿಂದ ಮುರಿದ ಮನಸ್ಸನ್ನು ಮತ್ತೆ ಕಟ್ಟುವ, ಪರಸ್ಪರ ಪ್ರೇಮ ಮತ್ತು ಸೌಹಾರ್ದವನ್ನು ಬೆಳಸಲು ಅವರು ಸದಾ ಸಿದ್ಧರೇ.

ಸಿದ್ದಿಗಳ ಸಾಮಾಜಿಕ ಜೀವನದಲ್ಲಿ ಎದ್ದು ಕಾಣುವ ಅಂಶವೆಂದರೆ ಅವರ ವಿವಾಹ ಪದ್ಧತಿ. ಪಿತೃಪ್ರಧಾನ ಕುಟುಂಬವಾಗಿದ್ದರೂ ಸಿದ್ದಿಗಳಲ್ಲಿ ವರದಕ್ಷಿಣೆಯಿಲ್ಲ. ಆದರೆ ಹೆಣ್ಣಿಗೆ ತೆರಕೊಟ್ಟು ಮದುವೆಯಾಗಿ **(Bride price)** ಬರುವ ಸಂಪ್ರದಾಯ ಇಂದಿಗೂ ಬಳಕೆಯಲ್ಲಿದೆ. ಬಾಲವಿಧವೆಯರಿಗೆ ಮರುಮದುವೆಮಾಡುವ ವಿಧವಾ ವಿವಾಹ ಪದ್ಧತಿ ರೂಢಿಯಲ್ಲಿದೆ. ಇಲ್ಲಿ ವಿಧಿಕಾರ್ಯಗಳಿಗೆ ಬದಲಾಗಿ ವರನು ಒಂದು ಸೀರೆಯನ್ನು ಕೊಟ್ಟು ಅವಳನ್ನು ತನ್ನ ಮನೆಗೆ ಕರೆತರಬೇಕು. ಮನೆಯ ಹಿಂಬಾ ಗಿಲಿನ ಮೂಲಕ ಪ್ರವೇಶಿಸುವ ಇಂಥ ಸ್ತ್ರೀಯರಿಗೆ ಹಾಗೂ ಸಂಸಾರಕ್ಕೆ 'ಸೀರಿ ಹುಡುಗಿ' ಮನೆತನವೆಂದು ಕರೆಯಲಾಗುವದು. ತೀರ ಹಿಂದುಳಿದ ಈ ಜನಾಂಗದಲ್ಲೂ ನಾಗರಿಕತೆ ಬಯಸುವ ವಿಧಿವಿಧಾನಗಳು ಬಳಕೆಯಲ್ಲಿವೆ. ಗಂಡ ಸತ್ತಾಗ ಹೆಂಡತಿ ಕೇಶ ಮುಂಡನ ವನ್ನು ಮಾಡಿಕೊಳ್ಳುವದಿಲ್ಲ. ಆಫ್ರಿಕಾದ ನಿಗ್ರೋ ಜನರಲ್ಲೂ ಈ ರೀತಿ ತೆರಕೊಟ್ಟು ಮದುವೆಯಾಗುವ ಸಂಪ್ರದಾಯವಿದೆ. ಇದರಂತೆ ಮನೆಯಲ್ಲಿ ಸಂಪತ್ತಿನ ಬಲವಿಲ್ಲದ



ಸಿದ್ದಿ ಜನರು

ಸಹೋದರರು ಒಬ್ಬಳನ್ನು ಕೊಂಡು ತಂದು ಬಹುಪತಿತ್ವ ಪದ್ಧತಿಯಲ್ಲಿ ಮದುವೆಯಾಗುತ್ತಿದ್ದರಂತೆ. ಆದರೆ ಈಗ ಏಕಪತ್ನಿಯಿಂದ ಕುಟುಂಬ ಜೀವನದಲ್ಲಿ ಸುಖಶಾಂತಿ ಹೆಚ್ಚುವದೆಂಬ ಕಲ್ಪನೆ ಮೂಡಿರುವದರಿಂದ ಬಹುಪತ್ನಿತ್ವ(Polygamy)ಕ್ಕೆ ಬದಲಾಗಿ ಏಕಪತಿತ್ವ (Monogamy) ಸಿದ್ಧಿಗಳಲ್ಲಿ ಕಂಡುಬರುತ್ತದೆ.

ಜೇನು ವ್ಯವಸಾಯದಲ್ಲಿ ಸಿದ್ದಿಗಳು ಪರಿಣತರು. ಹಾಗೆಯೇ ಜೇನು ಹಿಡಿಯುವದರಲ್ಲಿ ನಿಪುಣರು. ಸಿದ್ದಿಗಳು ದೃಢಕಾಯವನ್ನು ಹೊಂದಿರುವದರಿಂದ ಅವರು ಹೆಚ್ಚಿನ ದುಡಿಮೆಗಾರರೆಂದು ಹೆಸರಾಗಿದ್ದಾರೆ. ಕೆಲಸ ಮಾಡದೆ ಯಾರೂ ಆಲಸ್ಯದಿಂದ ಕುಳಿತು ಜೀವಿಸುವದಿಲ್ಲ. ಸಿದ್ದಿಗಳು ಪರಂಪರಾಗತವಾಗಿ ಬಂದ ಕೂಲಿ ಮಾಡುವುದರೊಂದಿಗೆ ಇತ್ತೀಚೆಗೆ ವ್ಯವಸಾಯವನ್ನೂ ಕೈಕೊಂಡಿದ್ದಾರೆ. ಸಿದ್ದಿ ಗಂಡಸರೊಂದಿಗೆ ಹೆಂಗಸರೂ ಸರಿಸಮಾನವಾಗಿ ಹೊಲಮನೆಗಳಲ್ಲಿ ದುಡಿಯುತ್ತಾರೆ. ಆರ್ಥಿಕವಾಗಿಯೂ ಸಿದ್ದಿಗಳು ಹಿಂದುಳಿದವರಾದುದರಿಂದ ಆಧುನಿಕತೆಯ ಸೋಂಕು ಅವರಿಗಿನ್ನೂ ತಟ್ಟಿಲ್ಲ. ಇವರು ಮಾಂಸಾಹಾರಿಗಳಾದರೂ ತಾವೇ ಬೇಟೆಯಾಡಿ ಕೊಂದು ತಂದ ಪ್ರಾಣಿಯ ಮಾಂಸವನ್ನು ಮಾತ್ರ ಸೇವಿಸುವರು. ಒಂದರ್ಥದಲ್ಲಿ ಕಾಡಿನ ಜೀವಿಗಳಂತಿರುವ ಸಿದ್ದಿಗಳು ಉತ್ತಮ ಬೇಟೆಗಾರರು.

ಸಿದ್ದಿಗಳಲ್ಲಿ ಹಬ್ಬಹರಿದಿನಗಳಲ್ಲಿಯೇ ಹೆಚ್ಚಿನ ಹಣವನ್ನು ಖರ್ಚುಮಾಡಿ ಹೊಸ ವಸ್ತುಗಳನ್ನು ಕೊಳ್ಳುವ ರೂಢಿಯಿದೆ. ಹಬ್ಬದಲ್ಲಿ ಅಣ್ಣ ತನ್ನ ತಂಗಿಯರಿಗೆ ಕಾಣಿಕೆ ಕೊಡುವ ಪದ್ಧತಿ ಇದೆ. ಸಿದ್ಧಿಗಳಲ್ಲದ ದುರ್ಬಲರಿಗೆ ಹಾಗೂ ಭಿಕ್ಷುಕರಿಗೆ ಹಣ ಇಲ್ಲವೆ ಇತರ ಸಹಾಯವನ್ನೂ ಮಾಡುತ್ತಾರೆ. ಆದರೆ ತಾವೇ ಎಂದೂ ಭಿಕ್ಷೆಗೆ ಹೋಗುವುದಿಲ್ಲ. ಅಸ್ಪೃಶ್ಯತೆ ಸಿದ್ದಿಗಳಲ್ಲಿಲ್ಲದಿರುವದು ಅವರಲ್ಲಿಯ ಪ್ರಮುಖ ವೈಶಿಷ್ಟ್ಯ. ಅಂತರ್ ಜಾತೀಯ ವಿವಾಹವನ್ನು ಸಿದ್ದಿಗಳು ನಿಷೇಧಿಸುತ್ತಾರೆ. ಸಿದ್ದಿಗಳಲ್ಲಿ ಜಗಳವಾದರೆ ಸಮಾಜದ ಮುಖಂಡರಿಂದ ಸಲಹೆಪಡೆದು ನ್ಯಾಯವನ್ನು ಪಡೆಯುವರು. ವಿದ್ಯಾಭ್ಯಾಸ ಪಡೆಯುವ ಮನಸ್ಸು ಇವರಲ್ಲಿ ಈ ವರೆಗೆ ಮೂಡಿಲ್ಲ. ಸಿದ್ಧಿಗಳ ಜೀವನ ವಿಧಾನದ ಮೇಲೆ ಉತ್ತರ ಕನ್ನಡದ ಪ್ರಭಾವಿ ಗುಂಪುಗಳಾದ ಹವ್ಯಕರು, ನಾಯಕರು ಮುಂತಾದವರ ಪ್ರಭಾವ ಹೆಚ್ಚಾಗಿ ಬಿದ್ದಿರುವದನ್ನು ನಾವು ಗುರುತಿಸಬಹುದು.

ಕನ್ನಡ ಜಾನಪದ ಕ್ಷೇತ್ರಕ್ಕೆ ಸಿದ್ದಿಗಳ ಕೊಡುಗೆ ಅಪೂರ್ವವಾದುದು. ಆಫ್ರಿಕಾದ ಮೂಲನಿವಾಸಿಗಳ ಜನಪದ ಸಂಗೀತದ ಹೋಳಹುಗಳನ್ನು ಇವರ ಹಾಡುಗಳಲ್ಲಿ ಗುರುತಿಸಬಹುದು. ಹಬ್ಬ, ಉತ್ಸವ, ಜಾತ್ರೆಗಳಲ್ಲಿ ಹಾಡುಗಳನ್ನೂ ವೀರಗೀತಗಳನ್ನೂ ತುಂಬಾ ಸೊಗಸಾಗಿ ಹೇಳುವ ಇವರಲ್ಲಿಯ ಲಾವಣಿಗಳನ್ನು ಮತ್ತು ಇತರ ಪದಗಳನ್ನು ಡಾ. ಎಲ್. ಆರ್. ಹೆಗಡೆಯವರು ಸಂಗ್ರಹಿಸಿದ್ದಾರೆ. ಇವರ ಜನಪದ ಕಲೆಗಳಲ್ಲಿ

'ಅಲಾಯಿ' ಕುಣಿತವು ವಿಶೇಷವಾದ ಮಹತ್ವವನ್ನು ಪಡೆದಿದೆ. ಹಿಂದೂ ಪುರಾಣಕ್ಕೆ ಸಂಬಂಧಿಸಿದ ಹರಿಶ್ಚಂದ್ರ, ಚಂದ್ರಹಾಸ ಮುಂತಾದ ಕಥನ ಭಾಗಗಳನ್ನೂ ರಾತ್ರಿಯಿಡೀ ಜಾನಪದ ನಾಟಕದ ರೂಪದಲ್ಲಿ ನಡೆಸುವದುಂಟು. ಸಂಗ್ಯಾಬಾಳ್ಯಾ ನಾಟಕವನ್ನು ತುಂಬಾ ಆಸಕ್ತಿಯಿಂದ ಅಭಿನಯಿಸುವರು. ಸಿದ್ದಿಗಳು ಮದುವೆಯಲ್ಲಿ ಜನಪದ ಹಾಡುಗಳ ಮೂಲಕವೇ ಎಲ್ಲ ಸಂಪ್ರದಾಯಗಳನ್ನು ನಡೆಸುತ್ತಾರೆ. ಇವರ ಮದುವೆಗೆ ಪುರೋಹಿತರ ಅಗತ್ಯವಿಲ್ಲ. ಇವರ ಜನಪದ ಕಥೆಗಳು, ಒಗಟುಗಳು. ಹಾಡುಗಳು, ಕಲೆಗಳು ಕನ್ನಡದ ಸಾಂಸ್ಕೃತಿಕ ಪರಂಪರೆಯ ಅಮೂಲ್ಯ ನಿಧಿಗಳು. ಯಕ್ಷಗಾನದಂತೆ ಜನಪದ ವಾದ್ಯಗಳಾದ ದಬ್ಬು, ಮೃದಂಗ. ಚಂಡೆ, ತಾಳ ಮುಂತಾದವುಗಳನ್ನು ಗಂಡಸರು ಸುಗ್ಗಿಯ ಕುಣಿತದ ವೇಳೆಯಲ್ಲಿ ನುಡಿಸುತ್ತಾರೆ. ಒಟ್ಟಿನಲ್ಲಿ ಸಿದ್ದಿಗಳ ಜಾನಪದ ವೈವಿಧ್ಯಮಯವಾಗಿದೆ.

ಸಿದ್ದಿಗಳ ಭಾಷೆಯು ಸಾಮಾಜಿಕ ಹಾಗೂ ಪ್ರಾದೇಶಿಕ ಭಿನ್ನತೆಯನ್ನು ಹೊಂದಿರುವವರಿಂದ ಭಾಷಿಕ ಅಧ್ಯಯನಕ್ಕೆ ತುಂಬ ನೆರವು ನೀಡುತ್ತದೆ. ಮುಸಲ್ಮಾನ ಸಿದ್ದಿ. ಕ್ರೈಸ್ತ ಸಿದ್ದಿ, ಹಿಂದೂ ಸಿದ್ದಿ–ಎಂಬ ಮೂರು ಗುಂಪುಗಳು ಈ ಒಂದೇ ಜನಾಂಗಿಕ ವರ್ಗದಲ್ಲಿರುವದರಿಂದ ಭಾಷೆಯು ರಾಚನಿಕ ಸ್ವರೂಪವೂ ಕೆಲವೊಮ್ಮೆ ಬದಲಾವಣೆ ಹೊಂದುತ್ತದೆ. ಹಾಗೆ ನೋಡಿದರೆ ಸಿದ್ದಿಗಳು ಮುಖ್ಯವಾಗಿ ಇಂಡೋ-ಆರ್ಯನ್ ವರ್ಗಕ್ಕೆ ಸೇರಿದ ಮರಾಠಿ ಭಾಷೆಯನ್ನು ಹೆಚ್ಚಾಗಿ ಮಾತನಾಡುತ್ತಿದ್ದರೂ ಕೊಂಕಣಿ. ಕನ್ನಡ, ಪೋರ್ತುಗೀಸ್ ಮುಂತಾದ ಭಾಷೆಗಳ ಪ್ರಭಾವವಿರುವದು ತಿಳಿಯುತ್ತದೆ. ಹೀಗಾಗಿ ಸಿದ್ದಿಗಳ ಭಾಷೆ ಅತ್ಯಂತ ವಿಶಿಷ್ಟವಾದುದೆನಿಸುತ್ತದೆ. ಈ ಲೇಖನದಲ್ಲಿ ಅವರ ಭಾಷೆಯಲ್ಲಿಯ ಕೆಲವು ವೈಶಿಷ್ಟ್ಯಗಳನ್ನೂ ಮೂಲಶಬ್ದಕೋಶಕ್ಕೆ ಸೇರುವ ಪದಗಳನ್ನೂ ಪರಿಚಯಿಸಲಾಗುತ್ತದೆ.

೧. ಸಿದ್ದಿಗಳ ಗಂಡಸರ ಹೆಸರುಗಳಲ್ಲಿ ಕೆಲವು ಉಕಾರಾಂತವಾಗಿಯೂ ಇನ್ನು ಕೆಲವು ಆ ಕಾರಾಂತವಾಗಿಯೂ ಇರುವುದನ್ನು ಇಲ್ಲಿ ಗುರುತಿಸಲಾಗಿದೆ.

(i) ಉಕಾರಕ್ಕೆ:- ಅಂತು. ಅಬ್ಬು, ಬಾಬು, ಸಾಣು, ಪುಂಡು, ದೊಂಡು, ನಾಗು, ಶಿವು, ಪುಟ್ಟು. ಚದುರಂಗ ಪುಟ್ಟು. ರಂಭು. ಗಿಡ್ಡು ಇತ್ಯಾದಿ.

(ii) ಆಕಾರಕ್ಕೆ: ಪರಸಿಯಾ. ಮೊಂಬಾಂಡಿಯಾ. ಬರಕೇಲಿಯಾ. ದ್ಯಾವ್ಯಾ. ಕಾಳ್ಯಾ. ಮಾರ್‍ಯಾ ಇತ್ಯಾದಿ.

ಪೂರ್ಣ ಹೆಸರು:- ಸಾಣು ಪರಸಿಯಾ ಸಿದ್ದಿ.

ಸಿದ್ದಿ ಹೆಂಗಸರ ಹೆಸರುಗಳಲ್ಲಿ ಇಕಾರಾಂತವು, ಉಕಾರಾಂತವೂ ಇರುವ ಕೆಲವು ಹೆಸರುಗಳು ಹೀಗಿವೆ.

(i) ಇಕಾರಾಂತಕ್ಕೆ:–ಅಕ್ಕಣಿ, ಬಾಯಿ. ಮಂಕಾಳಿ, ಬಾಗಿ ಇತ್ಯಾದಿ.

(ii) ಉಕಾರಾಂತಕ್ಕೆ:- ಯುಂಕು, ಗಂಗು, ತಂಗು ಇತ್ಯಾದಿ.

೨. **ದೇಹದ ಭಾಗಗಳು :** 'ಜೊಳೋ' (ಕುತ್ತಿಗೆ), 'ಘಾಟಿ' (ಬೆನ್ನು), 'ಬೋಟಾ' (ಬೆರಳು). 'ನಾಕುಟ' (ಉಗುರು), 'ಕಂಬರ್' (ಸೊಂಟ), 'ಪಡದೆ' (ಎದೆ), 'ಕೆಸ' (ಕೂದಲು). 'ಗವ್ದ' (ಮೀಸೆ), 'ಜಿಬ್ಲಿ' (ನಾಲಿಗೆ), 'ದಾತಾ' (ಹಲ್ಲು), 'ತಕಲಿ' (ತಲೆ), 'ದೋಳೆ' (ಕಣ್ಣು). 'ಹಾಥ' (ಕೈ), 'ಪಾಂವ' (ಕಾಲು).

೩. **ಸಂಬಂಧವಾಚಕ ಪದಗಳು :** ಸಿದ್ಧಿಗಳಲ್ಲಿ ಕನ್ನಡ ಭಾಷೆಯ ಅನೇಕ ಸ್ವೀಕೃತ ಪದಗಳಿವೆ.ಅಮ್ಮ ಎಂಬುದು ತಾಯಿಗೆ ಕರೆಯುವ ವಾಡಿಕೆ ಪದ. ಅಪ್ಪ (ತಂದೆ,) 'ಹುನಿ' (ಅತ್ತಿಗೆ). 'ಮಾಮಾ' (ಅತ್ತೆ), 'ಮಾಮ' (ಮಾವ) ಇವರನ್ನು ಯಾವಾಗಲೂ ಬಹುವಚನದಿಂದ ಕರೆಯಲಾಗುವದು. 'ಅಪ್ಪಜ್ಜಿ' (ತಮ್ಮ),'ಮಾಂಶಿ' (ಚಿಕ್ಕಿ), 'ಭಾವುಡೀ' (ಭಾವ), 'ಸೂಸ' (ಸೊಸೆ). 'ಚಿಡು' (ಹುಡುಗಿ) ಇವರಲ್ಲಿ ಮತ್ತು ಗಂಡಹೆಂಡಂದಿರಲ್ಲಿ ಬಹುವಚನ ಪ್ರಯೋಗ ಅಪರೂಪ.

೪. **ಕ್ರಿಯಾವಾಚಕ ಪದಗಳು :** 'ಜಿವುಂಜಿ' (ಊಟಮಾಡು), 'ನಿಜ್ಜಿ' (ಮಲಗು), 'ಒಜ್ಜಿ' (ಓದು),'ಬರೋಚಿ' (ಬರೆ),'ಪ್ರೊಯಿಸ್ಸಿ'(ಹೋಗು).'ಬಜ್ಜಿ'(ಕೂಡ್ರು) ಇತ್ಯಾದಿ.

೫. **ವೃತ್ತಿ ಪದಕೋಶಕ್ಕೆ ಸಂಬಂಧಿಸಿದ ಪದಗಳು :** 'ಕೊರೆ', 'ಪಿಕಾಸ', 'ಪಾನಗುದ್ಲಿ' 'ಕುಠಾರ' (ಕೊಡ್ಲಿ), 'ಕೊಯ್ತ (ಕತ್ತಿ). 'ಕೋಪೆ ಜಲ್ಲಿ' (ದೋಣಿ) 'ಗಂಗೋಲಿ'(ನೇಗಿಲು),'ಜೂ', (ನೊಗ), 'ಜುಪಣ' (ಜೊತಗೆ), 'ಅಕಡಿ' (ಅಂಡುಗೊಕ್ಕೆ), ಪಾಕೀ (ಹಾರೆ). ಫಳೋ (ಹಲಿಗೆ). ಪಗೋ (ಹಗ್ಗ).

೬. **ಮಾಪನಗಳು :** ಶಾಪ್ರ. ಸೇರು. ಅಟುವೆ. ಮೊಜಕಾ (ಲೆಕ್ಕಮಾಡು).

೭. **ಅತ್ಯಾವಶ್ಯಕ ಇಲ್ಲವೆ ದಿನಬಳಕೆಯ ಪದಗಳು :** 'ತಾಕ' (ಮಜ್ಜಿಗೆ). 'ತುಪ' (ತುಪ್ಪ) 'ನೊರೆ' (ಬೆಣ್ಣೆ). 'ಗೋಟಿ' (ಅನ್ನ). 'ಹುಸಿ' (ಬಸಿ) 'ಚರಿಗೆ' (ಪಾತ್ರೆ), 'ಚೆಂಬು' 'ಚಾಸ್ಲೇಟ'. 'ಕೊಳಸಿ'. (ಕೊಡ) 'ಟೋಪ' (ತಂಬಿಗೆ). 'ತಾಲಿ' 'ಲೋಟ' 'ಥೂಳೀ' (ಹಣ್ಣು). ಕೊನಗ್ಯಾತುಪ್ (ಜೇನುತುಪ್ಪ). ಮುಸಿತುಪ್ (ಎಮ್ಮೆತುಪ್ಪ). 'ಖಿರ' (ಪಾಯಸ).ನೊಂಚಿ (ಉಪ್ಪಿನಕಾಯಿ). 'ಜಾತ್ರಾ (ರಥ),' ಕಮೋಡ್ (ಬಾಗಿಲು).

೮. **ಆಭರಣಗಳು :** ಏಕಮಾಣಿ, ಪೋಣಿಸರ, ಮುಗಳು, ಕುಡುಕು, ಹೊನ್ನೇಹೂಗಳು, ಬುಗಡಿ. ಒಂಟಿ, ಇತ್ಯಾದಿ. ಸಿದ್ಧಿಗಳಲ್ಲಿ ಬಳಕೆಯಲ್ಲಿರುವ ಆಭರಣವಾಚಕ ಪದಗಳು ಬಹುಮಟ್ಟಿಗೆ ಕನ್ನಡ ಭಾಷೆಯಿಂದ ಸ್ವೀಕೃತವಾದವುಗಳೇ.

ಹವ್ಯಕರ ಮನೆಗಳಲ್ಲಿ ಹೆಚ್ಚಾಗಿ ಸಿದ್ದಿಗಳು ಕೆಲಸ ಮಾಡುವದರಿಂದ ಯಲ್ಲಾಪುರದ ಸುತ್ತು ಮುತ್ತಲಿನ ಸಿದ್ದಿಗಳಲ್ಲಿ ಕನ್ನಡದ ಪ್ರಸಿದ್ಧ ಉಪಭಾಷೆಯಾದ ಹವ್ಯಕ ಕನ್ನಡದ ಅನೇಕ ಪದಗಳನ್ನು ಸಿದ್ದಿಗಳು ಹಾಗೇ ಸ್ವೀಕರಿಸಿದ್ದಾರೆ. ಇದರಿಂದ ಪ್ರಾಚೀನ ಕನ್ನಡದ ಅನೇಕರೂಪಗಳು ಇವರಲ್ಲಿಯೂ ಉಸಿರಾಡುತ್ತಿರುವದನ್ನು ನಾವು ಕಾಣಬಹುದು. ಸಿದ್ದಿಗಳ ಭಾಷೆಯ ವರ್ಣನಾತ್ಮಕ ವಿಶ್ಲೇಷಣೆಯನ್ನು ನಡೆಸುವಾಗ ಅವರಲ್ಲಿ ಕನ್ನಡದ ಉಪಭಾಷೆಗಳು, ಕೊಂಕಣಿ, ಅವರ ಪ್ರಾದೇಶಿಕ ಸಾಮಾಜಿಕ ಉಪಭಾಷೆಗಳು. ಪೋರ್ತುಗೀಸ್ ಹಾಗೂ, ನಿಗ್ರೋ, ಕೊಂಕಣಿ ಈ ಜನರ ಭಾಷೆಯ ಹಿನ್ನೆಲೆಯಲ್ಲಿ ಸ್ವತಂತ್ರವಾಗಿ ಅಧ್ಯಯನ ನಡೆಸುವದು ಹೆಚ್ಚು ಪ್ರಯೋಜನಕಾರಿಯಾದುದು.

ಮೆಕ್ಸಿಕನ್ ಗ್ರಾಮವೊಂದರಲ್ಲಿ ರೈತಾಪಿ ಬಂಡಾಯ

● ಎಚ್. ವಿ. ನಾಗೇಶ

೧. ಪೀಠಿಕೆ

ಮೆಕ್ಸಿಕೋ ಭಾರತದಂತೆಯೇ ಹಳ್ಳಿಗಳ ದೇಶ. ಶತಮಾನಗಳ ಕಾಲ ಮೆಕ್ಸಿಕನ್ನರು ಗ್ರಾಮ ಸಮುದಾಯಗಳಲ್ಲಿ ನೆಲೆಸಿದ್ದರು. ಈ ಶತಮಾನದ ಮೊದಲ ದಶಕದಲ್ಲಿ ಮೆಕ್ಸಿಕೋದ ಒಟ್ಟು ಜನಸಂಖ್ಯೆಯಲ್ಲಿ ಗ್ರಾಮೀಣ ಜನರ ಪ್ರಮಾಣ ನೂರಕ್ಕೆ ತೊಂಬತ್ತಕ್ಕಿಂತಲೂ ಹೆಚ್ಚಿತ್ತು. ಇಂಥ ಗ್ರಾಮಗಳಲ್ಲಿಯೇ ಮೆಕ್ಸಿಕನ್ನರ ಕ್ರಾಂತಿ ಪ್ರಾರಂಭವಾದುದು. ಅದಿನ್ನೂ ಪೂರ್ಣಗೊಂಡಂತಿಲ್ಲ. ಮೆಕ್ಸಿಕನ್ ಕ್ರಾಂತಿ ಮುಖ್ಯವಾಗಿ ರೈತಾಪಿ ಜನರ ಕ್ರಾಂತಿ. ಈ ಕ್ರಾಂತಿಯ ಗರ್ಭದಲ್ಲಿ ಮೆಕ್ಸಿಕನ್ನರ ಸಾಂಸ್ಕೃತಿಕ ಲಕ್ಷಣಗಳು, ಸ್ಪಾನಿಷ್ ಜನರು ಮಾಡಿದ ಶೋಷಣೆ, ರಾಜಕೀಯ ಪಕ್ಷಗಳ ಘೋಷಣೆಗಳು ವೈಯಕ್ತಿಕ ದ್ವೇಷ, ಅಂತರ್-ಕುಟುಂಬ ಕಲಹಗಳು, ಹೊಸ ವಿದ್ಯಾಭ್ಯಾಸದ ಪ್ರಭಾವ, ವಿವಿಧ ಆರ್ಥಿಕ ಹಾಗೂ ರಾಜಕೀಯ ವಿಚಾರಧಾರೆಗಳು ಹೀಗೆ ಹಲವಾರು ವಿಷಯಗಳು ಅಡಗಿವೆ. ಇಲ್ಲಿ ಮೊದಲಿಗೆ ಮೆಕ್ಸಿಕೋದ ಹಳ್ಳಿಗಳ ಸಾಮಾನ್ಯ ಚಿತ್ರವೊಂದನ್ನು ನೋಡಿ ಅನಂತರ ನೈಋತ್ಯ ಮೆಕ್ಸಿಕೋದ ಗ್ರಾಮವೊಂದರಲ್ಲಾದ ರೈತಾಪಿ ಕ್ರಾಂತಿಯ ಬಗೆಗೆ ನೋಡೋಣ. ಇದರಿಂದ ಎರಡು ಉದ್ದೇಶಗಳನ್ನು ನಮ್ಮ ಕಣ್ಣೆದುರಿಗೆ ಇಟ್ಟುಕೊಳ್ಳಬಹುದು. ಮೊದಲನೆಯದಾಗಿ ಮೆಕ್ಸಿಕೋ ಗ್ರಾಮವೊಂದರ ಕಿರುಪರಿಚಯ; ಎರಡನೆಯದಾಗಿ ಗ್ರಾಮೀಣ ಕ್ರಾಂತಿ ಅಥವಾ ಬಂಡಾಯಗಳ ಗುಣಲಕ್ಷಣ ಹಾಗೂ ಕಾರಣಗಳ ಸ್ಥೂಲ ಪರಿಚಯ.

೨. ಗ್ರಾಮೀಣ ಮೆಕ್ಸಿಕೋ

ಗ್ರಾಮೀಣ ಮೆಕ್ಸಿಕೋ ವಿಚಿತ್ರವಾದ ಜಗತ್ತು. ಅದು ಪೌರ್ವಾತ್ಯ ಜಗತ್ತನ್ನು ಹೋಲುವ ಪಾಶ್ಚಿಮಾತ್ಯ ನೆಲ. ಅಥವಾ ಇವೆರಡೂ ಜಗತ್ತುಗಳಿಗಿಂತ ಭಿನ್ನವಾದ ಬೇರೊಂದು ಜಗತ್ತು. ಸ್ಪೇನಿನವರು ಬರುವ ಮೊದಲು ಅಲ್ಲಿ ಇಂಡಿಯನ್ನರು ತಮ್ಮ ಚಿಕ್ಕ ಚಿಕ್ಕ ಪ್ಯೂಬ್ಲೊ ನೆಲೆಗಳಲ್ಲಿ ವಾಸವಾಗಿದ್ದರು. ಮೊದಮೊದಲು ಅಲೆಮಾರಿಗಳಾಗಿದ್ದ ಅವರು ಕೆಲ ಶತಮಾನಗಳ ಹಿಂದೆ ಶಾಶ್ವತ ನೆಲೆಗಳಾದ ಗ್ರಾಮಗಳನ್ನು ರೂಪಿಸಿದರು. ಭಾರತದ ಗ್ರಾಮಗಳನ್ನು ರೈತವಾರಿ, ಜಮೀನುದಾರಿ ಇತ್ಯಾದಿ ವರ್ಗೀಕರಿಸಿ ಹೇಳುವಂತೆ ಮೆಕ್ಸಿಕನ್ ಗ್ರಾಮಗಳನ್ನು ಭೂಸ್ವಾಮ್ಯದ ಆಧಾರದ ಮೇಲಿಂದ ಮೂರು ರೀತಿಯಲ್ಲಿ ವರ್ಗೀಕರಿಸಬಹುದು. ಮೊದಲನೆಯದಾಗಿ, ಅತ್ಯುತ್ತಮ ಭೂಮಿಯ ಮೇಲೆ ಪ್ಯೂಬ್ಲೋದ ಎಲ್ಲರ ಸ್ವಾಮ್ಯವಿದ್ದರೂ ಪ್ರತಿಯೊಂದು ಕುಟುಂಬವೂ ತನಗಾಗಿಯೇ ಮೀಸಲಿಟ್ಟ ಭೂಮಿಯನ್ನು ಉಪಯೋಗಿಸಬಹುದಾಗಿತ್ತು. ಎರಡನೆಯ ಪದ್ಧತಿ ಯೆಂದರೆ ಹುಲ್ಲುಗಾವಲು ಮತ್ತು ಕಾಡನ್ನು ಪ್ರತ್ಯೇಕ ಕುಟುಂಬಗಳಿಗೆ ಮೀಸಲಿಡದೆ ಅದನ್ನು ಅವಶ್ಯಬಿದ್ದಾಗ ಎಲ್ಲರೂ ಉಪಯೋಗಿಸಬಹುದಾಗಿತ್ತು. ನಂತರದ ಕಾಲದಲ್ಲಿ ಬಂದ ಮೂರನೆಯ ಪದ್ಧತಿಯ ಪ್ರಕಾರ ಕೃಷಿಭೂಮಿಯನ್ನು ತೋಟಪಟ್ಟಿಗಳಾಗಿ ವಿಭಜಿಸಿ ಅವುಗಳನ್ನು ಖಾಸಗಿ ಆಸ್ತಿಯನ್ನಾಗಿ ಹೊಂದಬಹುದಾಗಿತ್ತು. ಗ್ರಾಮಗಳ ಪೈಕಿ ಕೆಲವು ಮೇಲೆ ಹೇಳಿದ ಮೊದಲನೆಯ ಜಾತಿಗೆ ಸೇರಿದರೆ ಮತ್ತೆ ಕೆಲವು ಎರಡನೆಯ ವರ್ಗಕ್ಕೋ ಅಥವಾ ಮೂರನೆಯ ವರ್ಗಕ್ಕೋ ಸೇರಿರುತ್ತಿದ್ದವು. ಅಥವಾ ಈ ಮೂರೂ ಪದ್ಧತಿಗಳು ಜೊತೆಜೊತೆಗೆ ಇರುತ್ತಿದ್ದವು. ೧೮೫೭ರಲ್ಲಿ ಬಳಕೆಗೆ ಬಂದ ಸುಧಾರಣೆಗಳ ಪ್ರಕಾರ ಬರಬರುತ್ತ ಸಾಮೂಹಿಕ ಒಡೆತನವು ಮಾಯವಾಗಿ ಚಿಕ್ಕಪುಟ್ಟ ಖಾಸಗಿ ಆಸ್ತಿಗಳು ತಲೆಯೆತ್ತಿದವು. ರೈತಾಪಿ ಜನರು ಪ್ರತಿಭಟಿಸುತ್ತ ಇದ್ದಾಗಲೂ ಜಮೀನುದಾರರ ಪ್ರಭಾವ ಪ್ರಬಲಿಸುತ್ತ ಹೋಗಿ ನೂರಾರು ಹಳ್ಳಿಗಳ ಒಡೆತನ ಹೊಂದಿದ ದೊಡ್ಡ ಹಿಡುವಳಿದಾರರ ವರ್ಗ ನಿರ್ಮಾಣವಾಯಿತು. ಇವರಲ್ಲಿ ಹೆಚ್ಚಿನ ವರು ಹೊರಗಿನಿಂದ ಬಂದ ಸ್ಪೇನಿನವರು ಅಥವಾ ಇಂಡಿಯನ್ನರಲ್ಲದ ಸ್ಥಳೀಯರಿರು ತ್ತಿದ್ದರು. ಕೆಲವೊಮ್ಮೆ ಕಂಪೆನಿಗಳೂ ಭೂಮಾಲಕರಾದವು. ಸರಕಾರ, ಚರ್ಚ್ ಮತ್ತು ಅಧಿಕಾರಶಾಹಿ ವರ್ಗಗಳು ಮಾಲಿಕರಿಗೆ ಅನುಕೂಲವಾಗಿದ್ದವು. ಇಂಡಿಯನ್ನರ ಭೂಮಿಯನ್ನು ಸರಕಾರವು ಸಾರ್ವಜನಿಕ ಭೂಮಿಯೆಂದು ಘೋಷಿಸಿ ಶ್ರೀಮಂತರಾದ ಗಿರಾಕಿಗಳಿಗೆ ಮಾರುತ್ತಿತ್ತು. ೧೯೧೦ರ ಸುಮಾರಿಗೆ ಮೆಕ್ಸಿಕೋದ ನಾಲ್ಕನೇ ಒಂದು ಭಾಗ ದೊಡ್ಡ ಕಂಪೆನಿಗಳ ಕೈಯಲ್ಲಿತ್ತು. ಕೃಷಿಕ ಸಾಗುವಳಿದಾರರಾಗಿದ್ದ ಇಂಡಿಯನ್ ಜನಾಂಗ ಗಳು ಬರಬರುತ್ತ ಕೃಷಿಕಾರ್ಮಿಕರಾದರು. ಗ್ರಾಮೀಣ ಜನಸಂಖ್ಯೆಯ ೯೫%ರಷ್ಟು ಜನ ಭೂಹೀನರಾದರು. ಉಳಿದ ೫%ಜನರು ಬಡವರ ಶೋಷಣೆ ನಡೆಸಿದ್ದರು. ಸುಮಾರು ಒಂದೂವರೆ ಕೋಟಿಯಷ್ಟು ಜನರು ಹೆಚ್ಚುಕಡಿಮೆ ಜೀತದಾಳುಗಳ ಸ್ಥಿತಿಗೆ ಇಳಿದಿದ್ದರು. ಈ ಶೋಷಣೆಯ ಮಧ್ಯದಲ್ಲಿ ಇಂಡಿಯನ್ನರಲ್ಲದ, ಮಾನವ ಪ್ರೇಮದ ಗಂಧ

ಗಾಳಿಯೂ ಇರದ,ಹೊರಗಿನಿಂದ ಬಂದ ಸೊಕ್ಕಿನ ಜನರುಐಷಾರಾಮದಲ್ಲಿ ಮುಳುಗಿದ್ದರು. ಒಟ್ಟಿನಲ್ಲಿ ಕ್ರಾಂತಿಗೆ ಅನುಕೂಲವಾದ ದೇಶ-ಕಾಲ-ಪರಿಸ್ಥಿತಿಗಳಿದ್ದವು. ಇಂಥ ಸನ್ನಿವೇಶದಲ್ಲಿ 'ನಾರಂಜಾ'ದಂಥ ಸಾವಿರಾರು ಹಳ್ಳಿಗಳಲ್ಲಿ ಕ್ರಾಂತಿಯ ಕಿಡಿಗಳೆದ್ದರೆ ಆಶ್ಚರ್ಯವೇನಿಲ್ಲ.

೩. ನಾರಂಜಾ : ದಂಗೆಯೆದ್ದ ಮೆಕ್ಸಿಕನ್ ಗ್ರಾಮ

ಮೆಕ್ಸಿಕೋದ ದಕ್ಷಿಣ ತುದಿಗೆ ಅಥವಾ ನೈಋತ್ಯಭಾಗದಲ್ಲಿ ಹೆಚ್ಚು ದುರ್ಗಮ ವೆನಿಸುವ ಟರಾಸ್ಕನ್ ಪ್ರದೇಶವಿದೆ. ನಾರಂಜಾ ಅಲ್ಲಿಯ ಒಂದು ಗ್ರಾಮ. ಅದರ ಜನ ಸಂಖ್ಯೆ ಸುಮಾರು ಆರುನೂರರಿಂದ ಒಂಬತ್ತುನೂರು. ಕೃಷಿ, ಮೀನುಗಾರಿಕೆ, ಪಶುಪಾಲನೆ, ಚಾಪೆ ಮತ್ತು ಬುಟ್ಟಿಗಳನ್ನು ಹೆಣೆಯುವುದು, ನೂಲುತೆಗೆಯುವುದು ಅವರ ಉದ್ಯೋಗ. ನಾರಂಜಾದ ಜನರು ಇಂಡಿಯನ್ ಜನಾಂಗಕ್ಕೆ ಸೇರಿದವರು. ಅವರು ಜನಾಂಗಿಕ ಲಕ್ಷಣಗಳ ದೃಷ್ಟಿಯಿಂದ ನೆರೆಯ ಆಜಟೆಕ್ ಜನರಿಂದ ಭಿನ್ನವಾದವರು. ಎಲ್ಲ ಮೆಕ್ಸಿಕನ್ನ ರಂತೆ ಅವರು ಛಲಗಾರರು. ಸಾವಿನ ಅನಿವಾರ್ಯತೆ ಹಾಗೂ ದುರಂತವನ್ನು ಸದಾ ಸ್ಮರಿಸುವ ಮನೋವೃತ್ತಿಯವರು. ರಕ್ತಬಾಂಧವ್ಯಕ್ಕೆ ಅವರಲ್ಲಿ ಬೆಲೆ ಹೆಚ್ಚು. ಅವರು ಸ್ವಾಭಿಮಾನಿಗಳು; ಮಣ್ಣಿನ ಮಕ್ಕಳು. ಆ ಮಣ್ಣಿನಲ್ಲಿಯೇ ಹುಟ್ಟಿ, ಅಲ್ಲೇ ಮಲಗಿ, ಅಲ್ಲೇ ಉತ್ತುಬಿತ್ತಿ, ಅಲ್ಲೇ ಸಾಕಷ್ಟು ಬೆಳೆತೆಗೆಯುವುದೇ ಅವರ ಬದುಕಿನ ಮಹತ್ವಾ ಕಾಂಕ್ಷೆ. ಹಬ್ಬ ಹುಣ್ಣಿಮೆಗಳಲ್ಲಿ ಅವರು ಬಕಾಸುರನಂತೆ ಊಟಮಾಡುವುದನ್ನು ನೋಡಿ ದರೆ ಆಹಾರದ ಬಗ್ಗೆ ಆ ಜನರು ಹೇಗೆ ಕಾತುರಪಡುತ್ತಿದ್ದರೆಂದು ಸುಲಭವಾಗಿ ಊಹಿಸ ಬಹುದು. ಜನರು ಬಂಧು-ಬಳಗ-ಜನಾಂಗ ಹಾಗೂ ವಾಸ್ತವ ಅಥವಾ ಕಾಲ್ಪನಿಕ ರಕ್ತ ಸಂಬಂಧಗಳನ್ನು ಅತಿಯಾಗಿ ಗೌರವಿಸುತ್ತಿದ್ದರು. ಇಂಥ ನಾರಂಜಾ ಇತರ ಮೆಕ್ಸಿಕನ್ ಗ್ರಾಮಗಳಂತೆ ಈ ಶತಮಾನದ ಮೊದಲಿಗೆ ಪೂರ್ಣವಾಗಿ ಹೊರಗಿನವರ ಕಪಿಮುಷ್ಟಿ ಯಲ್ಲಿ ಬಂತು. ಆಗಲೇ ಅವರ ಜನಸಂಖ್ಯೆಯು ಅನೇಕ ಕಾರಣಗಳಿಂದಾಗಿ ಇಳಿಮುಖ ವಾಗುತ್ತ ನಡೆದಿತ್ತು. ಗಣಜಿಲೆ, ನಾಯಿಕೆಮ್ಮು, ಇನ್‌ಫ್ಲುಯೆಂಜಾ, ಮಲೇರಿಯಾ, ಮೈಲಿಬೇನೆ ಮುಖ್ಯ ಕಾರಣಗಳಾಗಿದ್ದವು. ತಲೆತಲಾಂತರಗಳಿಂದ ಅವರ ಒಡೆತನದಲ್ಲಿದ್ದ ಕೃಷಿ ಹಾಗೂ ಪಶುಪಾಲನೆಯ ಭೂಮಿ ಬೇರೆಯವರ ಪಾಲಾಗಿ ಹೋಗುತ್ತಿತ್ತು. ಹೀಗೆ ವಿವಿಧ ರೀತಿಯ ಶೋಷಣೆಗೆ ಒಳಗಾಗಿ ಅವರು ತತ್ತರಿಸಿ ಹೋಗಿದ್ದರು.

ಆದರೆ ಇಂಥ ಐತಿಹಾಸಿಕ ಹಾಗೂ ಆರ್ಥಿಕ ಸನ್ನಿವೇಶಗಳು ಜಗತ್ತಿನ ಬೇರೆಡೆಯೂ ಸಾಕಷ್ಟು ಕಂಡುಬರುತ್ತವೆ. ಅಲ್ಲೆಲ್ಲ ರೈತಾಪಿ ದಂಗೆಗಳು ಸಂಭವಿಸಲಿಲ್ಲ. ಅದು ನಾರಂಜಾದ ನೆಲದಲ್ಲಿಯೇ ಏಕಾಯಿತು ? ಇದನ್ನು ಅಧ್ಯಯನ ಮಾಡಿದವರು ಕೆಲವು ಮುಖ್ಯ ಕಾರಣಗಳನ್ನು ಕಂಡಿದ್ದಾರೆ. ನಾರಂಜಾ ಗ್ರಾಮದಲ್ಲಿ ಆದ ಕ್ರಾಂತಿಯು ಇಂಥ ಬೇರೆ ಎಲ್ಲ ಗ್ರಾಮಗಳಲ್ಲಿಯೂ ಆಗಬೇಕೆಂದೇನೂ ಇಲ್ಲ. ಆದರೂ ನಾರಂಜಾದ ಅನುಭವದಿಂದ ನಾವು ಪಾಠ ಕಲಿಯಬಹುದು. ಬೇರೆ ಕಡೆಗಳಲ್ಲಿ ಉಂಟಾದ ಸ್ಥಿತ್ಯಂತರ

ಗಳನ್ನು ನಾವು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ನಾರಾಂಜಾದ ರೈತಾಪಿ ಬಂಡಾಯದ ಕಾರಣಗಳಾವುವು?

ಹಿಂದೆ ಹೇಳಿದಂತೆ ನಾರಂಜಾದ ಗ್ರಾಮದ ಕೃಷಿಭೂಮಿಯ ಹೆಚ್ಚಿನ ಭಾಗ ಬೇರೆಯವರ ಪಾಲಾಯಿತು. ಈ ಹೊರಗಿನ ಜನರು ದೊಡ್ಡ ದೊಡ್ಡ ಹಿಡುವಳಿದಾರರಾದರು. ಸ್ಥಳೀಯ ರೈತಾಪಿ ಜನರು ನಿರ್ಗತಿಕರಾಗುತ್ತ ಬಂದು ಬೇರೆಯವರಲ್ಲಿ ಹೊಟ್ಟೆಪಾಡಿಗಾಗಿ ದುಡಿಯಬೇಕಾಯಿತು. ಪ್ಲಾಂಟೇಶನ್ನುಗಳಲ್ಲಿ ಕೂಲಿಯಾಳುಗಳೋ ಗುಲಾಮರೋ ಆಗಬೇಕಾಯಿತು. ಹೆಣ್ಣಾಳುಗಳ ಶೀಲಭಂಗದ ಪ್ರಕರಣಗಳೂ ಸಾಕಷ್ಟು ಕಂಡುಬಂದವು. ಹೊಸ ಶ್ರೀಮಂತರ ದರ್ಪವು ಗ್ರಾಮೀಣರ ಕಣ್ಣು ಕುಕ್ಕುವಂತಿತ್ತು. ಹೀಗೆ ತುಳಿಯಲ್ಪಟ್ಟ ಜನರ ಮೇಲೆ ಸ್ಥಳೀಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಆಗ ಅಸ್ತಿತ್ವದಲ್ಲಿ ಪ್ರಚಾರದಲ್ಲಿದ್ದ ರಾಜಕೀಯ ವಿಚಾರಗಳ ಛಾಪು ತಟ್ಟಿತು. ಅವರಲ್ಲಿ ಕೆಲವರು ಪ್ರತಿಭಟನೆ ತೋರಿಸುತ್ತಿದ್ದರೇನೋ ನಿಜ. ಆದರೆ ಸರಕಾರ, ಧನಿಕರು, ಹಾಗೂ ಅಧಿಕಾರಿಗಳು ಅವರನ್ನು ಸದೆಬಡಿಯುತ್ತಿದ್ದರು. ಕೆಲವು ಕುಟುಂಬಗಳು ಪರಸ್ಪರ ದ್ವೇಷವನ್ನು ಬೆಳೆಸಿಕೊಂಡವು. ಅಲ್ಲಲ್ಲಿ ಸ್ಥಳೀಯ ರಾಜಕೀಯ ಗುಂಪುಗಳು ತಲೆಯೆತ್ತಿಕೊಂಡವು. ರಕ್ತಪಾತದ ಹಲವು ಘಟನೆಗಳೂ ನಡೆದವು. ಈ ಮಧ್ಯೆ ೧೯೧೯ರಲ್ಲಿ ಅವರ ಜನಾಂಗಕ್ಕೆ ಸೇರಿದ ಒಬ್ಬ ಕ್ರಾಂತಿಕಾರ ಮುಂದಾಳುವಾದ ಜೋಕಿನ್ ದಲಾಕ್ರುಜ ಎಂಬವನ ಕೊಲೆಯಾಯಿತು. ಈ ಕೊಲೆಯ ಪ್ರಕರಣದ ಸುತ್ತ ಹಲವು ಹತ್ತು ಶೋಷಣೆಗೆ ಒಳಗಾದ ಎಲ್ಲರೂ ಒಟ್ಟಿಗೆ ಬಂದರು. ೧೯೨೧ರಲ್ಲಿ ಪ್ರ್ಯಿಮೋ ತಾಪಿಯಾ ಎಂಬ ಚತುರ ವಾಗ್ಮಿಯು ಜನರ ಮುಂದಾಳುವಾದ. ಅಮೇರಿಕದಲ್ಲಿ ಓದಿಬಂದು ಮನ್ನಣೆಗಳಿಸಿದ ಅವನು ನಾರಂಜಾದ ಮಣ್ಣಿನ ಮಗನಾಗಿದ್ದ. ಇದರಿಂದ ಗ್ರಾಮೀಣ ಜನರನ್ನು ಸಂಘಟಿಸುವುದು ಸುಲಭವಾಯಿತು. ಸ್ಥಳೀಯವಾಗಿಯೂ ಇಡಿಯ ಪ್ರಾಂತದ ಸುತ್ತಮುತ್ತಲೂ ಕ್ರಾಂತಿ ಹಬ್ಬಿತು. ಜಮೀನುದಾರರಿಗೆ ತಾಪಿಯಾ ಚಳ್ಳೇಗಾಯಿ ತಿನ್ನಿಸಿದ; ಮೂಗಿಕಾ ಎಂಬ ಗವರ್ನರನನ್ನು ಪದವಿಯಿಂದ ಕೆಳಗೆ ಇಳಿಸಿದ. ರೈತಾಪಿ ವರ್ಗದಿಂದ ಬಂದ ಹೊಸ ಗವರ್ನರನೊಬ್ಬನನ್ನು ಜನರು ಆರಿಸಿ ತಂದರು. ಸುಧಾರಣೆಯ ಹೊಸಗಾಳಿ ಬೀಸಿತು. ಇಷ್ಟಾಗುವ ಹೊತ್ತಿಗೆ ೧೯೨೬ರಲ್ಲಿ ಪ್ರ್ಯಿಮೋ ತಾಪಿಯಾನ ಕೊಲೆಯಾಯಿತು. ಮತ್ತೆ ಎಂದಿನಂತೆ ಸೇಡು, ಅಂತರ್ಯುದ್ಧ, ಕೊಲೆ, ವಿಚಾರಣೆಗಳ ವರ್ತುಲ ಪ್ರಾರಂಭವಾಯಿತು.

ಒಟ್ಟಿನಲ್ಲಿ ಇದು ಒಂದು ಮೆಕ್ಸಿಕೋ ಹಳ್ಳಿಯ ಕಥೆ. ಇಂಥ ಕಥೆ ವಿಯಟನಾಮ್, ಕೆಂಬೋಡಿಯಾ, ಥಾಯಲಂಡ್, ಇಂಡೋನೇಸಿಯಾ, ಬರ್ಮಾ ಹಾಗೂ ಇತರತ್ರ ನಡೆದೇ ಇದೆ. ಭಾರತದಲ್ಲಿಯೂ ಚದುರಿದಂತೆ ಅಲ್ಲಲ್ಲಿ ಇಂಥ ಬಂಡಾಯಗಳು ಆಗಿವೆ; ನಾಳೆಯೂ ಆಗಬಹುದು. ಬಿಹಾರ, ಬಂಗಾಲ, ತೆಲಂಗಾಣ ಪ್ರದೇಶಗಳಲ್ಲಿ ಆದ

ಬಂಡಾಯಗಳು ಹೆಚ್ಚುಕಡಿಮೆ ನಾರಂಜಾದಲ್ಲಿ ಸಂಭವಿಸಿದ ಬಂಡಾಯಗಳಂತೆಯೇ ಇವೆ. ಇಂಥ ಗ್ರಾಮೀಣ ಬಂಡಾಯಗಳ ಹಿಂದೆ ಆರ್ಥಿಕ ಕಾರಣಗಳು, ರಾಜಕೀಯ ವಿಚಾರಧಾರೆಗಳು. ಸ್ಥಳೀಯ ಸಂಘಟನೆಗಳು. ವಾಗ್ಮಿಗಳೂ ಸಂಘಟನಾ ಚತುರರೂ ಆದ ಮುಂದಾಳುಗಳು. ರಕ್ತಸಂಬಂಧ ಕಳ್ಳುಬಳ್ಳಿಗಳು. ಹಿಂಸೆ ರಕ್ತಪಾತದ ಘಟನೆಗಳು, ಆಡಳಿತ ವ್ಯವಸ್ಥೆಯ ಹದಗೇಡಿತನ ಇವೆಲ್ಲವೂ ಅದಾವುದೋ ಪ್ರಮಾಣಲ್ಲಿ ಸಮ್ಮಿಳಿತವಾಗಿರುತ್ತವೆ. ಇದನ್ನೇ ನಾರಂಜಾ ಗ್ರಾಮದ ಅಧ್ಯಯನ ನಮಗೆ ತಿಳಿಸಿಕೊಡುತ್ತದೆ.

(ಪಾಲ್ ಫ್ರೆಡರಿಕ್ ಎಂಬವರು ಬರೆದ 'ಎಗ್ರಾರಿಯನ್ ರಿವೋಲ್ಟ್ ಇನ್ ಎ ಮೆಕ್ಸಿಕನ್ ವಿಲೇಜ್' ಎಂಬ ಅಧ್ಯಯನದಿಂದ ಇಲ್ಲಿನ ಹೆಚ್ಚು ಸಂಗತಿಗಳನ್ನು ಎತ್ತಿಕೊಳ್ಳಲಾಗಿದೆ.)

ಸೋಮನಾಥಪುರದ ಕೇಶವ ದೇವಾಲಯ, ಪ್ರಾಕಾರ ದೇವತೆಗಳು: ಒಂದು ವಿವೇಚನೆ

● ವಿದ್ಯಾ ಮುರಳಿಹಳ್ಳಿ

ಸೋಮನಾಥಪುರದ (ಮೈಸೂರು ಜಿಲ್ಲೆ ತಿರುಮಕೂಡಲು ನರಸೀಪುರ ತಾಲೂಕು) ವಿಶ್ವವಿಖ್ಯಾತ ಕೇಶವ ದೇವಾಲಯವು ಕ್ರಿ. ಶ. ೧೨೬೮ರಲ್ಲಿ ಹೊಯ್ಸಳ ದೊರೆ ಮುಮ್ಮಡಿ ನರಸಿಂಹನ ಮೆಚ್ಚಿನ ಸೋಮನಾಥ ದಂಡನಾಯಕನಿಂದ ಕಟ್ಟಲ್ಪಟ್ಟಿತು.[೧] ಇದು ತ್ರಿಕೂಟ ಮಾದರಿಯ ವಿಷ್ಣು ದೇವಾಲಯವಾಗಿದ್ದು ಕೇಶವ ಜನಾರ್ದನ ಹಾಗೂ ವೇಣುಗೋಪಾಲರ ಮೂರ್ತಿಗಳನ್ನು ಮುಖ್ಯ ಗರ್ಭಗೃಹಗಳಲ್ಲಿ ಹೊಂದಿದೆ. ದೇವಾಲಯಕ್ಕೆ ಸುತ್ತಲೂ ವಿಶಾಲವಾದ ಪ್ರಾಕಾರವಿದ್ದು ಅದರಲ್ಲಿ ಅರವತ್ತುನಾಲ್ಕು ಚಿಕ್ಕ ದೇವತಾಗೃಹಗಳಿವೆ. ಅವೆಲ್ಲ ಈಗ ಬರಿದಾಗಿವೆಯಾದರೂ ಈ ದೇವಾಲಯವು ಊರ್ಜಿತಾವಸ್ಥೆಯಲ್ಲಿದ್ದಾಗ ವೈಷ್ಣವ ಹಾಗೂ ಶೈವ ದೇವತಾಖ್ಯಾನದ ವಿವಿಧ ದೇವರುಗಳ ವಿಗ್ರಹಗಳಿಂದ ಅಲಂಕೃತವಾಗಿದ್ದವೆಂದು ಪರಿಸರದ ಹಾಗೂ ಸೋಮನಾಥಪುರದ ಶಾಸನಗಳಿಂದ ತಿಳಿದು ಬರುತ್ತದೆ. ಈ ಶಾಸನಗಳಲ್ಲಿ ದೇವತೆಗಳ ವಿಗ್ರಹಗಳನ್ನು ಹೆಸರಿಸಿರುವ ರೀತಿ ಬರೀ ಸೂಚ್ಯವಾಗಿರುವದರಿಂದ ಆ ದೇವತೆಗಳ ಪೂರ್ತಿಯಾದ ವಿವರ ದೊರಕುವದಿಲ್ಲ. ಹೀಗಾಗಿ ಈ ದೇವತೆಗಳಾವವೆಂಬ ಸಮಸ್ಯೆ ತಲೆದೋರುತ್ತದೆ.

೧. ಶ್ರೀಕಂಠಶಾಸ್ತ್ರಿ, ಮೈಸೂರ, ೧೯೬೫ "ಹೊಯ್ಸಳ ವಾಸ್ತು ಶಿಲ್ಪ" ಪು. ೪೯-೫೮. ಮೈಸೂರ ಆರ್ಕಿಯಾಲಾಜಿಕಲ್ ರಿಪೋರ್ಟ್, ೧೯೦೯ ಪು. ೧೬-೩೮, ಆರ್. ನರಸಿಂಹಾಚಾರ್ಯ, ೧೯೧೭ "ದಿ ಕೇಶವ ಟೆಂಪಲ್ ಎಟ್ ಸೋಮನಾಥಪುರ."

ಪ್ರಸ್ತುತ ಪ್ರಬಂಧದಲ್ಲಿ ಇವೇ ಅರವತ್ತುನಾಲ್ಕು ದೇವತೆಗಳ ವಿಗ್ರಹಗಳಾವವೆಂಬ ವಿಷಯವಾಗಿ ಶಾಸನ ಪುರಾಣ ಹಾಗೂ ಸಮಕಾಲೀನ ಶಿಲ್ಪಗಳ ಆಧಾರದಿಂದ ಚರ್ಚಿಸಲಾಗಿದೆ.

ಹರಿಹರದ ಶಾಸನದಲ್ಲಿ[2] ಶಕಕಾಲ ೧೧೯೧ನೆಯ ವಿಭವ ಸಂವತ್ಸರ ವೈಶಾಖ ಶುದ್ಧ ಪಂಚಮಿ ಸೋಮವಾರ (ಕ್ರಿ. ಶ. ೧೨೬೮ರ ಏಪ್ರಿಲ್ ೮)ರಂದು ಸೋಮನಾಥ ದಂಡ ನಾಯಕನು ವಿದ್ಯಾನಿಧಿ ಪ್ರಸನ್ನ ಸೋಮನಾಥಪುರದಲ್ಲಿ ಕಟ್ಟಿಸಿದ ಶೈವ ಹಾಗೂ ವೈಷ್ಣವ ಪಂಥಗಳ ಗುಡಿಗಳ ವರ್ಣನೆ ಇದ್ದು ಆ ಶುಭದಿನದಲ್ಲಿ ಆತನು ಇಲ್ಲಿಯ ಧಾರ್ಮಿಕ ಕಾರ್ಯಕಲಾಪಗಳಿಗೆ ಬಿಟ್ಟು ಕೊಟ್ಟ ದಾನಗಳ ಪ್ರಸ್ತಾಪವಿದೆ. ಹರಿಹರದಲ್ಲಿ ಹರಿಹರೇಶ್ವರ ದೇವಾಲಯದ ಪೂರ್ವದ್ವಾರದಲ್ಲಿ ಐದು ಅಂತಸ್ತಿನ ಮಹಾದ್ವಾರವನ್ನು ರಚಿಸಿ ಅದಕ್ಕೆ ಐದು ಸುವರ್ಣ ಕಲಶಗಳನ್ನು ದಾನಕೊಟ್ಟಂತೆ ತಿಳಿಸುತ್ತದೆ. ಈ ಶಾಸನದಲ್ಲಿ ಕೇಶವ ದೇವಾಲಯದ ವರ್ಣನೆಯ ಜೊತೆಗೆ ಅಲ್ಲಿಯ ಪ್ರಾಕಾರದ ದೇವತಾಗೃಹಗಳಲ್ಲಿಯ ದೇವತೆಗಳನ್ನು ಸೂಚ್ಯವಾಗಿ ಉಲ್ಲೇಖಿಸಲಾಗಿದೆ.

ಸೋಮನಾಥಪುರದ ಶಾಸನವು[3] ಶಕಕಾಲ ೧೧೯೨ರ ಶುಕ್ಲ ಸಂವತ್ಸರ ಆಷಾಢ ಶು. ೧೨ ಬುಧವಾರ (ಕ್ರಿ. ಶ. ೧೨೬೯ರ ಜೂನ ೧೨ ರಂದು ಬರೆಯಲ್ಪಟ್ಟಿದ್ದು ಆ ಸಂದರ್ಭದಲ್ಲಿ ಹೊಯ್ಸಳದೊರೆ ಮುಮ್ಮಡಿ ನರಸಿಂಹನು ಈ ಪ್ರಾಕಾರದ ದೇವತೆಗಳ ಹಾಗೂ ಕೇಶವ, ಜನಾರ್ದನ, ವೇಣುಗೋಪಾಲರ ಪೂಜೆ ಪುನಸ್ಕಾರ, ಹಬ್ಬ ಹರಿದಿನಗಳಿಗಾಗಿ ನಿತ್ಯ ಕಾರ್ಯಕಲಾಪಗಳಿಗಾಗಿ ಕೊಟ್ಟ ದಾನಗಳ ವರ್ಣನೆ ಇದೆ.

ಈ ಶಾಸನಗಳನ್ನು ಒಂದಕ್ಕೊಂದು ಪರಿಶೀಲಿಸಿ ನೋಡಿದಾಗ ಮೇಲ್ಕಾಣಿಸಿದ ಪ್ರಾಕಾರದ ದೇವತೆಗಳು ಇಂತಿವೆ.[4] ಯಾದಿ(ಅ)-೧. ಮತ್ಸ್ಯ ಮತ್ತು ವಿಷ್ಣುವಿನ ೯ ಅವತಾರಗಳು, ೨. ಮುರಹರ ಹಂಸನಾರಾಯಣ ಹಾಗೂ ಉಳಿದ ದೇವತೆಗಳು ೧೨, ೩. ಕೇಶವಾದಿ ದೇವರು ೧೨, ೪. ಸಂಕರ್ಷಣಾದಿ ದೇವರು ೧೨, ೫. ವಿಶ್ವಕ್ಸೇನ ಹಾಗೂ ಇತರ ದೇವತೆಗಳು ೪, ೬. ಬ್ರಹ್ಮ ಹಾಗೂ ಇತರ ದೇವತೆಗಳು, ೬. ೭. ಇಂದ್ರ ಮತ್ತು ಇತರ ದೇವತೆಗಳು ೮. ಈ ದೇವತೆಗಳ ಸಂಖ್ಯೆಯು ಒಟ್ಟು ೬೪ ಕ್ಕೆ ಸಮವಾದರೂ ಈ ಯಾದಿಯಲ್ಲಿ ಬರುವ ದೇವತೆಗಳು ಕೆಳಗೆ ಕಾಣಿಸಿದ ಯಾವ ಯಾದಿಗೂ ಸರಿ ಹೊಂದುವದಿಲ್ಲ.

ಮೇಲೆ ಹೆಸರಿಸಿದ ಹರಿಹರದ ಶಾಸನವು ಎರಡು ಭಾಷೆಗಳಲ್ಲಿದ್ದು ಇವೇ ದೇವತೆಗಳನ್ನು ಸಂಸ್ಕೃತ ಹಾಗೂ ಕನ್ನಡ ಅವತರಣಿಕೆಗಳಲ್ಲಿ ಹೀಗೆ ವಿವರಿಸುತ್ತದೆ.

---

೨. ಎ. ಕ. ಸಂಪುಟ. ೧೧. ದ. ಜಿ. ೨೫.

೩. ಎ. ಕ. ಸಂಪುಟ ೩. ಟಿ. ಎನ್. ೯೭.

೪. ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ಸ್, ೧೯೩೭. ಪು.

ಸಂಸ್ಕೃತ ಅವರಣಿಕೆಯಲ್ಲಿ ಬರುವ ದೇವತೆಗಳು ಇಂತಿವೆ. ಯಾದಿ (ಬ) – ೧. ಮತ್ಸ್ಯ ಹಾಗೂ ಇತರ ದಶಾವತಾರದ ದೇವತೆಗಳು, ೨. ಮುರಹರ ನಾರಾಯಣಾದಿ ದೇವರು ೧೨, ೩. ಕೇಶವ ಹಾಗೂ ಸಂಕರ್ಷಣಾದಿ ದೇವರು ೨೪, ೪. ವಿಶ್ವಕ್ಸೇನ ಹಾಗೂ ಮತ್ತಿತರವು ಅನೇಕ, ೫. ಪದ್ಮಾಸನ. ಇಂದ್ರ ಮತ್ತು ಗಿರಾ ಅಥವಾ ಸರಸ್ವತಿ.

ಮತ್ಸ್ಯಾದ್ಯಾದಶ ಮೂರ್ತಯೋ ಮುರಹರ ನಾರಾಯಣಾದ್ವಾದಶ ಪ್ರಾಕಾರೇಷು ಚ ಕೇಶವಾಲಯ ಇತಃ ಸಂಕರ್ಷಣಾದ್ಯಾಸ್ತಥಾ ವಿಶ್ವಕ್ಸೇನ ಮುಖಾಸ್ತಥಾ ಚ ಬಹವಃ, ಪದ್ಮಾಸನೇಂದ್ರಾದಿ ದೇವಾಃ ಸೋಮಪುರೇ ಸಹಾಪಿಚ ಗಿರಾಯೇನ ಪ್ರತಿಷ್ಠಾಪಿತಾಃ !...

ಇದೇ ಶಾಸನದ ಕನ್ನಡ ಅವತರಣಿಕೆಯಲ್ಲಿ ಸೂಚಿಸಲ್ಪಟ್ಟ ದೇವತೆಗಳ ಹೆಸರುಗಳು ಹೀಗಿವೆ. ಯಾದಿ (ಕ). ೧. ಮತ್ಸ್ಯ ಹಾಗೂ ಇತರ ದಶಾವತಾರದ ದೇವತೆಗಳು ೧೦, ೨. ಕೇಶವಾದಿ ದೇವರು ೧೨, ೩. ಸಂಕರ್ಷಣಾದಿ ದೇವರು ೧೨, ೪. ಕ್ಷೇಮ, ಐಶ್ವರ್ಯ, ವರಗಳನ್ನು ಕೊಡುವಂಥ ಮುರಹರ ನಾರಾಯಣಾದಿ ದೇವರು ೧೨ ೫. ೩೪ ದೇವತೆಗಳಲ್ಲಿ ೧೮ ಕೃಷ್ಣ ಹಾಗೂ ಇತರ ದೇವತೆಗಳು. ೬. ಗಣಪತಿ, ಭೈರವ, ಭಾಸ್ಕರ, ವಿಶ್ವಕ್ಸೇನ, ಹಾಗೂ ದುರ್ಗಾ. ಇಲ್ಲಿ ಬರುವ ದೇವತೆಗಳ ಮೊತ್ತ ೭೪ ಎಂದು ಇದೇ ಶಾಸನ ತಿಳಿಯಪಡಿಸುತ್ತದೆ. ಆದರೆ ಅದು ೭೩ ಕ್ಕೆ ಸಮವಾಗುತ್ತದೆ.

...“ಶ್ರೀಮತ್ಸ್ಯಾದಿ ದಶಾವತಾರವನಿತುಂ ಶ್ರೀ ಕೇಶವಾಖ್ಯಾದಿಯುಂ
ಶ್ರೀಮನ್ ಮಂಗಳ ಮೂರ್ತ್ತಿ ಸಂಕರ್ಷಣಾದ್ಯಂ ಬಾರಹಂ ನಾಮದಿಂ
ಕ್ಷೇಮೈಶ್ವರ್ಯ್ಯ ವರ ಪ್ರದಂಗಳೆನಿಪಾ ನಾರಾಯಣಾಖ್ಯಾಗಳ್ಮಾಮುಂ
ವಾರ್ಧಿಗುಣಾಂಕ ಸಂಖ್ಯೆಯಿವಜೊಳು ಕೃಷ್ಣಾದಿಯಷ್ಟಾದಶಂ ।
ವರಗಣಪಂ ಭೈರವ ಭಾಸ್ಕರ ವಿಷ್ವಕ್ಸೇನ ದುರ್ಗ್ಗಿ ಯಿಂತೀದೇವಪ್ಪ-
ರಿಗಣಿತ ಚತುಸ್ಸಪ್ತತಿಪುರ ಮಧ್ಯದೆ ವಿಷ್ಣುಭವನದೊಳು ರಂಜಿಸುಗುಂ”...

ಸೋಮನಾಥಪುರ ಶಾಸನದಲ್ಲಿ ಇವೇ ದೇವತೆಗಳ ವಿವರ ಹೀಗಿವೆ. ಯಾದಿ (ಪ). ೧. ಬ್ರಹ್ಮಾದಿ ದೇವತೆಗಳು. ೬ ೨. ಕೇಶವಾದಿ ದೇವರು-೧೨. ೩. ಹಂಸನಾರಾಯಣಾದಿ ದೇವರು ೧೨. ೪. ಮತ್ಸ್ಯಾದಿ ದೇವರು ೧೦. ೫. ಸಂಕರ್ಷಣಾದಿ ದೇವರು ೧೨. ೬. ೧೨ ಕೃಷ್ಣಾವತಾರದ ದೇವತೆಗಳು.

“ಆ ಪ್ರಾಕಾರದ ಬ್ರಹ್ಮಾದಿ ದೇವರು ಆಱು. ಕೇಶವಾದಿ ದೇವರು ಹನ್ನೆರಡು, ಹಂಸನಾರಾಯಣಾದಿ ದೇವರು ಹನ್ನೆರಡು ಮತ್ಸ್ಯಾದಿ ದೇವರು ಹತ್ತು, ಸಂಘರ್ಷಣಾದಿ ದೇವರು ಹನ್ನೆರಡು ಕೃಷ್ಣಾವತಾರದ ದೇವರು ಹನ್ನೆರಡು.”

ಈ ಮೇಲಿನ ವಿವರಗಳನ್ನು ಪರಿಶೀಲಿಸಿ ನೋಡಿದಾಗ (ಅ) ಯಾದಿಯಲ್ಲಿ ಬರುವ ದೇವತೆಗಳು ಈ ಕೆಳಗಿನ ಕಾರಣಗಳಿಗಾಗಿ ಸಮರ್ಪಕವಾಗಿ ತೋರುವದಿಲ್ಲ,

ಮೊದಲನೆಯದಾಗಿ ಇಲ್ಲಿ ಹೇಳಿದ ಇಂದ್ರ ಹಾಗೂ ಇತರ ದೇವತೆಗಳು ೨೮ ಮತ್ತೆಯಾವ ಯಾದಿಯಲ್ಲೂ ಕಾಣಿಸಿಕೊಳ್ಳುವದಿಲ್ಲ ಹಾಗೂ ಇಲ್ಲಿ ಕೃಷ್ಣಾವತಾರದ ದೇವತೆಗಳನ್ನು ಹೆಸರಿಸಿಲ್ಲ. ಹೀಗಾಗಿ ಇಲ್ಲಿ ಹೆಸರಿಸಿರುವ ದೇವತೆಗಳ ಮೊತ್ತ ೬೪ ಪ್ರಾಕಾರದ ದೇವತಾಗೃಹಗಳಿಗೆ ಸರಿಹೊಂದಿದರೂ ಇವನ್ನು ಪ್ರಮಾಣಪೂರ್ವಕವಾದುದೆಂದು ಒಪ್ಪಲು ಸಾಧ್ಯವಾಗುವದಿಲ್ಲ. ಇನ್ನು ಎರಡನೆಯ ಹಾಗೂ ಮೂರನೆಯ ಯಾದಿಯಲ್ಲಿ ಬರುವ ದೇವತೆಗಳನ್ನು ೪ನೆಯ ಯಾದಿಯಲ್ಲಿರುವ ದೇವತೆಗಳಿಗೆ ಹೋಲಿಸಿ ನೋಡಿದಾಗ ಇಲ್ಲಿ ೯ ಅಧಿಕ ದೇವತೆಗಳು ಕಂಡು ಬರುತ್ತಾರೆ. ಇವುಗಳಲ್ಲಿ ದುರ್ಗಾ ಹಾಗೂ ಗಣೇಶ ಈಗಿನ ಮುಖ್ಯ ಗುಡಿಗಳ ನವರಂಗದ ದೇವಕೋಷ್ಠಗಳಲ್ಲಿರಬಹುದಾದ ಸಾಧ್ಯತೆ ಇರುವದರಿಂದ ಭೈರವ, ಭಾಸ್ಕರ. ಹಾಗೂ ವಿಶ್ವಕ್ಸೇನರ ವಿಗ್ರಹಗಳೂ ಇಲ್ಲಿಯ ದೇವಕೋಷ್ಠಗಳಲ್ಲಿರಬಹುದೆಂದು ಹೇಳಬಹುದು. ಇನ್ನುಳಿದ ೪ ದೇವತೆಗಳು ಉಪದಿಕ್ಪಾಲಕರಾಗಿರುವ ಸಾಧ್ಯತೆ ಇದೆ. (ವಾಯು. ಈಶಾನ್ಯ. ಅಗ್ನಿ ಹಾಗೂ ನಿಋತಿ). ಆದರೆ ಅವರುಗಳಿಗೆಲ್ಲ ಪ್ರತ್ಯೇಕವಾದ ದೇವತಾಗ್ರಹಗಳಿದ್ದುವೆಂದು ಹೇಳುವದು ಸಧ್ಯಕ್ಕೆ ಕಷ್ಟತರ. ಯಾಕೆಂದರೆ ಇಲ್ಲಿ ಬರುವ ಒಟ್ಟು ದೇವತಾಗ್ರಹಗಳು ಕೇವಲ ೬೪. ಇವುಗಳನ್ನು ಸೇರಿಸಿದಾಗ ಮತ್ತೆ ನಾಲ್ಕು ದೇವತಾಗ್ರಹಗಳು ಹೆಚ್ಚಾಗುತ್ತವೆ. ಆದುದರಿಂದ ೪ನೆಯ ಯಾದಿಯಲ್ಲಿ ಬರುವ ದೇವತೆಗಳನ್ನು ಈ ಕೆಳಗಿನ ಕಾರಣಗಳಿಗಾಗಿ ಹೆಚ್ಚು ಸಮಂಜಸವೆಂದು ಹಾಗೂ ಪ್ರಮಾಣಪೂರ್ಣವೆಂದು ಹೇಳಲು ಸಾಧ್ಯ. ಮೊದಲನೆಯದಾಗಿ ಇಲ್ಲಿ ಮೇಲ್ಕಾಣಿಸಿದ ಹೆಚ್ಚಿನ ೯ ದೇವತೆಗಳನ್ನು ಬಿಟ್ಟು ಮತ್ತುಳಿದ ಯಾವ ಯಾದಿಯಲ್ಲಿಯ ದೇವತೆಗಳನ್ನು ಅಲಕ್ಷಿಸಿಲ್ಲ. ಎರಡನೆಯದಾಗಿ ಈ ಶಾಸನವು ಪ್ರಸ್ತುತ ಕೇಶವ ದೇವಾಲಯದ ಆವರಣದಲ್ಲಿದ್ದುದರಿಂದ ಇಲ್ಲಿಯ ದೇವತೆಗಳ ಬಗೆಗೆ ಹೆಚ್ಚು ಸರಿಯಾದ ಮಾಹಿತಿಯನ್ನೊದಗಿಸುತ್ತದೆಂದು ಹೇಳಬೇಕಾಗುತ್ತದೆ. ಹಾಗೆಯೇ ಎರಡನೆಯ ಯಾದಿಯಲ್ಲಿ ಬರುವ ದೇವತೆಗಳನ್ನು ನಿರ್ಲಕ್ಷಿಸುವದಸಾಧ್ಯ. ಏಕೆಂದರೆ ಇಲ್ಲಿ ಬ್ರಹ್ಮಾದಿ ದೇವರು ಆರರಲ್ಲಿ ಬರುವ ಕೆಲವರ ಹೆಸರುಗಳನ್ನು ಕಾಣುತ್ತೇವೆ. ಇನ್ನು ಪ್ರಸ್ತುತ ಶಾಸನದಲ್ಲಿ ಈ ದೇವತೆಗಳನ್ನು ಹೆಸರಿಸಿರುವ ರೀತಿಯೂ ಅರ್ಥಪೂರ್ಣವಾದುದೆಂದು ಗಮನಿಸಬೇಕಾದುದವಶ್ಯ. ಉದಾಹರಣೆಗೆ ಮತ್ಸ್ಯಾದಿ ದೇವರು ಹತ್ತು, ಕೇಶವಾದಿ ದೇವರು ಹನ್ನೆರಡು. ಇವುಗಳ ಅರ್ಥ ಸ್ಪಷ್ಟವಾಗಿಯೇ ಇದೆ. ಇದೇ ರೀತಿ ಹಂಸನಾರಾಯಣರಾದ ೧೨ ಹಾಗೂ ಕೃಷ್ಣಾವತಾರದ ೧೨ ಇತರ ದೇವತೆಗಳೂ ಸೂಕ್ಷ್ಮವಾದ ತಾತ್ಪರ್ಯದಿಂದ ಕೂಡಿವೆ ಎಂದು ಹೇಳಬೇಕಾಗುತ್ತದೆ. ಇದಿಷ್ಟು ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ಈ ಅರವತ್ತು ನಾಲ್ಕು ದೇವತೆಗಳು ಯಾರೆಂಬುದರ ಬಗ್ಗೆ ಚರ್ಚಿಸುವಾ.

ಮತ್ಸ್ಯಾದಿ ದೇವತೆಗಳು ಹತ್ತು ಕೂಡಲೇ ವಿಷ್ಣುವಿನ ದಶಾವತಾರದ ಮೂರ್ತಿಗಳನ್ನು ನೆನಪಿಗೆ ತರುತ್ತವೆ ಮಹಾಭಾರತದಲ್ಲಿ[೫] ನಾರಾಯಣನ ಅವತಾರಗಳನ್ನು

೫. ಹಾಝ್ರಾ, ೧೯೪೦, ಡೆಕ್ಕಾ "ಸ್ಟಡೀಸ್ ಇನ್ ಪುರಾಣಿಕ್ ರಿಚುವಲ್ಸ್", ಪು. ೮೪

ಈ ರೀತಿಯಾಗಿ ಹೇಳಿದ್ದಾರೆ. ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ರಾಮದಾಶರಥಿ, ಸಾತ್ವತ ಮತ್ತು ಕಲ್ಕಿ. ಇಲ್ಲಿ ರಾಮ ಹಾಗೂ ಕೃಷ್ಣರಿಗೆ ರಾಮದಾಶರಥಿ ಹಾಗೂ ಸಾತ್ವತ ಎಂದು ಕರೆದು ಬುದ್ಧನನ್ನು ದಶಾವತಾರಗಳಲ್ಲಿ ಒಂದಾಗಿ ಪರಿಗಣಿಸದಿದ್ದುದು ಗಮನಾರ್ಹ. ಹರಿವಂಶದಲ್ಲಿ[೬] ಪರಶುರಾಮನಿಗೆ ಜಮದಗ್ನ್ಯ ಎಂದು ಕರೆದಿದ್ದಾರೆ. ಬ್ರಹ್ಮ ಪುರಾಣ[೭]ದಲ್ಲಿ ಕೃಷ್ಣನನ್ನು ಮಾಥುರ ಎಂದು ಕರೆದಿದ್ದಾರೆ.ಪದ್ಮತಂತ್ರದಲ್ಲಿ[೮] ಚತುರ್ವ್ಯೂಹಗಳಿಗನುಗುಣವಾಗಿ ದಶಾವತಾರಗಳನ್ನು ಹೀಗೆ ವಿವರಿಸಿರುವರು. ವ್ಯೂಹ ವಾಸುದೇವನಿಂದ ಮತ್ಸ್ಯ, ಕೂರ್ಮ, ವರಾಹ: ವ್ಯೂಹ ಸಂಕರ್ಷಣನಿಂದ-ಪರಶುರಾಮ; ವ್ಯೂಹ ಪ್ರದ್ಯುಮ್ನನಿಂದ-ಬಲರಾಮ ಹಾಗೂವ್ಯೂಹ ಅನಿರುದ್ಧನಿಂದ ಕೃಷ್ಣ ಹಾಗೂ ಕಲ್ಕಿ. ಗರುಡ ಪುರಾಣದಲ್ಲಿ[೯] ಕೂರ್ಮ, ವರಾಹ, ನರಸಿಂಹ, ರಾಮ, ತ್ರಿವಿಕ್ರಮ, ಬುದ್ಧ ಕಲ್ಕಿ ಹಾಗೂ ಇನ್ನೂ ಅನೇಕ ವಿಷ್ಣುವಿನಮೂರ್ತಿಗಳ ವರ್ಣನೆ ಇದೆ. ವಿಶ್ವಕ್ಸೇನಸಂಹಿತೆಯಲ್ಲಿ[೧೦] ಬುದ್ಧ. ಪರಶುರಾಮರನ್ನು ಉಪಅವತಾರಗಳೆಂದು ಪರಿಗಣಿಸುತ್ತಾರೆ.ಅಹಿರ್‌ಬುಧ್ನ್ಯ ಸಂಹಿತೆಯಲ್ಲಿ[೧೧] ಮತ್ಸ್ಯನನ್ನು ಏಕಶೃಂಗತನು ಎಂದೂ ೨೮ ಕೂರ್ಮನನ್ನು ಕಮ್ಮಠೇಶ್ವರನೆಂದೂ ಕರೆದು ಉಳಿದ ೩೭ ವಿಷ್ಣುವಿನ ಅವತಾರಗಳ ವರ್ಣನೆಯು ಕಾಣಬರುತ್ತದೆ. ಭಾಗವತ ಪುರಾಣದಲ್ಲಿ[೧೨] ಬುದ್ಧ ಹಾಗೂ ಕಲ್ಕಿಯರ ಪ್ರಸ್ತಾಪವಿದೆ. ಕ್ರಿ. ಶ, ಏಳನೆಯ ಶತಮಾನಕ್ಕೆ ಸೇರಿದ ಒಂದು ಪಲ್ಲವರ ಶಾಸನದಲ್ಲಿ[೧೩] ದಶಾವತಾರದ ವಿಷ್ಣುವಿನ ಮೂರ್ತಿಗಳನ್ನು ವರ್ಣಿಸುವ ಪದ್ಯ ಹೀಗಿದೆ.

> "ಮತ್ಸ್ಯ ಕೂರ್ಮೋಃವರಾಹಶ್ಚ ನಾರಸಿಂಹೋಃಥವಾಮನಃ ।
> ರಾಮೋಃ ರಾಮಶ್ಚ ರಾಮಾಃ ಬುಧಃ ಕಲ್ಕಿ ಚ ತೇ ದಶಃ ।"

ಕರ್ನಾಟಕದಲ್ಲಿ ಕ್ರಿ. ಶ. ೯ನೆಯ ಶತಮಾನದ ಹೊತ್ತಿಗಾಗಲೇ ಶಿಲ್ಪಿಗಳಲ್ಲಿ ದಶಾವತಾರಗಳನ್ನು ಕೆತ್ತಲು ಪ್ರಾರಂಭಿಸಿದ್ದು ಅವುಗಳಾಗಲೇ ಜನಪ್ರಿಯವಾಗಿದುವೆಂದ್ದು ಸಮಕಾಲೀನ ಶಿಲ್ಪಗಳಿಂದ ಕಂಡು ಬರುತ್ತದೆ.[೧೪]

---

೬. ಅದೇ, ಪು. ೮೫.
೭. ಅದೇ, ಪು. ೮೬.
೮. ಅದೇ, ಪು, ೯೭.
೯. ಅದೇ, ಪು. ೮೮.
೧೦. ಅದೇ, ಪು. ೯೮.
೧೧. ಅದೇ, ಪು. ೮೬.
೧೨. ಅದೇ, ಪು. ೮೬.
೧೩. ಅದೇ, ಪು. ೮೮. ಕೃಷ್ಣಶಾಸ್ತ್ರಿ ಮೆಮೊಯರ್ಸ್ ಆಫ್ ದಿ ಆರ್ಕಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾಸಂಪುಟ ೨೬ ಪು. ೫–೮.
೧೪. ಡಾ. ಅ. ಸುಂದರ ರೀಡರ್ ಕರ್ನಾಟಕ ವಿಶ್ವವಿದ್ಯಾಲಯದ ಸೋಶಿಯಲ್ ಸೈನ್ಸಸ್ ಜರ್ನಲ್, ೧೯೭೬ "ಆರ್ಕಿಟೆಕ್ಚರಲ್ ರಿವೀನ್ಸ್ ಫ್ರಮ್ ಮಂಥೋಳ್" ಪು. ೧೨೮. ಚಿತ್ರ. ii (೧).

ಈ ಮೇಲ್ಕಾಣಿಸಿದ ಆಧಾರಗಳಿಂದ ದಸಾವತಾರದ ಹತ್ತು ವಿಗ್ರಗಳು ವತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ರಾಮ, ಬಲರಾಮ. ಬುದ್ಧ, ಕಲ್ಕಿ ಎಂದು ಹೇಳಬೇಕಾಗುತ್ತದೆ.

ಕೇಶವಾದಿ ದೇವರು ಹನ್ನೆರಡರ ಬಗ್ಗೆ ಹೆಚ್ಚಿನ ಚರ್ಚೆಯ ಅಗತ್ಯವಿಲ್ಲ. ಅವುಗಳು ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಮೊದಲಿನ ೧೨ ರೂಪಗಳಾಗಿರುತ್ತವೆ. ಪದ್ಮ ಪುರಾಣ ಹಾಗೂ ಮಾನಸೋಲ್ಲಾಸ[೧೫] (ಸಮಕಾಲೀನ ಕೃತಿ)ಗಳಲ್ಲಿ ಅವುಗಳ ಹೆಸರುಗಳು ಹಾಗೂ ವಿವರಗಳು ಇಂತಿವೆ: ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷೀಕೇಶ, ಪದ್ಮನಾಭ, ಮತ್ತು ದಾಮೋದರ.

ಅಂತೆಯೇ ಸಂಕರ್ಷಣಾದಿ ದೇವರು ೧೨ ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಮುಂದಿನ ೧೨ ರೂಪಗಳನ್ನು ಸೂಚಿಸುವವು. ಅವುಗಳು ಸಂಕರ್ಷಣ, ವಾಸುದೇವ, ಪ್ರದ್ಯುಮ್ನ ಅನಿರುದ್ಧ. ಪುರುಷೋತ್ತಮ. ಅಧೋಕ್ಷಜ. ನಾರಸಿಂಹ. ಅಚ್ಯುತ, ಜನಾರ್ದನ, ಉಪೇಂದ್ರ, ಹರಿ ಮತ್ತು ಕೃಷ್ಣ. ಅರಸೀಕೆರೆಯ ಈಶ್ವರ ದೇವಾಲಯದಲ್ಲಿ[೧೬] ಈ ಎಲ್ಲ ದೇವತೆಗಳನ್ನು ಕ್ರಮವಾಗಿ ಕೆತ್ತಿದ್ದು ಜೊತೆಗೆ ಆಯಾ ದೇವತೆಗಳ ಹೆಸರುಗಳನ್ನು ಅವುಗಳ ಪೀಠಗಳ ಮೇಲೆ ಬರೆಯಲಾಗಿದ್ದು ಗಮನೀಯವಾದಂಥ ವಿಷಯ.

ಬ್ರಹ್ಮಾದಿ ದೇವರು ಆರರ ಬಗ್ಗೆ ಅಷ್ಟೊಂದು ಜಿಜ್ಞಾಸೆಯ ಅಗತ್ಯ ಕಂಡು ಬರುವದಿಲ್ಲ. ೨ನೆಯ ಯಾದಿಯಲ್ಲಿರುವ ದೇವತೆಗಳಲ್ಲಿ ಬ್ರಹ್ಮ. ಇಂದ್ರ ಹಾಗೂ ಗಿರಾ ಅಥವಾ ಸರಸ್ವತಿಯರ ಪ್ರಸ್ತಾಪವಿದೆ. ಹಾಗೆಯೇ ಉಳಿದ ಮೂರು ದೇವತೆಗಳು ವರುಣ. ಕುಬೇರ ಹಾಗೂ ಯಮ ಮುಖ್ಯ ದಿಕ್‌ಪಾಲಕರಾಗಿರುವ ಸಾಧ್ಯತೆ ಇದೆ.

ಹಂಸನಾರಾಯಣ ಅಥವಾ ಮುರಹರ • ನಾರಾಯಣಾದಿ ದೇವರು ಹನ್ನೆರಡರ ಬಗ್ಗೆ ಪುರಾಣಗಳ ಸಹಾಯ ಅತ್ಯವಶ್ಯ. ಭಾಗವತ ಪುರಾಣವು ದಕ್ಷಿಣ ಭಾರತ ಅದರಲ್ಲೂ ಧ್ರಾವಿಡ ದೇಶದಲ್ಲಿ ರಚಿಸಲ್ಪಟ್ಟಿದ್ದೆಂದು[೧೭] ಕೆಲವು ಪಂಡಿತರ ಅಭಿಪ್ರಾಯ. ಅದರಲ್ಲೂ ಈ ಪುರಾಣವು ಹೊಯ್ಸಳರ ಕಾಲಕ್ಕಾಗಲೇ ಸಾಕಷ್ಟು ಪ್ರಸಿದ್ಧಿಯನ್ನು ಪಡೆದಂಥ ವಿಷಯವು ಆ ಕಾಲದ ಗುಡಿಗಳ ಹೊರಮೈಯ ಚಿತ್ರಪಟ್ಟಿಕೆಗಳಲ್ಲಿ ಶಿಲ್ಪಗಳಲ್ಲಿ ಹಾಗೂ

---

೧೫. ಮಾನಸೋಲ್ಲಾಸ. ಗಾಯಕವಾಡ ಓರಿಯಂಟಲ್ ಸಿರೀಸ್, ನಂ. LXXXIV ಭಾಗ ೨, ೧೯೩೯. ಪು. ೩೦.

೧೬. ಮೈಸೂರ ಆರ್ಕಿಯಾಲಾಜಿಕಲ್ ರಿಪೋರ್ಟ್ಸ. ೧೯೩೦. ಪು. ೬೧-೬೭.

೧೭. ಬ್ಯಾನರ್ಜಿ, ಜೆ.ಎನ್. ೧೯೫೧, "ಶ್ರೀಮದ್ಭಾಗವತ-ದಿ ಪ್ಲೇಸ್ ಆಫ್ ಇಟ್ಸ ಆರಿಜಿನ್, ಇಂಡಿಯನ್ ಹಿಸ್ಟಾರಿಕಲ್ ಕ್ವಾರ್ಟರ್ಲಿ" ಸಂಪುಟ. ೨೭. ಸಂಚಿಕೆ. ೨. ಪು. ೧೩೮. ೧೪೩.

ಕೃತಿಗಳಲ್ಲಿ ಕಂಡು ಬರುತ್ತದೆ. ಇಲ್ಲಿ ವಿಷ್ಣುವಿನ ಅವತಾರಗಳನ್ನು[೧೮] ಕೆಳಗೆ ಕಾಣಿಸಿದಂತೆ ಕೊಟ್ಟಿದ್ದಾರೆ. ಒಂದೆಡೆಯಲ್ಲಿ ಪುರುಷ, ನಾರದ, ನರ, ನಾರಾಯಣ, ಕಪಿಲ, ದತ್ತಾತ್ರೇಯ, ಯಜ್ಞ, ಋಷಭ, ಪೃಥು, ಧನ್ವಂತ್ರಿ, ಮೋಹಿನಿ, ವ್ಯಾಸರ ಉಲ್ಲೇಖವಿದ್ದರೆ ಇನ್ನೊಂದೆಡೆಯಲ್ಲಿ ಸನತ್‌ಕುಮಾರ, ಸನಂದನ, ಧ್ರುವ, ಹಯಗ್ರೀವ, ಗಜೇಂದ್ರ ಮೋಕ್ಷ, ಸನಾತನ ಹಾಗೂ ಹಂಸಾವತಾರಗಳೂ ಹಾಗೂ ಮತ್ತೊಂದೆಡೆಯಲ್ಲಿ ಪ್ರಜಾಪತಿ ಹಾಗೂ ಅಹಿಂದ್ರರ ಪ್ರಸ್ತಾಪವಿದೆ. ಗರುಡಪುರಾಣದಲ್ಲೂ[೧೯] ನಾರಾಯಣ, ಕಪಿಲ, ದತ್ತಾತ್ರೇಯ ಹಯಗ್ರೀವ, ಮಕರಧ್ವಜ, ನಾರದ, ಧನ್ವಂತ್ರಿ. ಶೇಷ, ಯಜ್ಞ ಹಾಗೂ ವ್ಯಾಸರ ಉಲ್ಲೇಖವಿದೆ.

ಯಜ್ಞ, ಸನಾತನ. ಸನತ್‌ಕುಮಾರ, ಸನಂದನ. ಅಹಿಂದ್ರ, ಮಕರಧ್ವಜ. ಶೇಷ ಇವರುಗಳ ಅವತಾರಗಳ ಬಗ್ಗೆ ಅಷ್ಟೊಂದು ಸಮರ್ಪಕವಾದಂಥ ವಿಷಯಗಳು ಶಿಲ್ಪ ಹಾಗೂ ಪುರಾಣಗಳಲ್ಲಿ ದೊರೆಯುವದ್ದರಿಂದಲೂ ಧ್ರುವ, ಪೃಥು. ಪ್ರಜಾಪತಿ ಇವರುಗಳನ್ನು ರಾಜರುಗಳ ಸಾಲಿನಲ್ಲಿ ಸೇರಿಸುವದರಿಂದಲೂ ಅವರುಗಳನ್ನು ಇಲ್ಲಿ ಗಣನೆಗೆ ತಂದಿಲ್ಲ. ಹಂಸನಾರಾಯಣರು ಶಾಸಗಳಲ್ಲೂ ಪುರಾಣಗಳಲ್ಲೂ ಸ್ಪಷ್ಟವಾಗಿ ಉಲ್ಲೇಖಿಸಲ್ಪಡುವದರಿಂದಲೂ ದತ್ತಾತ್ರೇಯ. ಹಯಗ್ರೀವ. ಧನ್ವಂತ್ರಿ,ಗಜೇಂದ್ರಮೋಕ್ಷ,ಮೋಹಿನಿಯರು ಸಮಕಾಲೀನ ಶಿಲ್ಪಗಳಲ್ಲಿ ಕಾಣಬರುವದರಿಂದಲೂ, ಕಪಿಲ, ವ್ಯಾಸರ ವಿಗ್ರಹಗಳ ವರ್ಣನೆ ಶಿಲ್ಪಶಾಸ್ತ್ರಗಳಲ್ಲಿ ಬರುವದರಿಂದಲೂ ಅವರುಗಳನ್ನು ಇಲ್ಲಿ ಸೇರಿಸಿಕೊಳ್ಳಲಾಗಿದೆ. ಇನ್ನು ನಾರದ, ಪುರುಷ ಹಾಗೂ ವೃಷಭರ ಬಗ್ಗೆ ಸಾಕಷ್ಟು ವಿವರಗಳು ಭಾಗವತ. ಗರುಡಪುರಾಣಗಳಲ್ಲಿ ದೊರಕುವದರಿಂದ ಅವರುಗಳನ್ನು ಅಲಕ್ಷಿಸಿಲ್ಲ. ಹೀಗಾಗಿ ಹಂಸನಾರಾಯಣಾದಿ ದೇವರು ೧೨ ಈ ಕೆಳಗೆ ತೋರಿಸಿದಂತೆ ಕಾಣುತ್ತಾರೆ. ಹಂಸ. ನಾರಾಯಣ, ದತ್ತಾತ್ರೇಯ[೨೦], ಹಯಗ್ರೀವ[೨೧]. ಗಜೇಂದ್ರ ಮೋಕ್ಷ[೨೨]. ಧನ್ವಂತ್ರಿ[೨೩], ನಾರದ, ಕಪಿಲ, ವ್ಯಾಸ, ಮೋಹಿನಿ, ಪುರುಷ. ಹಾಗೂ ಋಷಭ.

ಕೃಷ್ಣಾವತಾರದ ೧೨ ಮೂರ್ತಿಗಳನ್ನು ನಾಲ್ಕನೆಯ ಯಾದಿಯಲ್ಲಿ ಹೆಸರಿಸಿದ್ದಾರೆ. ಆದರೆ ೩೪ ದೇವತೆಗಳಲ್ಲಿ ೧೮ ಕೃಷ್ಣಾವತಾರದವು ಹಾಗೂ ಇತರ ದೇವತೆಗಳೆಂದು

---

೧೮. ಜೆ.ಎಮ್. ಸನ್ಯಾಲ್ ಡೆಲ್ಲಿ ೧೯೭೩, ಎರಡನೆಯ ಆವರ್ತಿ "ಶ್ರೀಮದ್ಭಾಗವತಮ್" ಪು. ೭, ೮ ಹಾಗೂ ೮೩.

೧೯. ರಾಝುರಾ ಅದೇ. ಪು. ೯೨.

೨೦. ಟಿ. ಎ. ಗೋಪೀನಾಥರಾವ್. ದಿಲ್ಲಿ. ೧೯೭೩. "ದಿ ಡೆವ್ಹಲಪ್‌ಮೆಂಟ್ ಆಫ್ ಹಿಂದೂ ಐಕನೋಗ್ರಫಿ ಸಂಪುಟ. ೧.ಭಾಗ. ೧. ಚಿ. LXXIII.

೨೧. ಅದೇ, ಚಿತ್ರ. LXXVII.

೨೨. ಅದೇ ಚಿ. LXXX, ೧.

೨೩. ಮೈಸೂರ ಆರ್ಕಿಯಾಲಾಜಿಕಲ್ ರಿಪೋರ್ಟ್ಸ್ ೧೯೩೨ ಚಿ. IX ೩.

ತ್ತಿನೆಯು ಯಾದಿಯಲ್ಲಿ ಹೇಳಿದ್ದಾರೆ. ಭಾಗವತ, ವಿಷ್ಣುಪುರಾಣ, ಹಾಗೂ ರುದ್ರಭಟ್ಟನ ಜಗನ್ನಾಥವಿಜಯವೆಂಬ ಸಮಕಾಲೀನ ಕೃತಿಯಿಂದ ಕೃಷ್ಣಾವತಾರದ ಮುಖ್ಯಘಟನೆಗಳನ್ನು ಈ ಕೆಳಗಿನಂತೆ ಹೆಸರಿಸಬಹುದು. ಶ್ರೀಕೃಷ್ಣ ಕಾರಾಗ್ರಹದಲ್ಲಿ ವಾಸುದೇವ ದೇವಕಿಯರ ಮಗುವಾಗಿ ಜನಿಸಿದ್ದು: ಗೋಕುಲದಲ್ಲಿ ತನ್ನ ಅನೇಕ ಬಾಲಲೀಲೆಗಳಿಂದ ಗೋಪಾಲರ ಹಾಗೂ ಇತರರ ಮನರಂಜಿಸಿದ್ದು. ಪೂತನಿ, ಶಕಟಾಸುರ, ಪ್ರಲಂಬಾದಿ ಅಸುರರನ್ನು ಸಂಹರಿಸಿದ್ದು; ಬೆಣ್ಣೆ ಕದ್ದು ತಿಂದದ್ದು, ಕಾಳಿಂಗನನ್ನು ಮರ್ದಿಸಿದ್ದು; ಗೋವರ್ಧನಧಾರಿ ಆದದ್ದು, ವೇಣುನಾದದಿಂದ ಗೋಪಿಯರ ಮನರಂಜಿಸಿದ್ದು, ರುಕ್ಮಿಣಿ. ಸತ್ಯಭಾಮಾ. ಮೊದಲಾದ ೧೬ ಸಾವಿರ ಚದುರೆಯರನ್ನು ವರಿಸಿದ್ದು, ಮಹಾಭಾರತ ಯುದ್ಧದಲ್ಲಿ ಪಾರ್ಥನಿಗೆ ಸಾರಥಿ ಆಗಿದ್ದುದು ಇತ್ಯಾದಿ. ಹೀಗೆ ಕೃಷ್ಣನ ಲೀಲೆಗಳು ಅನಂತ. ಆದರೆ ಅವುಗಳೆಲ್ಲವನ್ನೂ ಶಿಲ್ಪಗಳಲ್ಲಿ ಕೆತ್ತಲು ಸಾಧ್ಯವಿದ್ದರೂ ಕೆಲವುಗಳು ಮಾತ್ರ ದೇವಾಲಯಗಳ ಗರ್ಭಗ್ರಹಗಳಲ್ಲೂ, ಇನ್ನೂ ಕೆಲವುಗಳು ಮಾತ್ರ ದೇವಾಲಯಗಳ ಹೊರಗೋಡೆಗಳನ್ನಲಂಕರಿಸಿವೆ. ಅವುಗಳು ೧. ನವನೀತ ಕೃಷ್ಣ[೨೪] ೨. ಗೋವರ್ಧನಧಾರಿ[೨೫] ೩. ಕಾಳಿಂಗಮರ್ದನ[೨೬] ೪. ಗಾನಗೋಪಾಲ ಅಥವಾ ವೇಣುಗೋಪಾಲ[೨೭] ೫. ಪಾರಿಜಾತ ಹರಣ[೨೮] ೬. ಪಾರ್ಥಸಾರಥಿ.[೨೯] ಮುಂತಾದವುಗಳು.

ಮೇಲಿನ ಚರ್ಚೆಯಲ್ಲಿ ಕೆಲವು ಎಣಿಕೆಗಳು ತಪ್ಪೆನಿಸುವ ಸಾಧ್ಯತೆಯೂ ಇದೆ. ಯಾಕೆಂದರೆ ಸಮಕಾಲೀನ ಶಿಲ್ಪದಲ್ಲಿ ಅವುಗಳ ನಿರೂಪಣೆ ಇದುವರೆಗೆ ದೊರೆತಿಲ್ಲ. ಹೀಗಾಗಿ ಅವು ತೀರ ಕಾಲ್ಪನಿಕವೆನಿಸಿಯೂ ತೋರಬಹುದು. ಅಲ್ಲದೇ ಇಲ್ಲಿ ಕಾಣಿಸಿದ ಪ್ರತಿಯೊಬ್ಬ ದೇವತೆಗೂ ಆತನಿಗೆಂದೇ ಕಾದಿರಿಸಲ್ಪಟ್ಟು ನಿರ್ದಿಷ್ಟಪಡಿಸಲ್ಪಟ್ಟ ಸ್ಥಳ ಯಾವುದಿತ್ತೆಂದು ಹೇಳುವುದು ಕಷ್ಟದ ಕೆಲಸ.

---

೨೪. ಗೋಪಿನಾಥರಾವ್, ಅದೇ ಚಿತ್ರ LX ೧. ೨.

೨೫. ಅದೇ, ಚಿತ್ರ. LXV, LXVI.

೨೬. ಮೈಸೂರ ಆರ್ಕಿಯಾಲಾಜಿಕಲ್ ರಿಪೋರ್ಟ್ಸ್, ೧೯೩೨. ಚಿತ್ರ XII, ಪು. ೫೬.

೨೭. ಗೋಪೀನಾಥರಾವ್. ಅದೇ ಚಿ. LXI.

೨೮. ಪಿ. ಗುರುರಾಜಭಟ್. ಮಣಿಪಾಲ್ ೧೯೭೫.
ಸ್ಟಡೀಸ್ ಇನ್ ತುಳುವ ಹಿಸ್ಟರಿ ಆ್ಯಂಡ್ ಕಲ್ಚರ್ ಚಿ. ೨೬೩ (c).

ಗಜೇಂದ್ರಮೋಕ್ಷ: ಕಥೆ ಹಾಗೂ ಶಿಲ್ಪ-ಕೆಲವು ಹೆಚ್ಚಿನ ವಿಷಯಗಳು*

● ಶ್ರೀನಿವಾಸ ಪಾಡಿಗಾರು

ಭಾಗವತಪುರಾಣ ಮತ್ತು ಮಹಾಭಾರತಗಳಲ್ಲಲ್ಲದೆ ಇನ್ನೂ ಕೆಲವು ಪುರಾಣ, ಉಪಪುರಾಣಗಳಲ್ಲಿ ಗಜೇಂದ್ರಮೋಕ್ಷ ಕಥೆಯು ಪ್ರಸ್ತಾಪವಿದೆ. ಮುಖ್ಯಪುರಾಣಗಳ ಯಾದಿಯಲ್ಲಿ ವಾಮನಪುರಾಣ ಈ ಕಥೆಗೆ ಒಂದು ಅಧ್ಯಾಯವನ್ನು ಮುಡಿಪಿಟ್ಟಿದೆ.[೧] ಗಜೇಂದ್ರನು ಮೋಕ್ಷಕಾಲದಲ್ಲಿ ಸ್ತುತಿಸಿದ ಪದ್ಯಗಳಿಂದಲೇ ಪ್ರಹ್ಲಾದನು ತೀರ್ಥಸ್ಥಳಗಳಲ್ಲಿ ವಿಷ್ಣುಸ್ಮರಣೆ ಮಾಡಿದನೆಂದು ಅದರಲ್ಲಿ ಹೇಳಿವೆ. ನಾರದರ ಬಿನ್ನಹಕ್ಕೆ ಪ್ರತಿಯಾಗಿ ಪುಲಸ್ತ್ಯರು ಗಜೇಂದ್ರಮೋಕ್ಷ ಕಥೆಯನ್ನೂ ಗಜೇಂದ್ರನ ವಿಷ್ಣುಸ್ತುತಿಯನ್ನೂ ತಿಳಿಸುತ್ತಾರೆ. ಈ ಪಾಠದ ಪ್ರಕಾರ ಮೊಸಳೆಯ ರೂಪ ತಾಳಿದ್ದವನು 'ಹೂಹೂ' ಗಂಧರ್ವ ಮತ್ತು ಆತ 'ದೇವರ'[೨] ಶಾಪದಿಂದ ಆ ರೂಪ ಪಡೆದಿದ್ದ. ಗಜೇಂದ್ರನಾಗಿದ್ದವನ ಹೆಸರು ಮಾತ್ರ ತಿಳಿದು ಬರುವದಿಲ್ಲ: ವಿಷ್ಣುವಿನ ದಿವ್ಯ ಸ್ಪರ್ಶದಿಂದ ದಿವ್ಯಪುರುಷನಾಗಿ ವಿಷ್ಣುಲೋಕಕ್ಕೈದನೆಂದು ಹೇಳಿದೆಯಷ್ಟೆ. ಹೀಗಾಗಿ ಶಾಪಕೊಟ್ಟ ಋಷಿಯು ಪ್ರಸ್ತಾಪವಿಲ್ಲ.

---

* ಮಾನವಿಕ ಭಾರತಿ, ಸಂಚಿಕೆ ೧, ಸಂಪುಟ ೨, ಪು. ೧೩೨-೪೮ರಲ್ಲಿ "ಗಜೇಂದ್ರಮೋಕ್ಷ ಕಥೆ ಹಾಗೂ ಶಿಲ್ಪ" ಪ್ರಕಟವಾದ ನಂತರ ಆ ಬಗ್ಗೆ ದೊರೆತ ಹೆಚ್ಚಿನ ವಿಷಯಗಳನ್ನು ಇಲ್ಲಿ ಸಂಗ್ರಹಿಸಿದೆ.

೧. ವಾಮನ ಪುರಾಣ, ಅಧ್ಯಾಯ ೮೫.

೨. ಅದೇ, ಪದ್ಯ ೬೫.

ವರಾಹ ಪುರಾಣದಲ್ಲಿ ಭಾಗವತದ ಹಾಗೂ ಮಹಾಭಾರತದ ಪಾಠಗಳೆರಡರಿಂದಲೂ ಭಿನ್ನವಾದ ಗಜೇಂದ್ರಮೋಕ್ಷ ಕಥೆಯು ಪಾಠವಿದೆ.[೩] ಇದರಲ್ಲಿ ಸಾಲಿಗ್ರಾಮ ಕ್ಷೇತ್ರದ ಮಹಾತ್ಮ್ಯವರ್ಣನೆಯಲ್ಲಿ ಸಾಲಿಗ್ರಾಮ ನಿರ್ಮಾಣವಾದ ಬಗೆಯ ಬಗ್ಗೆ ಈ ಕಥೆಯನ್ನು ಉಲ್ಲೇಖಿಸಿದೆ. ಇದನ್ನು ಸಂಗ್ರಹವಾಗಿ ಹೀಗೆ ಹೇಳಬಹುದು:

ಜಯ–ವಿಜಯರು ಕರ್ದಮ ಪ್ರಜಾಪತಿಗಳ ಪುತ್ರರು; ವೇದವೇದಾಂತಗಳಲ್ಲಿ ವಿದ್ವಾಂಸರು ಮತ್ತು ಶ್ರೇಷ್ಠ ಹರಿಭಕ್ತರು. ಶ್ರೀಹರಿಯು ಅವರ ಪೂಜಾವಿಧಿಗೆ ಪ್ರಸನ್ನನಾಗಿ ನಿತ್ಯವೂ ಅವರೆದುರು ಪ್ರತ್ಯಕ್ಷವಾಗಿ ಸನ್ನಿಹಿತನಾಗಿರುತ್ತಿದ್ದನು. ಇಂಥ ಮಹಾನುಭಾವರಾದ ಋಷಿಕುಮಾರರನ್ನು ಮರುತ್ತ ಮಹಾರಾಜನು ಕರೆಯಿಸಿ, ಅವರ ನೇತೃತ್ವದಲ್ಲಿ ತನ್ನ ಯಜ್ಞವನ್ನು ಪೂರ್ತಿಗೊಳಿಸಿದನು: ಮತ್ತು ವಿಪುಲವಾಗಿ ದಾನದಕ್ಷಿಣೆಗಳನ್ನಿತ್ತು, ಪೂಜಿಸಿ, ಪ್ರಸನ್ನಗೊಳಿಸಿ ಕಳುಹಿಸಿದನು. ಮನೆಗೆ ಮರಳಿದ ಬಳಿಕ ದಾನವಾಗಿ ಬಂದ ದಕ್ಷಿಣೆ-ದ್ರವ್ಯಗಳನ್ನು ಹಂಚಿಕೊಳ್ಳುವಲ್ಲಿ ಜಯ-ವಿಜಯರಲ್ಲಿ ವಾದ-ಪ್ರತಿವಾದಗಳೆದ್ದು. ಜಯನು ವಿಜಯನಿಗೆ ಮೊಸಳೆಯಾಗುವಂತೆಯೂ. ವಿಜಯನು ಜಯನಿಗೆ ಆನೆಯಾಗುವಂತೆಯೂ ಶಾಪವಿತ್ತರು. ವಿಜಯನು ಗಂಡಕೀ ನದಿಯಲ್ಲಿ ಮೊಸಳೆಯಾಗಿ ಹುಟ್ಟಿದನು. ಜಯನು ತ್ರಿವೇಣೀಕ್ಷೇತ್ರದಲ್ಲಿ ಆನೆಯಾಗಿ ಹುಟ್ಟಿ ಆನೆಗಳೊಂದಿಗೆ ವಿಹರಿಸುತ್ತಾ ಜಲಕ್ರೀಡೆಯಾಡಲೆಂದು ತ್ರಿವೇಣೀ ಸಂಗಮಸ್ಥಾನಕ್ಕೆ ಬಂದನು. ಅಲ್ಲಿದ್ದ ಮೊಸಳೆ ಆತನ ಕಾಲನ್ನು ಗಟ್ಟಿಯಾಗಿ ಕಚ್ಚಿ ಹಿಡಿದುಕೊಂಡಿತು. ಹೀಗ ಆನೆ–ಮೊಸಳೆಗಳ ಕಾದಾಟಕ್ಕೆ ಮೊದಲಿಟ್ಟುಕೊಂಡು ತ್ರಿವೇಣೀಸಂಗಮದ ನೀರೆಲ್ಲ ರಾಡಿಯಾಗಿ. ಅನೇಕ. ಜಲಚರಗಳು ಹಿಂಸೆಗೊಳಗಾದವು. ಇದನ್ನು ನೋಡಿ ಜಲೇಶ್ವರನು ಶ್ರೀಹರಿಯಲ್ಲಿ ಮೊರೆಯಿಟ್ಟನು. ಶ್ರೀಹರಿ ಆ ಸ್ಥಳಕ್ಕೆ ಧಾವಿಸಿ ಚಕ್ರದಿಂದ ಮೊಸಳೆಯ ಬಾಯಿಯನ್ನು ಸೀಳಿದನು. ಚಕ್ರದ ಬಡಿತದಿಂದ ಆ ಸ್ಥಳದಲ್ಲಿದ್ದ ಕಲ್ಲುಗಳಲ್ಲಿ ಚಕ್ರದ ಚಿಹ್ನೆಗಳು ಮೂಡಿಬಂದವು, ಇತ್ಯಾದಿ.

ಸ್ಕಂದಪುರಾಣದಲ್ಲಿ ಕಥೆಯ ಇದೇ ಪಾಠ ಕೆಲವು ಬದಲಾವಣೆಗಳೊಂದಿಗೆ ಕಂಡುಬರುತ್ತದೆ.[೪] ಇಲ್ಲಿ ಉಕ್ತವಾಗಿರುವ ವ್ಯಕ್ತಿನಾಮ, ಸ್ಥಳನಾಮಗಳು ಅವೇ. ಆದರೆ ಗಂಡಕೀ ನದಿಯ ನೀರು ರಾಡಿಯಾದುದಾಗಲಿ, ಜಲಚರಗಳು ಹಿಂಸೆಗೊಳಗಾದುದಾಗಲಿ, ಅಥವಾ ಜಲೇಶ್ವರನು ವಿಷ್ಣುವಿನಲ್ಲಿ ಮೊರೆಯಿಟ್ಟುದಾಗಲಿ ಹೇಳಲ್ಪಟ್ಟಿಲ್ಲ. ಅಲ್ಲದೇ ಮೊಸಳೆ-ಆನೆಗಳ ರೂಪದಲ್ಲಿದ್ದ ಜಯ–ವಿಜಯರನ್ನು ಮೋಕ್ಷವಿತ್ತು, ವಿಷ್ಣು ತನ್ನ ದ್ವಾರಪಾಲರನ್ನಾಗಿ ನಿಯಮಿಸಿಕೊಂಡನೆಂದು ಹೇಳಿದೆ.

ಹೀಗೆ ವರಾಹಪುರಾಣ, ಸ್ಕಂದಪುರಾಣಗಳಲ್ಲಿಯ ಗಜೇಂದ್ರಮೋಕ್ಷ ಕಥೆಯ ಪಾಠ ಮಹಾಭಾರತ, ಭಾಗವತಗಳಲ್ಲಿಯುದಕ್ಕಿಂತ ಸ್ಥಳನಾಮ, ವ್ಯಕ್ತಿನಾಮ, ಕಾರಣಾದಿಗಳಲ್ಲಿ

---

೩. ವರಾಹ ಪುರಾಣ, ಅಧ್ಯಾಯ ೧೪೪, ಪದ್ಯಗಳು: ೧೩೮ ನಂತರ.

೪. ಸ್ಕಂದಪುರಾಣ : ೨, ವೈಷ್ಣವ ಖಂಡ, ಕಾರ್ತಿಕ ಮಹಾತ್ಮ್ಯ, ಅಧ್ಯಾಯ ೨೮.

ಭಿನ್ನವಾದುದಾಗಿದೆ. ದೇವಲ ಋಷಿಯ ಪ್ರಸ್ತಾಪವಾಗಲಿ. ಹಾಹಾ, ಹೂಹೂ ಗಂಧರ್ವರ ಉಲ್ಲೇಖವಾಗಲಿ, ಪಾಂಡ್ಯರಾಜ ಇಂದ್ರದ್ಯುಮ್ನನ ಹೆಸರಾಗಲಿ, ತ್ರಿಕೂಟ ಪರ್ವತ ಅಥವಾ ಅದರ ಹತ್ತಿರದ ಸರೋವರವಾಗಲಿ ಈ ಪಾಠದಲ್ಲಿಲ್ಲ. ಬದಲಾಗಿ ಗಂಡಕೀನದಿ, ಜಯ–ವಿಜಯರು, ಪುರುತ್ತರಾಜ, ಜಲೇಶ್ವರ ಇತ್ಯಾದಿಗಳು ಕಥೆಯಲ್ಲಿದ್ದಾರೆ. ವರಾಹಪುರಾಣದಲ್ಲಿ ವಿಷ್ಣುವಿಗೆ ಮೊರೆಯಿಡುವ ವ್ಯಕ್ತಿ ಗಜೇಂದ್ರನಲ್ಲ: ಜಲೇಶ್ವರ ! ಮಹಾಭಾರತ-ಭಾಗವತಪುರಾಣಾದಿಗಳಲ್ಲಿರುವ ದೀರ್ಘ ವಿಷ್ಣುಸ್ತುತಿಯೂ ಇವುಗಳಲ್ಲಿಲ್ಲ.

ಉಪಪುರಾಣಗಳಾದ ವಿಷ್ಣುಧರ್ಮ[೫], ವಿಷ್ಣುಧರ್ಮೋತ್ತರ.[೬] ಹಾಗೂ ಬೃಹನ್ನಾರದೀಯ ಪುರಾಣಗಳಲ್ಲಿ ಗಜೇಂದ್ರಮೋಕ್ಷದ ಉಲ್ಲೇಖವಿದೆ. ಇವುಗಳಲ್ಲಿ ಮೊದಲ ಎರಡರಲ್ಲಿ ಕಥೆಯ ಪೂರ್ತಿ ವಿವರಣೆಯಿದೆ. ಎರಡಲ್ಲೂ ಮಹಾಭಾರತದ ಪಾಠದಲ್ಲಿರುವಂತೆ ಹಾಹಾ ಮತ್ತು ಹೂಹೂ ಗಂಧರ್ವರು ದೇವಲ ಋಷಿಯ ಶಾಪಕ್ಕೊಳಗಾದ ವ್ಯಕ್ತಿಗಳು. ಬೃಹನ್ನಾರದೀಯ ಪುರಾಣದಲ್ಲಿ[೭] ಮತ್ಸ್ಯಪುರಾಣದಲ್ಲಿಯಂತೆ[೮] ಒಂದು ಪದ್ಯದಲ್ಲಿ ಮಾತ್ರ ಗಜೇಂದ್ರಮೋಕ್ಷದ ಉಲ್ಲೇಖವಿದೆ: ಕಥೆಯ ವಿವರಣೆ ಇಲ್ಲ.

ಕಥೆಯ ಪೂರ್ತಿ ಪ್ರಸ್ತಾಪವಿರುವ ಪುರಾಣಗಳಲ್ಲಿ (ವರಾಹ--ಸ್ಕಂದಪುರಾಣಗಳನ್ನುಳಿದು) ಆ ಅಧ್ಯಾಯದಲ್ಲಿನ ಪದ್ಯಗಳ ಸಂಖ್ಯೆ ಒಂದೇ ತೆರನಾಗಿಲ್ಲ. ಅವೆಲ್ಲವರಲ್ಲೂ ಮಹಾಭಾರತದ ಪಾಠದಲ್ಲಿರುವದಕ್ಕಿಂತ ಕಡಿಮೆ ಪದ್ಯಗಳಿವೆ. ಆದರೆ ಮಹಾಭಾರತ ಹಾಗೂ ಈ ಪುರಾಣಗಳ ಪಾಠಗಳಲ್ಲಿರುವ ಪದ್ಯಗಳು ಸಾಕಷ್ಟು ಹೋಲುತ್ತವೆ. ಪುರಾಣಗಳಲ್ಲಿ ಮಹಾಭಾರತದ ಪಾಠದ ಪದ್ಯಗಳನ್ನು ಕೆಲವೆಡೆ ಇದ್ದಕ್ಕಿದ್ದಂತೆ ಉದ್ಧರಿಸಲಾಗಿದ್ದರೆ ಇನ್ನುಳಿದ ಕಡೆ ಅವೇ ಶಬ್ದಗಳಿಂದ ಪುನರ್ರಚಿಸಲಾಗಿದೆ. ಒಟ್ಟಿನ ಮೇಲೆ ಹೇಳಬೇಕೆಂದರೆ (ವರಾಹ-ಸ್ಕಂದಪುರಾಣಗಳನ್ನುಳಿದು) ಪುರಾಣಗಳಲ್ಲಿನ ಪಾಠಗಳು ಮಹಾಭಾರತದ ಪಾಠದ ಸಾರಾಂಶವಾಗಿವೆ.

* * * *

ಎಲ್ಲೋರದ ಗುಹಾದೇಗುಲಗಳಲ್ಲಿ ಗಜೇಂದ್ರಮೋಕ್ಷವನ್ನು ನಿರ್ದೇಶಿಸುವ ಶಿಲ್ಪಗಳಿವೆ. ೧೫ನೇ ಗುಹೆಯಲ್ಲಿರುವ ಶಿಲ್ಪದಲ್ಲಿ ಗರುಡವಾಹನ ವಿಷ್ಣು ತನ್ನ ನಾಲ್ಕು ಕೈಗಳಲ್ಲಿ ಖಡ್ಗ, ಪ್ರಯೋಗ ಚಕ್ರ, ಶಂಖ ಹಾಗೂ ಖೇಟಕವನ್ನು ಧರಿಸಿದ್ದಾನೆ. ಖೇಟಕವನ್ನು ಹಿಡಿದ ಕೈ ಸೂಚಿಮುದ್ರೆಯಲ್ಲಿದೆ. ಕೆಳಗಡೆ ಎಡಬದಿಗೆ ಗಜೇಂದ್ರನನ್ನು ತೋರಿಸಿದೆ. ಆತನ ಕಾಲನ್ನು ಕಚ್ಚಿ ಹಿಡಿದಿರುವ ಜಲಚರ ಸ್ವಲ್ಪ ಭಿನ್ನವಾಗಿದ್ದರೂ ಅದು

೫. ವಿಷ್ಣುಧರ್ಮಪುರಾಣ : ಅಧ್ಯಾಯ ೬೭.
೬. ವಿಷ್ಣುಧರ್ಮೋತ್ತರಪುರಾಣ : ೧, ಅಧ್ಯಾಯ ೧೯೪.
೭. ಬೃಹನ್ನಾರದೀಯ ಪುರಾಣ : ಅಧ್ಯಾಯ ೨, ಪದ್ಯ ೨೭.
೮. ಮತ್ಸ್ಯಪುರಾಣ : ಅಧ್ಯಾಯ ೨೪೨, ಪದ್ಯ ೧೭.

ಆಮೆಯೆಂದು ಹೇಳಬಹುದಾಗಿದೆ.[೯] ಇದು ರಾಷ್ಟ್ರಕೂಟ ಅರಸು ದಂತಿದುರ್ಗನ ಕಾಲದ ಶಿಲ್ಪ (ಕ್ರಿ. ಶ ೭೫೨–೭೫೬), ಅದೇ ಮನೆತನದ ಮೊದಲನೇ ಕೃಷ್ಣನ ಕಾಲದಲ್ಲಿ (ಕ್ರಿ. ಶ, ೭೫೬–೭೭೩) ನಿರ್ಮಿತವಾದ ೧೬ನೇ ಗುಹೆಯ (ಕೈಲಾಸ) ಮುಖ್ಯದೇವಾಲಯ (ರಂಗಮಹಲ್)ದ ಉತ್ತರ ಗೋಡೆಯ ಮೇಲೆ ಇದೇ ತೆರನಾದ ಶಿಲ್ಪವಿದೆ; ಇಲ್ಲಿ ಆಮೆ-ಆನೆಗಳು ಸ್ಪಷ್ಟವಾಗಿವೆ. ಇಲ್ಲಿರುವ ಉಳಿದ ಶಿಲ್ಪಗಳಲ್ಲಿ ಗರುಡವಾಹನ ವಿಷ್ಣುವನ್ನು ಮಾತ್ರ ತೋರಿಸಿದ್ದು ಆಮೆಯಾಗಲಿ, ಆನೆಯಾಗಲಿ ಕಾಣಬರುವದಿಲ್ಲ. ಆದರೂ ಇವುಕೂಡ ಗಜೇಂದ್ರಮೋಕ್ಷವನ್ನು ನಿರ್ದೇಶಿಸುತ್ತವೆಂದು ಪ್ರಯೋಗಚಕ್ರವನ್ನು ಹಿಡಿದಿರುವ ರೀತಿಯಿಂದಲೂ, ಸೂಚಿಮುದ್ರೆಯಲ್ಲಿರುವ ಹಸ್ತದಿಂದಲೂ ಕಂಡುಕೊಳ್ಳಬಹುದು.

ಬೃಹದಾಕಾರದ ಆಮೆ ತೀರ ಕಾಲ್ಪನಿಕವೇನಲ್ಲ. ಇಂಥ ಆಮೆಗಳು ಕೆಲವೇ ಸಂಖ್ಯೆಯಲ್ಲಿ ಇನ್ನೂ ಉಳಿದು ಬಂದಿವೆಯೆಂದು ತಿಳಿದುಬರುತ್ತದೆ.[೧೦]

ಸುಮಾರು ೧೦ನೇ ಶತಮಾನಕ್ಕೆ ಸೇರುವ ನಗ್ದಾ (ಏಕಲಿಂಗಜೀಯ ಹತ್ತಿರ, ರಾಜಾಸ್ಥಾನ)ಸಾಸ ದೇವಾಲಯದಲ್ಲಿ ಗಜೇಂದ್ರಮೋಕ್ಷ ನಿರೂಪಿಸುವ ಉಬ್ಬು ಶಿಲ್ಪವಿದೆ. ಇದರಲ್ಲಿ ವಿಷ್ಣು ಗರುಡನ ಮೇಲೆ ಲಲಿತಾಸನದಲ್ಲಿ ಕುಳಿತಿದ್ದು ಅವನಿಗೆ ಎಂಟು ಭುಜಗಳಿವೆ. ಕೈಯಲ್ಲಿನ ಆಯುಧಗಳು ಒಡೆದು ಹೋಗಿವೆ. ಬಲಗಡೆ ಮಕರ ಮತ್ತು ಎಡಗಡೆ ಆನೆಯನ್ನು ತೋರಿಸಲಾಗಿದೆ. ಆದರೆ ಮಕರ ಆನೆಯ ಕಾಲನ್ನು ಕಚ್ಚಿದಂತೆ ತೋರಿಸಿಲ್ಲ.[೧೧] ಹೀಗಾಗಿ ಇದೊಂದು ಅಪರೂಪ ಶಿಲ್ಪ.

ಕೋರವಂಗಲದ ಹೊಯ್ಸಳ ಕಾಲದ ಬೂಚೇಶ್ವರ ದೇವಾಲಯದಲ್ಲಿ ಗಜೇಂದ್ರಮೋಕ್ಷ ಶಿಲ್ಪವಿದ್ದು ಅದರಲ್ಲಿ ವಿಷ್ಣು ಮಾಧವನ ರೂಪದಲ್ಲಿದ್ದಾನೆ.[೧೨] ವಿಷ್ಣು

---

೯. ನನ್ನ ಹಿಂದಿನ ಲೇಖನದಲ್ಲಿ ಇಲ್ಲಿರುವ ಶಿಲ್ಪದಲ್ಲಿ ಆಮೆಯಿರುವಲ್ಲಿ ಮೊಸಳೆಯಿದೆಯೆಂದು ಡಿ. ಎನ್. ಪವಾರ್‌ರ ಅಭಿಪ್ರಾಯವನ್ನು ಉದ್ಧರಿಸಿದ್ದೆ. ಆದರೆ ನನ್ನ ಇತ್ತೀಚಿನ ಎಲ್ಲೋರದ ಅಧ್ಯಯನದಲ್ಲಿ ಈ ಅಭಿಪ್ರಾಯ ಸರಿಯಲ್ಲವೆಂದು ಕಂಡುಕೊಂಡಿದ್ದೇನೆ.

೧೦. ಪೀಟರ್ ಪ್ರಿಚಾರ್ಡ್, ಥ್ರೀ, ಟೂ, ಒನ್ ಟಾರ್ಟಸ್, ನ್ಯಾಚ್ಯುರಲ್ ಹಿಸ್ಟರಿ ಅಕ್ಟೋಬರ್ ೧೯೭೭, ಪು. ೯೧-೧೦೦; "ದಿ ಐಲೆಂಡ್ ದಟ್ ಇನ್ಸ್‌ಪೈರ್ಡ್ ಡಾರ್ವಿನ್ಸ್ ಥಿಯರಿ", ದಿ ಹಿಂದೂ ವೀಕ್ಲಿ ಮ್ಯಾಗಜಿನ್, ಎಪ್ರಿಲ್. ೧೬, ೧೯೭೮, ಪು. ೫.

೧೧. ಅಗ್ರವಾಲಾ, ಆರ್. ಸಿ., ೧೯೬೪, "ಅನ್‌ಪಬ್ಲಿಶ್ಡ್ ಸ್ಕಲ್ಪ್‌ಚರ್ಸ್ ಫ್ರಾಮ್ ರಾಜಸ್ಥಾನ್", ಭಾರತೀಯ ವಿದ್ಯಾ, ಸಂಪುಟ ೨೫, ಸಂಚಿಕೆ ೩-೪, ಪು. ೪೫ ಮತ್ತು ಚಿತ್ರ ೬.

೧೨. ಶ್ರೀನಿವಾಸ ಪಾಡಿಗಾರು, ೧೯೭೭, "ಗಜೇಂದ್ರಮೋಕ್ಷ: ಕಥೆ ಹಾಗೂ ಶಿಲ್ಪ", ಮಾನಸಿಕ ಭಾರತಿ, ಸಂಚಿಕೆ ೧, ಸಂಪುಟ ೨, ಪು. ೧೩೩.

ಧರ್ಮೋತ್ತರ ಪುರಾಣದಲ್ಲಿ ಗಜೇಂದ್ರಮೋಕ್ಷ ಸಂದರ್ಭದಲ್ಲಿ ವಿಷ್ಣುವನ್ನು ಮಾಧವನೆಂದು ಹೆಸರಿಸಿರುವುದು[೧೩] ಈ ದೃಷ್ಟಿಯಿಂದ ಅರ್ಥವತ್ತಾಗಿದೆ ಎಂದು ಅನಿಸುತ್ತದೆ.

ಕುಂಭಕೋಣಂನ ರಾಮಸ್ವಾಮಿ ದೇವಾಲಯದ ಕಂಬವೊಂದರ ಮೇಲೆ ಗಜೇಂದ್ರವನ್ನು ವಿಷ್ಣು ಆಶೀರ್ವದಿಸುವಂತೆ ತೋರಿಸಿದೆ.[೧೪] ವಿಷ್ಣು ಚತುರ್ಭುಜನಾಗಿದ್ದು ಆತನ ಮೇಲಣ ಕೈಗಳು ಚಕ್ರ, ಶಂಖಗಳನ್ನು ಧರಿಸಿವೆ. ಎಡಗೈ ಕಟ್ಯವಲಂಬಿತವಿದ್ದು ಬಲಗೈ ಅಭಯಮುದ್ರೆಯಲ್ಲಿದೆ. ಬಲಗಡೆ ಗಜೇಂದ್ರನನ್ನು ತಲೆಬಾಗಿ ನಮಸ್ಕರಿಸುವಂತೆ ತೋರಿಸಿದೆ. ಈ ಶಿಲ್ಪ ವಿಜಯನಗರ ಕಾಲದ್ದಿರಬೇಕು.

* * * *

೧೩. ವಿಷ್ಣುಧರ್ಮೋತ್ತರ ಪುರಾಣ, ೧, ಅಧ್ಯಾಯ ೧೯೪, ಪದ್ಯ ೫೧.

೧೪. ಕೃಷ್ಣಶಾಸ್ತ್ರಿ, ಎಚ್., ವಾರಣಾಸಿ, ೧೯೭೪ (ಪುನರ್ಮುದ್ರಣ), ಸೌಥ ಇಂಡಿಯನ್ ಇಮೇಜಸ್ ಆಫ್ ಗಾಡ್ಸ್ ಅಂಡ್ ಗಾಡೆಸ್ಸಸ್, ಪು. ೫೫ ಮತ್ತು ಚಿತ್ರ ೩೬.

ಪವಾಡಗಳ ಉಗಮದ ಬಗ್ಗೆ ಒಂದು ಸಾಧಾರ ಕಲ್ಪನೆ*

● ವ್ಹಿ. ಜಿ. ಪೂಜಾರ

ಇಂದಿನದು ವೈಜ್ಞಾನಿಕ ಯುಗ. ವಿಜ್ಞಾನ ಇಂದು ಸಮಾಜದ ಸಕಲಾವಯವಗಳನ್ನು ಸಂಸ್ಪರ್ಶಿಸಿದೆ. ನಾಗಾಲೋಟದಲ್ಲಿ ಸಾಗಿದ ಇಂದಿನ ವೈಜ್ಞಾನಿಕ ಪ್ರಗತಿ, ವಾಜಿಯ ವೇಗದಲ್ಲಿ ಹೊರಟ ಆಧುನಿಕ ಮಾನವನ ವಿಚಾರಧಾರೆ, ಪ್ರತಿಯೊಂದು ವಿಷಯವನ್ನೂ ವೈಜ್ಞಾನಿಕ ಒರೆಗಲ್ಲಿಗೆ ಉಜ್ಜಿನೋಡುವ ಚಿಕಿತ್ಸಕ ಬುದ್ಧಿ–ಇವೆಲ್ಲ ಇಮ್ಮಡಿಸಿದರೂ ಮೂಲಭೂತವಾಗಿ ಮಾನವನ ಮನವನ್ನಾವರಿಸಿದ ಅಂಧಶ್ರದ್ಧೆ, ಮೂಢನಂಬುಗೆಗಳು, ಅರ್ಥಹೀನ ಸಂಪ್ರದಾಯಗಳು, ಧರ್ಮದ ಹೆಸರಿನಲ್ಲಿ ನಡೆಯುವ ಕರ್ಮಠತನ. ಅತಿಮಾನುಷಶಕ್ತಿ (ಪವಾಡ)ಯಂತಹ ವಿಷಯಗಳು ಸಂಪೂರ್ಣವಾಗಿ ಇನ್ನೂ ಮರೆಯಾಗಿಲ್ಲ. ಇವು ಸಾಮಾನ್ಯ ಜನತೆಯಲ್ಲಿ ರಕ್ತಗತವಾಗಿ ಹೋಗಿವೆ; ಆಳವಾಗಿ ಬೇರು ಬಿಟ್ಟಿವೆ. ಇವುಗಳ ಬೇರುಗಳನ್ನು ಹುಡುಕುತ್ತಾ ಹಿಂದೆ ಹಿಂದೆ ಹೋದದ್ದಾದರೆ, ನಾವು ಆದಿ ಮಾನವನವರೆಗೂ ಪಯಣಿಸಬೇಕಾಗುತ್ತದೆ. ಆದಿ ಮಾನವನ ಕಾಲದ ಆಳದವರೆಗೂ ಇವು ಇಳಿದುದರ ಸುಳಿವು ಸಿಗುವುದನ್ನು ಮನಗಾಣಬಹುದು. ಇಂದು ನಾವು ಯಾವ ಸಂಗತಿಗಳಿಗೆ ಪವಾಡಗಳೆಂದು ಕರೆಯುತ್ತೇವೆಯೋ. ಅಂತಹವುಗಳ ಹುಟ್ಟಿನ ರಹಸ್ಯ ಇಲ್ಲವೆ ಕಲ್ಪನೆ ನಿಸರ್ಗದ ನಿಯಮಗಳನ್ನರಿಯದ ಆದಿಮಾನವ ನಂಬುಗೆಗಳಲ್ಲಿದೆ ಎಂಬುದನ್ನು ಇಲ್ಲಿ ನೋಡಬಹುದು.

---

* ಈ ಲೇಖನ ರೂಪಿತವಾಗಲು ಕಾರಣರಾದವರು ಗುರುಗಳಾದ ಡಾ. ಬಿ.ಬಿ.ಹೆಂಡಿ ಅವರು.

ಪ್ರಥಮದಲ್ಲಿ ಆದಿಮಾನವ ನಿಸರ್ಗದ ನಿಯಮಾನುಸಾರವಾಗಿ ಜರುಗಬಹುದಾದ ಪ್ರಕ್ರಿಯೆಗಳನ್ನು ಒಂದೊಂದಾಗಿ ಪರಿಚಯಿಸಿಕೊಳ್ಳುತ್ತಾ ಬರುವಾಗ, ಪ್ರಕೃತಿವಿಶೇಷಗಳೆಲ್ಲವೂ ಯಾವುದೋ ಒಂದು ಶಕ್ತಿಯಿಂದ ನಡೆಯುತ್ತಿರಬೇಕೆಂದು ಭಾವಿಸಿದ. ಅದುವೇ ಅಲೌಕಿಕಶಕ್ತಿ. ಆ ಶಕ್ತಿಯಿಂದಲೇ ಪ್ರಕೃತಿಯಲ್ಲಿ ಆಶ್ಚರ್ಯವನ್ನುಂಟುಮಾಡುವ ಘಟನೆಗಳು ಘಟಿಸುತ್ತವೆಯೆಂದು ನಂಬಿದ. ತಾನು ಅರಚಿದಾಗ ತನ್ನ ಧ್ವನಿಯು ಬೆಟ್ಟಗಳಿಂದ ಪ್ರತಿಧ್ವನಿಸುವುದನ್ನು ಕಂಡುಕೊಂಡ. ತಾನು ನಡೆಯುತ್ತಿದ್ದಾಗ ತನ್ನ ಛಾಯೆಯು ಹಿಂಬಾಲಿಸುತ್ತಿದ್ದುದನ್ನು ಕಂಡು ವಿಸ್ಮಯನಾದ. ರಾತ್ರಿ ವೇಳೆಯಲ್ಲಿ ಅಡ್ಡಾಡುವಾಗ, ಗಾಳಿಬೀಸಿದಾಗ ಮರಗಳ ಟೊಂಗೆಗಳು ಅಲುಗಿ ಅವುಗಳಿಂದ ಹೊರಡುವ 'ಜುಂಯ್' ಗುಡುವ ಶಬ್ದ ಕೇಳಿ ಹೆದರಿದ. ಮಳೆ, ಸಿಡಿಲು, ಗುಡುಗು, ಮಿಂಚು, ಬಿರುಗಾಳಿ–ಇವೇ ಮುಂತಾದವುಗಳಿಂದ ಭಯಭೀತನಾದ. ಜನನ–ಮರಣಗಳು ಆತನಿಗೆ ಇನ್ನೂ ಆಶ್ಚರ್ಯವನ್ನುಂಟು ಮಾಡಿದುವು.

"ಇವೆಲ್ಲವನ್ನು ಕಂಡ ಪ್ರಾಚೀನ ಮಾನವನು ಅಲೌಕಿಕಶಕ್ತಿಗಳ ಸ್ನೇಹವನ್ನಪೇಕ್ಷಿಸಿದ. ಅಲೌಕಿಕ ಶಕ್ತಿಗಳನ್ನು ಪ್ರೀತಿಸಿದರೆ ಒಳ್ಳೆಯದು, ದ್ವೇಷಿಸಿದರೆ ತೊಂದರೆಗಳು. ಪ್ರಪಂಚವೆಲ್ಲವೂ ಆ ಅಲೌಕಿಕ ಶಕ್ತಿಗಳ ಮಾಯೆ. ಅವುಗಳ ಪ್ರೀತಿಯೇ ಸಕಲ ಸೌಭಾಗ್ಯಗಳನ್ನೊದಗಿಸಿಕೊಳ್ಳುವ ಮಾರ್ಗ" ಎಂದು ನಿರ್ಧರಿಸಿದ.[೧]

ಹೀಗೆ ಅಲೌಕಿಕ ಶಕ್ತಿಯು ಒಂದು ಕಲ್ಪನೆ ಆದಿಮಾನವನಲ್ಲಿ ಮೂಡಿಬಂದಮೇಲೆ ಪ್ರಾಣಿಗಳು ಮತ್ತು ಜಡವಸ್ತುಗಳು ಸಹ ಅಲೌಕಿಕ ಶಕ್ತಿಯ ಅಂಶವನ್ನು ಅಥವಾ ಆತ್ಮವನ್ನು ಹೊಂದಿರುತ್ತವೆ ಎಂಬ ಭಾವನೆ ಸಹಜವಾಗಿ ಬೆಳೆಯಿತು. ಈ ರೀತಿಯಾಗಿ ಆದಿಮಾನವನು ಸರ್ವವೂ ಚೈತನ್ಯಮಯ (Animism)[೨] ಎಂಬ ನಂಬಿಕೆಯನ್ನು ಬೆಳೆಸಿಕೊಂಡ. ಈ ನಂಬಿಕೆಯೇ ಮತಧರ್ಮಕ್ಕೆ ಮೂಲಾಧಾರ[೩] ಎಂದು ಟೈಲರ್ (Tylor) ಅಭಿಪ್ರಾಯ ಪಡುತ್ತಾನೆ. ಮತ್ತು ಆತ ಕೆಲವು ಅಭೌತ, ಅಗೋಚರ, ಆಧ್ಯಾತ್ಮಿಕ ಜೀವಿಗಳ ಬಗ್ಗೆ ಆದಿವಾಸಿಗಳಲ್ಲಿ ಭಯ, ಭಕ್ತಿ ಮೂಡಿ ಬಂದು ಅದೇ ಧರ್ಮವಾಗಿ ಪರಿಣಮಿಸಿತೆಂದೂ[೪] ಹೇಳುತ್ತಾನೆ.

ಈ ರೀತಿಯಾಗಿ ತಮಗೆ ತಿಳಿದ ಮಟ್ಟಿಗೆ ತಾವು ರೂಪಿಸಿಕೊಂಡ ಸೀಮಿತವಾದ ಧಾರ್ಮಿಕ ವಲಯದಲ್ಲಿ ಜೀವಿಸಿದ್ದ ಆದಿಮಾನವರು ಕೆಲವು ನಿಯಮ, ನಿಷ್ಠೆಗಳನ್ನು ಪರಿ

೧. ಸಮಾಜ ವಿಜ್ಞಾನ (ಪುಟ-೧೬೧-೧೬೨) ಪ್ರ. ಸಂ: ಡಾ. ಕೆ. ವಿ. ಪುಟ್ಟಪ್ಪ.

೨. ಈ. ಬ. ಟೈಲರನ Animism, (ಚೈತನ್ಯವಾದ) ಅನ್ನು ಮಾನವಶಾಸ್ತ್ರಜ್ಞ ಮ್ಯಾರೆಟ್ ಪುಷ್ಟಿಗೊಳಿಸಿದ್ದಾನೆ. —[ಸಾಮಾಜಿಕ ಮಾನವಶಾಸ್ತ್ರ (ಪುಟ-೧೩೬) ಎಂ. ನಂಜಮ್ಮಣ್ಣಿ.]

೩. ಸಮಾಜಶಾಸ್ತ್ರ (ಪುಟ-೧೯೭) ಲೇ. ಚನ್ನಬಸವಯ್ಯ.

೪. ಸಾಮಾಜಿಕ ಮಾನವಶಾಸ್ತ್ರ (ಪು-೧೩೪) ಎಂ. ನಂಜಮ್ಮಣ್ಣಿ.

ಪಾಲಿಸಿಕೊಂಡು ಬರುತ್ತಿದ್ದರು. ಅಲ್ಲದೆ ಕೆಲವು ವಿಶಿಷ್ಟತೆರನಾದ ನಂಬುಗೆಗಳನ್ನೂ ಹೊಂದಿದ್ದರು. ಅವುಗಳಲ್ಲಿ ಕೆಲವನ್ನು ಇಲ್ಲಿ ನೋಡಬಹುದು.

ಆದಿವಾಸಿಗಳಲ್ಲಿ ಶೆಮನ್ (Shaman) ಮಾದರಿಯ ವ್ಯಕ್ತಿ ಇರುತ್ತಿದ್ದ. ಈತ ಒಂದು ಕಡೆ ಮಾಂತ್ರಿಕನಾಗಿಯೂ, ಮತ್ತೊಂದು ಕಡೆ ವೈದ್ಯನಾಗಿಯೂ, ಮಗದೊಂದು ಕಡೆ ಧರ್ಮಪ್ರಚಾರಕನಾಗಿಯೂ ಕಾರ್ಯ ನಿರ್ವಹಿಸುತ್ತಿದ್ದ.[೫] ಪ್ರತಿಯೊಂದು ಧಾರ್ಮಿಕ ವಿಧಿವಿಧಾನಗಳಲ್ಲಿಯೂ ಈತನದೇ ಕೈವಾಡವಿರುತ್ತಿತ್ತು. ಈತನು ಸೃಷ್ಟಿಯ ರಹಸ್ಯಮಯ ಶಕ್ತಿ (Spirits)ಗಳನ್ನು ಪಡೆದವನೆಂಬ ಭಾವನೆ ಆದಿವಾಸಿಗಳಲ್ಲಿದೆ. ಜನತೆಯ ರೋಗನಿವಾರಣೆ, ಮೃತರಿಗೆ ಜೀವಬರಿಸುವುದು,[೬] ಭೂತಗಳ ಉಚ್ಚಾಟನೆ, ಮಳೆಯನ್ನು ಬರಿಸುವುದು ಇಲ್ಲವೆ ತಡೆಯುವುದು,[೭] ಮುಂತಾದ ಕಾರ್ಯಗಳನ್ನು ಆತನು ರಹಸ್ಯಮಯ ಅಲೌಕಿಕ ಶಕ್ತಿ (Supernaural power)ಗಳಿಂದಲೇ ಮಾಡುತ್ತಾನೆಂದೂ. ಆ ಶಕ್ತಿಗಳು ಆತನಿಗೆ ಮಳೆ, ಪಕ್ಷಿ, ಪಿಶಾಚಿಗಳ ರೂಪಗಳಲ್ಲಿ ಕಾಣಿಸಿಕೊಳ್ಳುತ್ತವೆಯೆಂದೂ ಆದಿವಾಸಿಗಳು ನಂಬಿದ್ದರು.

ಈ ಕಾರಣಗಳಿಂದ ಆದಿವಾಸಿಗರಲ್ಲಿ ಶೆಮನ್ ಪ್ರಮುಖ ವ್ಯಕ್ತಿಯೆನಿಸಿದ್ದ. ಆದಿವಾಸಿಗಳೆಲ್ಲರೂ ಈತನಿಗೆ ವಿಧೇಯರಾಗಿ ವರ್ತಿಸುತ್ತಿದ್ದರಲ್ಲದೆ, ಈತ ಅಸಾಮಾನ್ಯ ಪುರುಷ, ದೈವೀ ಪುರುಷನೆಂಬ ನಂಬುಗೆ ಅವರಲ್ಲಿ ಬೇರೂರಿತ್ತು.

ಆದಿವಾಸಿಗಳಲ್ಲಿ ಕೆಲ ವಿಶಿಷ್ಟ ವಸ್ತುಗಳಲ್ಲಿ ಅತಿಮಾನವಶಕ್ತಿ(Fetishism) ಯಿರುತ್ತದೆಯೆಂದು ನಂಬಿದರು. ಆ ವಸ್ತುಗಳೆಂದರೆ ವಿಚಿತ್ರ ಆಕಾರದ ಬೆನಕುಗಳು, ಅಂಕುಡೊಂಕಾದ ಕಟ್ಟಿಗೆ, ಸಾರಂಗದ ಕೋಡು, ಎಲುಬು ಇವೇ ಮೊದಲಾದ ವಸ್ತುಗಳ ಆರಾಧನೆಯಿಂದ ಯಾರಾದರೂ ಅಲೌಕಿಕ ಶಕ್ತಿಯನ್ನು ಪಡೆಯಬಹುದೆಂದು ಆತ ಭಾವಿಸಿದ್ದ. ಆದರೆ ಸಾಮಾನ್ಯವಾಗಿ ಈ ರೀತಿಯ ಆರಾಧನೆಯನ್ನು ಮಾಡುವ, ಅದರಿಂದ ಲಭಿಸುವ ಅತಿಮಾನುಷ ಶಕ್ತಿಯನ್ನು ಪಡೆಯುವ ಹಕ್ಕು ಶೆಮನ್(Shaman) ಮಾದರಿಯ ವ್ಯಕ್ತಿಗೇ ಮೀಸಲಾದುದೆಂದು ಆದಿಜನಾಂಗ ತಿಳಿದಿತ್ತು.[೧೦] ಇದಕ್ಕೆ ಆದಿಜನಾಂಗಗಳಲ್ಲಿ ಶೆಮನ್ ಮಾದರಿಯ ವ್ಯಕ್ತಿಯ ಪ್ರಭಾವ, ಪ್ರಭುತ್ವಗಳೇ ಕಾರಣವಿರಬಹುದೆಂದು ತೋರುತ್ತದೆ.

---

೫. ಅದೇ. (ಪು-೧೪೭) " —ಎಂ. ನಂಜಮ್ಮಣ್ಣಿ

೬. Man's Reigions (page-15)–Jhon. B. Noss.

೭. Encyclopaedia of Religion and Ethics, Vol-8.

೮. ಸಾಮಾಜಿಕ ಮಾನವಶಾಸ್ತ್ರ (ಪು-೧೪೮) ಎಂ. ನಂಜಮ್ಮಣ್ಣಿ).

೯. Man's Religions (page-15) Jhon. B. Noss.

೧೦. Encyclopaedia of Religion and Ethics, Vol-8.

'Belief in Mana' ಇದಕ್ಕೆ ಮನಃಶಾಸ್ತ್ರಜ್ಞರು ಗೂಢಶಕ್ತಿಯಲ್ಲಿಟ್ಟ ನಂಬುಗೆ ಎಂದು ಕರೆದಿದ್ದಾರೆ. ಈ ತೆರನಾದ ನಂಬುಗೆ ಮಧ್ಯ ಆಫ್ರಿಕೆಯ ಪಿಗ್ಮಿ, ದಕ್ಷಿಣ ಆಫ್ರಿಕೆಯ ಬಂಟು ಮೊರೊಕೊದ ಕಾಡುಜನಾಂಗ, ಭಾರತದ ಆದಿವಾಸಿಗಳು ಮುಂತಾದ ಪ್ರಪಂಚದ ಆದಿವಾಸಿಗಳಲ್ಲಿ ರೂಢಿಯಲ್ಲಿದೆ. ನಿಸರ್ಗದ ವಸ್ತುಗಳಲ್ಲಡಗಿದ **'Mana'** ಈ ಶಕ್ತಿಯನ್ನು ಮನುಷ್ಯನು ಪಡೆಯಬಹುದು. ಮತ್ತು ಇದು ಒಬ್ಬ ಮನುಷ್ಯನಿಂದ ಇನ್ನೊಬ್ಬನಿಗೂ ಹೋಗಬಹುದು. ಮತ್ತೆ ಅವರಿಂದ ಆ ಶಕ್ತಿ ಆ ವಸ್ತುಗಳಲ್ಲಿ ಅಡಗ ಬಹುದು ಎಂದು ತಿಳಿದಿದ್ದಾರೆ. 'It is a force that is thought to be transmissiable from objects in nature to man from one person to another; or again from persons to things.[೧೧] ಒಟ್ಟಾರೆಯಾಗಿ ಈ ಶಕ್ತಿ ಅಲೌಕಿಕ, ಅಸಾಮಾನ್ಯವಾದಂತಹುದು ಎಂದು ಅವರ ನಂಬುಗೆ.

ಇಂದು ಪ್ರಚಲಿತವಿದ್ದ ಪವಾಡ, ಅಥವಾ ಅಸಂಭಾವ್ಯ ಘಟನೆ. ಅಲೌಕಿಕ ಶಕ್ತಿ [miracle or Supernatural power]ಯ ಕಲ್ಪನೆ ನಿಸರ್ಗದ ರಹಸ್ಯ, ನಿಯಮ ನಿಬಂಧನೆಗಳನ್ನರಿಯದ ಆದಿಮಾನವನ ವಿಚಾರಶಕ್ತಿ ಇಲ್ಲವೆ ಈ ಮೇಲೆ ವಿವರಿಸಿದ ಆತನ ನಂಬುಗೆಗಳಲ್ಲಿ ಇದೆಯೆಂದು ಹೇಳಬಹುದು. "Magic or thaumaturgic miracle belongs to a quite primitive stage of thaught."[೧೨] ಆದಿಮಾನವನು ನಂಬಿಕೊಂಡು ಬಂದ ವಿಶಿಷ್ಟರೀತಿಯ ನಂಬುಗೆಗಳನ್ನವಲೋಕಿಸಿದಾಗ ಅವುಗಳಲ್ಲಿ ಇಂದು ನಾವು ಯಾವ ಸಂಗತಿಗಳಿಗೆ ಪವಾಡಗಳೆಂದು ಕರೆಯುತ್ತೇವೆಯೋ ಅವುಗಳ ಹುಟ್ಟಿನ ರಹಸ್ಯವಡಗಿದಂತಿದೆ.

ಹೇಗೆಂದರೆ, ಆದಿಮಾನವನ ನಂಬುಗೆಗಳು ಕಾಲದಿಂದ ಕಾಲಕ್ಕೆ ಸಾಗಿ ಬರುವಾಗ ಹಲವು ರೂಪಾಂತರಗಳನ್ನು ಹೊಂದುವುದು ಸಹಜ. ಹೀಗೆ ರೂಪಾಂತರ ಹೊಂದಿದರೂ ಅವು ಕೆಲಮಟ್ಟಿಗೆ ತಮ್ಮ ಮೂಲಗುಣಗಳನ್ನು ಹಾಗೆಯೇ ಉಳಿಸಿಕೊಂಡು ಬಂದು ದನ್ನು ಕಾಣುತ್ತೇವೆ. ಹೀಗೆ ಉಳಿದು ಬಂದುದರಿಂದ ಅವು ಸಮಾಜದಲ್ಲಿ ಎರಡು ವಿಧದ ಜನತೆಯನ್ನು ನಿರ್ಮಿಸಲು ಸಹಾಯಕಾರಿಗಳಾದಂತೆ ತೋರುತ್ತವೆ. ಸಾಮಾನ್ಯ ಜನ ಹಾಗೂ ಇವರಿಂದಲೇ ಅತಿಮಾನುಷರೆಂದು ಪರಿಗಣಿಸಲ್ಪಟ್ಟ ಅಸಾಮಾನ್ಯಜನ. ಸಾಮಾನ್ಯಜನ ಹೀಗೆ ಅವರನ್ನು ಪರಿಗಣಿಸಲು ಕಾರಣ ಅವರಲ್ಲಿ ಅದ್ಭುತ, ಅವ್ಯಕ್ತ ಶಕ್ತಿ ಯಿರುತ್ತದೆಯೆಂದು ನಂಬಿದುದು. ಈ ನಂಬುಗೆ ಅವರ ಪೂರ್ವಜರಿಂದ ಅವರಿಗೆ ಬಳುವಳಿಯಾಗಿ ಬಂದುದು ಇರಬೇಕು. ಸಾಮಾನ್ಯ ಜನತೆ ಎಂದಿನಿಂದ ಈ ಪ್ರಕಾರದ ಶ್ರದ್ಧೆ ತಾಳಿತೋ ಆಗಲೆ ಪವಾಡ [Supernatural Power]ಕ್ಕೆ ಹುಟ್ಟಿ ಬೆಳೆಯಲು ತಕ್ಕ ಮನೋಭೂಮಿಕೆ ನಿರ್ಮಾಣವಾಯಿತೆಂದು ತೋರುತ್ತದೆ.

---

೧೧. Man's Religions (page-15)–Jhon. B. Noss.
೧೨. Encyclopaedia of Religion and Ethics, vol-8.

ಆದಿಕಾಲದಲ್ಲಿ ಶೆಮನ್ (shaman) ಮಾದರಿಯ ವ್ಯಕ್ತಿ, ಮಂತ್ರವಾದಿ, ಭವಿಷ್ಯವಾದಿ ಮುಂತಾದವರು ನಿಸರ್ಗದಲ್ಲಡಗಿದ ಶಕ್ತಿ (spirit)ಗಳನ್ನು ವಿಶಿಷ್ಟ ರೀತಿಯ ಆರಾಧನೆಯ ಕ್ರಮಗಳಿಂದ ಪಡೆದುಕೊಳ್ಳುತ್ತಿದ್ದಂತೆ ನಂಬಲಾಗಿದ್ದಿತು. ಹೀಗೆ ಪಡೆದ ಆ ಅಲೌಕಿಕ ಶಕ್ತಿಗಳ ಪ್ರಭಾವ ಇಲ್ಲವೆ ಪ್ರದರ್ಶನದಿಂದ ಅವರು ಆದಿವಾಸಿಗಳಲ್ಲಿ ತಮ್ಮ ಬಗೆಗೆ ಭಯಭಕ್ತಿಗಳನ್ನು ಹುಟ್ಟಿಸಿ. ಆ ಮೂಲಕ ಅವರಿಂದ ತಮ್ಮ ಜೀವನ ನಿರ್ವಹಣೆ ಮಾಡಿಕೊಳ್ಳುತ್ತಿದ್ದುದಲ್ಲದೆ, ಇಡಿ ಆ ಜನಾಂಗಕ್ಕೇ ಅವರು ಪ್ರತಿಷ್ಠಿತ ಪೂಜನೀಯ ವ್ಯಕ್ತಿಗಳಾಗಿ ಬಾಳಿಕೊಂಡು ಬಂದುದು ತಿಳಿದುಬರುತ್ತದೆ.

With the advancement of civilization, even the shaman, oracle teller and the magician had been replaced by the seer, the prophet, the mystic and the yogi, the primitive practice of a holyman with supernatural powers continued with but slight modifications altered to this day."[೧೩] ಸೂಕ್ಷ್ಮವಾಗಿ ಗಮನಿಸಿದರೆ ಇಂದಿನ ನಾಗರಿಕತೆಯ ವಾತಾವರಣದಲ್ಲೂ ಶೆಮನ್, ಭವಿಷ್ಯವಾದಿ, ಮಂತ್ರವಾದಿಗಳ ಸ್ಥಾನವನ್ನು ಋಷಿಗಳು, ಸಾಧು–ಸಂತರು, ಆಧ್ಯಾತ್ಮಿಗಳು, ಪ್ರವಾದಿಗಳು ಮುಂತಾದವರು ಆಕ್ರಮಿಸಿದಂತಿದೆ. ಆದಿವಾಸಿಗಳಲ್ಲಿ ಅವರು ಪ್ರದರ್ಶಿಸುತ್ತಿದ್ದ ರಹಸ್ಯಮಯ (Spirits) ಶಕ್ತಿ, ಅಲೌಕಿಕ ಶಕ್ತಿಗಳೇ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಇಂದು ಸಾಧುಸತ್ಪುರುಷರು ಎಸಗುತ್ತಾರೆಂದು ಹೇಳುವ, ಆದರಂತೆಯೇ ಸಾಮಾನ್ಯ ಜನ ನಂಬಿಕೊಂಡು ಬಂದವುಗಳೆಂದರೆ ಪವಾಡಗಳು, ಎನ್ನುವ ಶ್ರೀ ಗೋಪಿಕೃಷ್ಣರ ಅಭಿಪ್ರಾಯವನ್ನು ಸಮರ್ಥಿಸಬಹುದು.

ಗ್ರಂಥ ಋಣ

೧. Man' Religions-Jhon. B. Noss.
೨. Encyclopaedia of Religion and Etihics, vol-8.
೩. Higer Conciousness-Gopikrshna.
೪. ಸಾಮಾಜಿಕ ಮಾನವಶಾಸ್ತ್ರ– ಎಂ. ನಂಜಮ್ಮಣ್ಣಿ.
೫. ಸಮಾಜವಿಜ್ಞಾನ–ಪ್ರ. ಸಂ. ಕೆ. ವಿ. ಪುಟ್ಟಪ್ಪ.

೧೩. Higher Conciousness- the Evelutionary thrust of Kundalini (page-104-105) Gopikrishna.

ಚಿತ್ರದುರ್ಗ ಪರಿಸರ : ಇತ್ತೀಚಿನ ಪುರಾತತ್ವ ಶೋಧನೆಗಳು

● ಅ. ಸುಂದರ

ಎತ್ತರದ ಬೆಟ್ಟದ ಸಾಲಿನ ಅಂಚಿನಲ್ಲಿರುವ ಚಿತ್ರದುರ್ಗ ನಗರವು ವಿಜಯನಗರ ಅರಸರ ಅಧೀನರಾಗಿದ್ದ ನಾಯಕರ (ಕ್ರಿ. ಶ. ೧೫೦೮-೧೭೭೯) ರಾಜ್ಯದ ರಾಜಧಾನಿಯಾಗಿ ಮೆರೆದದ್ದು ಇತಿಹಾಸ ಪ್ರಸಿದ್ಧ. ಅದರಲ್ಲೂ ಹಿಂದಿನ ಮೈಸೂರು ರಾಜ್ಯದ ಹೈದರಾಲಿಯು ಈ ಕೋಟೆನಗರಕ್ಕೆ ಮುತ್ತಿಗೆ ಹಾಕಿ ಗೆಲ್ಲಲು ಆಗದೆ ಕಳ್ಳತನದಿಂದ ಕೋಟೆಯೊಳಗೆ ಒಂದು ಕಿಂಡಿಯಿಂದ ಪ್ರವೇಶಿಸಲು ಪ್ರಯತ್ನಿಸುತ್ತಿದ್ದಾಗ ಕೋಟೆಯ ಕೊತ್ವಾಲನ ಹೆಂಡತಿ ಓಬವ್ವ ಧೈರ್ಯದಿಂದ ಅವರ ಪ್ರಯತ್ನವನ್ನು ವಿಫಲಗೊಳಿಸಿ ಕೋಟೆಯನ್ನು ಉಳಿಸಿದ ಕತೆ ಇಂದಿಗೂ ಮನೆ ಮಾತಾಗಿದೆ.

ಈ ನಾಯಕರ ಕಾಲದಲ್ಲಿ ಕಟ್ಟಿದ ಏಳು ಸುತ್ತಿನ ಕೋಟೆಯು, ತೋಪಿನ ಮದ್ದು ಅರೆಯುವ ಬೀಸುವ ಕಲ್ಲುಗಳು, ಇತರ ಕಟ್ಟಡಗಳು, ದೇವಾಲಯಗಳು ಕೆರೆಗಳು ಹೆಚ್ಚಿಗೆ ಹಾಳಾಗದೆ ಸುಸ್ಥಿತಿಯಲ್ಲಿದ್ದು ಗತವೈಭವದ ಮೂಕ ಸಾಕ್ಷಿಗಳಾಗಿವೆ. ಇವುಗಳೆಲ್ಲವನ್ನೂ ಕೂಲಂಕುಷವಾಗಿ ಅಭ್ಯಸಿಸಬೇಕಾಗಿದೆ.

ಈ ನಗರದ ಪಶ್ಚಿಮಕ್ಕೆ ಸುಮಾರು ೧೩ ಕಿ. ಮಿ. ದೂರದಲ್ಲಿ ಬೆಟ್ಟದ ಕೊಳ್ಳದಲ್ಲಿ ಚಂದ್ರವಳ್ಳಿ ಎಂಬ ಹೆಸರುಳ್ಳ ಒಂದು ಪ್ರಾಚೀನ ನಿವೇಶನ[1] ಇದೆ. ಈ ಕೊಳ್ಳದ ಮೂಲದ ಹತ್ತಿರವೆ ಒಂದು ಬಂಡೆಯ ಮೇಲೆ ಪ್ರಸಿದ್ಧವಾಗಿರುವ ಬನವಾಸಿ ಕದಂಬರಾಜ್ಯ ಸ್ಥಾಪಕ ಮಯೂರ ಶರ್ಮನ ಶಾಸನ[2] ಇರುವುದು. ಸುಮಾರು ಮೂರು ತಲೆಮಾರಿನ ಹಿಂದೆ, ಈ ನಿವೇಶನದುದ್ದಕ್ಕೂ ಒಂದು ನೀರಿನ ಕಾಲುವೆಯನ್ನು ಅಗೆವಾಗ ಹಲವಾರು

ಪ್ರಾಚೀನ ಸತುವಿನ ನಾಣ್ಯಗಳು, ಇಟ್ಟಿಗೆ ಕಟ್ಟಡಗಳ ಅವಶೇಷಗಳು, ಮೃತ್ ಪಾತ್ರೆಗಳ ಚೂರುಗಳು ದೊರೆತವು. ನಾಣ್ಯಗಳನ್ನು ಬ್ರಿಟಿಷ್ ವಸ್ತುಸಂಗ್ರಹಾಲಯಕ್ಕೂ ಮತ್ತು ಬೇರೆ ಕಡೆಗಳಿಗೂ ಕಳುಹಿಸಲಾಯಿತು. ಅವುಗಳಲ್ಲಿ ಕೆಲವನ್ನು ಇ. ಜೆ. ರ್‍ಯಾಪ್ಸನ್ನರ **ಬ್ರಿಟಿಷ್ ಮ್ಯೂಸಿಯಮ್ ಕ್ಯಾಟಲಾಗ್ ಆಫ್ ದಿ ಕಾಯಿನ್ಸ್ ಆಫ್ ದಿ ಆಂಧ್ರಾಸ್** ಎಂಬ ಪುಸ್ತಕದಲ್ಲಿ ಪ್ರಕಟಿಸಲಾಯಿತು. ೧೮೮೮ರಲ್ಲಿ ಎ. ಮೆರ್ವಿನ್ ಸ್ಮಿತ್‌ನೆಂಬ ಲೋಹತಜ್ಞರೊಬ್ಬರು ಈ ಪ್ರದೇಶದಲ್ಲಿ ಚಿನ್ನದ ನಿಕ್ಷೇಪ ಕುರುಹುಗಳೇನಾದರೂ ಇದೆಯೆ ಎಂದು ಶೋಧಿಸುತ್ತಿದ್ದಾಗ ಮತ್ತೆ ಕೆಲವು ನಾಣ್ಯಗಳು ದೊರೆತವು. ಅನಂತರ ಡಾ.ಡ್ರೀಪರ ಇಲ್ಲಿಯ ಪುರಾತತ್ವ ಅವಶೇಷಗಳನ್ನು ಕುರಿತು "ಮದ್ರಾಸ ಮ್ಯೇಲ್" ಎಂಬ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸಿದರು. ಆಗಿನ ಭಾರತದಲ್ಲಿಯ ಬ್ರಿಟಿಷ್ ಸರ್ಕಾರದ ಪುರಾತತ್ವ ಸರ್ವೇಕ್ಷಣ ವಿಭಾಗದ ಮಹಾ ನಿರ್ದೇಶಕರಾಗಿದ್ದ ಜೆ, ಎಚ್. ಮಾರ್ಷಲರ ಗಮನಕ್ಕೆ ಇದು ಬಂತು.ಆ ಮಹಾ ನಿರ್ದೇಶಕರು ೧೯೦೮ ಮ ನಲ್ಲಿ ಮಾಡಿಕೊಂಡ ವಿನಂತಿಯಂತೆ ಆಗಿನ ಮೈಸೂರು ಸರ್ಕಾರದ ಪುರಾತತ್ವ ಸರ್ವೇಕ್ಷಣ ಶಾಖೆಯ ನಿರ್ದೇಶಕರಾದ ಆರ್. ನರಸಿಂಹಾಚಾರ್ಯರು ಈ ಸ್ಥಳವನ್ನು ನೋಡಿ ಒಂದೆರೆಡು ಕಡೆಗಳಲ್ಲಿ ಗುಂಡಿಗಳನ್ನು ಅಗೆದು ಪರೀಕ್ಷಿಸಿದರು. ಅವರಿಗೆ ಇಲ್ಲಿ ಸುಮಾರು ೨೦೦೦ ವರ್ಷಗಳ ಹಿಂದೆ ಇದ್ದ ಒಂದು ಪಟ್ಟಣ ಹಾಳಾಗಿದ್ದು ಖಚಿತವಾಯಿತು. ತಮಗೆ ದೊರೆತ ಮಹತ್ವದ ಸಾಂಸ್ಕೃತಿಕ ಅವಶೇಷಗಳನ್ನು ತಮ್ಮ ಶಾಖೆಯ ೧೯೦೯ನೇ ವರ್ಷದ ವಾರ್ಷಿಕ ವರದಿಯಲ್ಲಿ ಪ್ರಕಟಿಸಿದರು. ಮತ್ತು ಆ ನಿವೇಶನವನ್ನು ವೈಜ್ಞಾನಿಕವಾಗಿ ಉತ್ಖನನ ಮಾಡಬೇಕೆಂದು ತಿಳಿಸಿದರು. ಅನಂತರ ೧೯೨೮ರಲ್ಲಿ ಆಗಿನ ಈ ಶಾಖೆಯ ನಿರ್ದೇಶಕರಾಗಿದ್ದ ಡಾ. ಎಂ. ಎಚ್. ಕೃಷ್ಣರವರು ೩೬ ಗುಂಡಿಗಳನ್ನು ತೆಗೆದು ಸ್ವಲ್ಪ ದೊಡ್ಡ ಪ್ರಮಾಣದಲ್ಲಿಯೇ ಉತ್ಖನನ ಮಾಡಿದರು. ಆರೇಳು ಬೃಹತ್ ಶಿಲಾ ಸಂಸ್ಕೃತಿಯ ಕಲ್ಗೋರಿಗಳು. ಇತಿಹಾಸ ಪ್ರಾರಂಭಕಾಲದ ಕೆಲವು ಇಟ್ಟಿಗೆ ಕಟ್ಟಡಗಳು, ಶಾತವಾಹನ ಅರಸರ ಮಾಂಡಲಿಕರ ನಾಣ್ಯಗಳು, ರೋಂ ಚಕ್ರಾಧಿಪತ್ಯದ ನಾಣ್ಯಗಳು, ವಿಧವಿಧವಾದ ಮೃತ್ ಪಾತ್ರೆಗಳು ಇವೇ ಮೊದಲಾದ ಮಹತ್ವದ ಅವಶೇಷಗಳು ದೊರೆತವು. ಅಲ್ಲಿ ಪಂಚಪಾಂಡವರ ಮತ್ತು ಹಿಡಿಂಬಾಸುರನ ಹೆಸರುಗಳಿಂದ ಕರೆಯಲ್ಪಟ್ಟ ದೇವಾಲಯಗಳ, ಮಯೂರ ಶರ್ಮನ ಹಾಗು ಬೇರೆ ಮೂರು ಶಾಸನಗಳ, ನಾಯಕರ ಕಾಲದ ಗಚ್ಚಿನಿಂದ ಅಲಂಕರಿಸಲ್ಪಟ್ಟ ಮತ್ತು ಚಿತ್ರಿಸಲ್ಪಟ್ಟ ಅಂಕಲಿಮಠದ, ಇತರ ಕೆಲವು ದೇವಾಲಯಗಳ, ಪ್ರಾಚೀನ ನೆಲೆಯಲ್ಲಿಯ ಒಂದು ಬಂಡೆಯ ಮೇಲಿನ ಹುಲಿಯ ರೇಖಾಚಿತ್ರದ, ಮತ್ತು ಅಲ್ಲಲ್ಲಿ ಸಿಕ್ಕ ನೂತನ ಶಿಲಾಯುಗದ ಉಜ್ಜಿ ನಯಮಾಡಿದ ಕಲ್ಲಿನ ಕೊಡಲಿಗಳ ಹಾಗು ಉತ್ಖನನದಲ್ಲಿ ದೊರೆತ ಅವಶೇಷಗಳ ವರದಿಯನ್ನು ಸಂಕ್ಷಿಪ್ತವಾಗಿ ಪ್ರಕಟಿಸಿದರು, ೧೯೪೭ರ ನಂತರ ಆಗಿನ ಕೇಂದ್ರ ಸರ್ಕಾರದ ಶಾಖೆಯ ಮಹಾ ನಿರ್ದೇಶಕರಾಗಿದ್ದ ಸರ್ ಮಾರ್ಟಿಮರ್ ವ್ಹೀಲರ್‌ರವರು ದಖಿನ್ ಪ್ರಸ್ಥಭೂಮಿ ಪ್ರದೇಶದಲ್ಲಿ ಒಂದು ಮಹತ್ವದ ಪುರಾತತ್ವ ನೆಲೆಯನ್ನು ವೈಜ್ಞಾನಿಕವಾಗಿ ಉತ್ಖನನ ಮಾಡಬೇಕೆಂಬ ಉದ್ದೇಶದಿಂದ ಡಾ. ಕೃಷ್ಣರವರ

ಉತ್ಖನನದಲ್ಲಿ ದೊರೆತ ಪುರಾತತ್ವ ಅವಶೇಷಗಳನ್ನು ಪರೀಕ್ಷಿಸಿದರು. ರೋಂ ಚಕ್ರಾಧಿಪತ್ಯದ ನಾಣ್ಯಗಳಲ್ಲಿ ಆಗಸ್ಟಸ್ (ಕ್ರಿ. ಪೂ. ೨೭ -ಕ್ರಿ. ಶ. ೧೪) ಮತ್ತು ಟೈಬಿರಿಯಸ್ (ಕಿ. ಶ. ೧೪–೩೭) ಚಕ್ರವರ್ತಿಗಳ ಎರಡೆರಡು ನಾಣ್ಯಗಳಿದ್ದವು. ಮತ್ತು ಆ ದೇಶದ "ರೌಲಟೆಡ್" ಎಂಬ ತಾಂತ್ರಿಕ ವಿಧಾನದಿಂದ ಮೂಡಿಸಲ್ಪಟ್ಟ ಚಿತ್ರಗಳುಳ್ಳ ಮಣ್ಣಿನ ತಟ್ಟೆಗಳ ಚೂರುಗಳಿದ್ದವು. ಆದ್ದರಿಂದ ಅವರಿಗೆ ಈ ನೆಲೆಯು ಸಂಸ್ಕೃತಿಯ ಕಾಲಮಾನ ನಿರ್ಧರಿಸಲು ಸಾಧ್ಯವಾಗಬಹುದಂಥ ಮಹತ್ವದ್ದಾಗಿಯೂ ತೋರಿತು. ೧೯೪೭ ಮಾರ್ಚ್-ಮೇ ಸಮಯದಲ್ಲಿ ಈ ನೆಲೆಯಲ್ಲಿ ಮತ್ತೆ ಅತ್ಯಂತ ಅಚ್ಚುಕಟ್ಟಾಗಿ, ಕ್ರಮಬದ್ಧವಾಗಿ, ಹಾಗು ವೈಜ್ಞಾನಿಕವಾಗಿ ಉತ್ಖನನ ನಡೆಸಿದರು. ಉತ್ಖನನದಿಂದ ಇಲ್ಲಿಯ ಜನಸಾಮಾನ್ಯ ಸಂಸ್ಕೃತಿಯ ಬೆಳವಣಿಗೆಯಲ್ಲಿ ಎರಡು ಸ್ಪಷ್ಟ ಹಂತಗಳನ್ನೂ ಗುರುತಿಸಲಾಯಿತು. ಮೊದಲಿನ ಅಂದರೆ ಪ್ರಾಚೀನ ಹಂತ ಬೃಹತ್ ಶಿಲಾಸಂಸ್ಕೃತಿಗೆ ಹೋಲುವಂಥಾದ್ದು. ಇದರ ಮುಂದಿನ ಹಂತವೇ ಶಾತವಾಹನ ರಾಜರ ಕಾಲದ್ದು. ಈ ಹಂತದಲ್ಲಿ ಶಾತವಾಹನ ಅರಸರಾದ (ವಾಸಿಷ್ಠಿಪುತ್ರ) ಶ್ರೀ ಪುಳುಮಾವಿ (ಕ್ರಿ. ಶ. (೧೩೧–೧೫೫) ಶ್ರೀ ಯಜ್ಞ ಶಾತಕರ್ಣಿ (ಕ್ರಿ. ಶ. ೧೭೯–೧೯೬)[೧೦] ಮತ್ತು ಅವರ ಮಾಂಡಲಿಕ ಅರಸರ ಸದಕಣ ಕಳಲಾಯ ಮಹಾರಥಿ, ಸದಕಣ ಚುಟು ಕುನ್ಹ ಮಹಾರಥಿ ಎಂಬ ಹೆಸರುಗಳುಳ್ಳ ನಾಣ್ಯಗಳು ಮುದ್ರಾಂಕಿತ (Punch-marked coin) ನಾಣ್ಯವು ಟೈಬಿರಿಯಸ್ಸನ ರೋಮನ್ ದಿನಾರಗಳು ಮತ್ತು ಇತರ ಜನಸಾಮಾನ್ಯ ನಿತ್ಯ ಜೀವನದ ಸಾಂಸ್ಕೃತಿಕ ಅವಶೇಷಗಳು ದೊರೆತವು. ಉತ್ಖನನದ ವಿವರಣೆಗಳನ್ನು ಫಲಿತಾಂಶಗಳನ್ನು ಸವಿಸ್ತರವಾಗಿ ಪ್ರಕಟಿಸಲಾಯಿತು.

ಇತ್ತೀಚೆಗೆ ಕರ್ನಾಟಕ ಸರ್ಕಾರವು ಇಲ್ಲಿ ಒಂದು ಜಲಾಶಯವನ್ನು ನಿರ್ಮಿಸಬೇಕೆಂದು ಯೋಜನೆ ಹಾಕಿದಾಗ ಈ ನೆಲೆಯ ಮುಖ್ಯ ಅವಶೇಷಗಳನ್ನು ರಕ್ಷಿಸುವುದಕ್ಕೋಸ್ಕರ ಕೇಂದ್ರ ಸರಕಾರದ ಪುರಾತತ್ವ ಸರ್ವೇಕ್ಷಣ ಶಾಖೆಯು ಫೆಬ್ರವರಿ–ಮಾರ್ಚ್ ೭೮ ರಲ್ಲಿ ಮತ್ತೆ ಉತ್ಖನನವನ್ನು ನಡೆಸಿತು. ಆ ನೆಲೆಯಲ್ಲಿಯ ಬಂಡೆ ಮೇಲಿನ ಹುಲಿ ಚಿತ್ರವನ್ನು ನೋಡಬೇಕೆಂದು ಹೋದಾಗ ನನಗೆ ಅದೇ ಉತ್ಖನನದ ಕೊನೆಯ ಹಂತವನ್ನು ನೋಡುವ ಅವಕಾಶ[೧೧] ಸಿಕ್ಕಿತು. ಅಂಥ ರೇಖಾಚಿತ್ರಗಳು ಇನ್ನೂ ಇರಬಹುದೆಂದು ಅವುಗಳನ್ನು ಶೋಧಿಸಬೇಕೆಂದು ಯೋಚಿಸಿದೆ. ನಾನು ಉತ್ಖನನವನ್ನು ನೋಡಿದ ಸಮಯದಲ್ಲಿ ಮತ್ತೊಂದು ಬಂಡೆಯ ಮೇಲೆ ಒಂದು ರೇಖಾಚಿತ್ರವಿದ್ದುದನ್ನು ಉತ್ಖನನದ ಅಧಿಕಾರಿಗಳು ತೋರಿಸಿದರು.

ಈ ಉತ್ಖನನದ ಒಂದು ಗುಂಡಿಯ ಅತ್ಯಂತ ಕೆಳಗಿನ ಸಾಂಸ್ಕೃತಿಕ ಪದರಿನಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಮೃತ್ ಪಾತ್ರೆಗಳ ಕೆಲವೊಂದು ತುಣುಕುಗಳು, ಮತ್ತೊಂದು ಗುಂಡಿಯಲ್ಲಿ ಒಂದು ಇಟ್ಟಿಗೆ ಕಟ್ಟಡದ ಎರಡು ಗೋಡೆಗಳು ಶೋಧವಾಗಿರುವುದು ಅತ್ಯಂತ ಗಮನಾರ್ಹ. ಹಿಂದೆ ನೂತನ ಶಿಲಾಯುಗ ಸಂಸ್ಕೃತಿಯ ಕೊಡಲಿ

ಗಳು ಸಿಕ್ಕಿದ್ದು ಮೇಲೆ ಹೇಳಿದೆಯಷ್ಟೇ. ಈಗ ಇತ್ತೀಚಿನ ಉತ್ಖನನದಲ್ಲಿ ಈ ಸಂಸ್ಕೃತಿಯ ಮೃತ್ ಪಾತ್ರೆಯ ಚೂರುಗಳು ಸಿಕ್ಕವು. ಆದರೆ ಈ ಚೂರುಗಳು ಸಿಕ್ಕ ಪದರು ಈ ಸಂಸ್ಕೃತಿಯದ್ದಾಗಿರದೆ ಸು. ಕ್ರಿ. ಪೂ. ೧-ಕ್ರಿ. ಶ. ೧ನೇ ಶತಮಾನದ ಇತಿಹಾಸ ಪ್ರಾರಂಭಕಾಲದ ಸಂಸ್ಕೃತಿಯದಾಗಿತ್ತು. ಇಷ್ಟೆಲ್ಲ ಅನ್ವೇಷಣೆಗಳಿಂದಲೂ, ಉತ್ಖನನ ಗಳಿಂದಲೂ ನೂತನಶಿಲಾಯುಗದ ಸಂಸ್ಕೃತಿಯ ಆಕಸ್ಮಿಕವಾಗಿ ಚದುರಿದ ಅವಶೇಷಗಳು ದೊರೆತವೇ ಹೊರತು, ಅದರ ನೆಲೆಯು ಸ್ಪಷ್ಟವಾಗಿ ಗುರುತಿಸಲಾಗಲಿಲ್ಲ. ಹಾಗಾದರೆ ನೂತನ ಶಿಲಾಯುಗ ಸಂಸ್ಕೃತಿಯ ಜನರು ಅಲ್ಲಿಯೇ ಎಲ್ಲೋ ವಾಸಮಾಡಿದ್ದಿರಬೇಕು. ಆ ನೆಲೆ ಅಲ್ಲಿಯೇ ಎಲ್ಲೋ ಸಮೀಪದಲ್ಲಿರಬೇಕು ಎಂಬ ಕುತೂಹಲ ನನ್ನನ್ನು ಕಾಡು ತ್ತಿತ್ತು.

ಆ ನಗರದಲ್ಲಿರುವ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ತಿಮ್ಮಣ್ಣನಾಯಕನ ಕೆರೆಯ ಹತ್ತಿರವಿರುವ ಮತ್ತು ಕೋಟೆಯ ೫–೬ ಹೆಬ್ಬಾಗಿಲುಗಳ ಮಧ್ಯದಲ್ಲಿರುವ ಬಂಡೆಯ ಮೇಲಿರುವ ಕೋಣನ ರೇಖಾ ಚಿತ್ರಗಳ ಛಾಯಾ ಚಿತ್ರ ಗಳನ್ನೂ ನೋಡಿದೆ. ಇವೆಲ್ಲ ನನಗೆ ಇಲ್ಲಿ ಇವುಗಳ ಬಗ್ಗೆ ಕೂಲಂಕುಷವಾಗಿ ಅನ್ವೇಷಣೆ ಮಾಡಲು ಉತ್ತೇಜನ ಕೊಟ್ಟವು. ಆದ್ದರಿಂದ ಜೂನ ತಿಂಗಳು ೧೯–೨೫ರ ಸಮಯ ದಲ್ಲಿ ಚಿತ್ರದುರ್ಗದ ಪರಿಸರದಲ್ಲೆಲ್ಲ ಸುತ್ತಾಡಿದೆ. ಈ ಅನ್ವೇಷಣೆಯಲ್ಲಿ ಇವುಗಳ ಬಗ್ಗೆ ನನಗೆ ತಿಳಿದ ಹೊಸ ವಿಚಾರಗಳನ್ನು ಮತ್ತು ಹೊಸ ಶೋಧನೆಗಳನ್ನು ಈ ಲೇಖನದಲ್ಲಿ ವಿವೇಚಿಸಿದ್ದೇನೆ.

I. ನೂತನ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆ

ಈ ನಗರಕ್ಕೆ ಹೊಂದಿರುವ ಬೆಟ್ಟದ ಸಾಲಿನ ವಿರುದ್ಧ ಬದಿಯಲ್ಲಿ ತಿಮ್ಮಣ್ಣ ನಾಯಕನ ಕೆರೆಯಿದೆ. ಈ ಕೆರೆಯ ಬಳಿಯಲ್ಲಿ ಒಂದು ಬಂಡೆಯ ಮೇಲಿರುವ ಕಾಡು ಕೋಣನ ರೇಖಾಚಿತ್ರವಿರುವುದನ್ನು ಮೇಲೆ ಹೇಳಿದೆಯಷ್ಟೆ. ಅದನ್ನು ಹುಡುಕಲು ಆ ಭಾಗದಲ್ಲಿಯ ಬೆಟ್ಟದ ಬಂಡೆಗಳನ್ನು ಪರೀಕ್ಷಿಸುತ್ತಿದ್ದಾಗ, ಬೆಟ್ಟದ ಅಂಚಿನ ಸರದಲ್ಲಿ ಅಲ್ಲಲ್ಲಿ ಮೃತ್ ಪಾತ್ರೆಗಳ ಚೂರುಗಳಿದ್ದುದೂ ತೋರಿತು. ಅವುಗಳನ್ನು ಪರೀಕ್ಷಿಸಲಾಗಿ ಕೆಲವು ಬೃಹತ್‌ಶಿಲಾ ಸಂಸ್ಕೃತಿಯದ್ದಾಗಿಯೂ ಮತ್ತೆ ಕೆಲವು ನೂತನ ಶಿಲಾಯುಗ ಸಂಸ್ಕೃತಿಯದ್ದಾಗಿಯೂ ಕಂಡು ಬಂತು. ಆ ಸರವನ್ನು ಇನ್ನೂ ಸೂಕ್ಷ್ಮವಾಗಿ ಪರಿಶಿಲಿಸಿ ದಾಗ ಈ ಅವಶೇಷಗಳು ಅಲ್ಲಿಲ್ಲ ಹೆಚ್ಚಿನ ಪ್ರಮಾಣದಲ್ಲಿದ್ದುದು, ಒಂದು ಕಲ್ಲಾಸರೆಯ ಕೆಳಗೆ ಮೃತ್ ಪಾತ್ರೆಗಳ ಅವಶೇಷಗಳೊಡನೆ ಒಂದು ಉಜ್ಜಿ ನಯಮಾಡಿದ ಮೈಯುಳ್ಳ ಕಲ್ಲಿನ ಕೊಡಲಿಯೂ ಮತ್ತು ಕೋಣನ ದೊಡ್ಡ ರೇಖಾಚಿತ್ರವುಳ್ಳ ಬಂಡೆಯ ಬಳಿ ಯಲ್ಲೆ ಇಂಥ ಮೃತ್ ಪಾತ್ರೆಗಳ ಅವಶೇಷಗಳಿದ್ದುದು ಸ್ಪಷ್ಟವಾಯಿತು.

ನಗರದ ಭವ್ಯವಾದ ಮೂರನೆ ಕೋಟೆ ಬಾಗಿಲಿನ ಬದಿಯ ರಸ್ತೆಯಿಂದ ಮುಂದಕ್ಕೆ ಹೋದರೆ ಒಂದು ಹನುಮಂತನ ದೇವಾಲಯವು ಮತ್ತೂ ಮುಂದಕ್ಕೆ ಬೆಟ್ಟದಂಚಿನೊಡನೆ ಬಲಕ್ಕೆ ತಿರುಗಿದಾಗ ಒಂದು ಆಂಜನೇಯನ, ಕರ್ವತೇಶ್ವರನ ದೇವಾಲಯಗಳಿವೆ. ಇಲ್ಲಿಂದ ಮುಂದಕ್ಕೆ ದೇವಾಲಯದ ಹಿಂಬದಿಗೆ ಒಂದು ಕೆರೆಯ ಒಡ್ಡು ಇದೆ. ಇದನ್ನು ದಾಟಿ ಹಾಗೆಯೇ ಬೆಟ್ಟದಂಚಿನಲ್ಲಿ ಸ್ವಲ್ಪ ಮುಂದೆ ಹೋದರೆ ಈ ಅವಶೇಷಗಳಿರುವ ಸರವು ಶುರುವಾಗುವುದು. ಎಡಬದಿಗೆ ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆಯ ತೋಟವಿದೆ. ಈ ಸಂಸ್ಕೃತಿಗಳ ಮೃತ್‌ಪಾತ್ರೆಗಳ ಅವಶೇಷಗಳು ಮುಂದೆ ತಿಮ್ಮಣ್ಣನಾಯಕನ ಕೆರೆಯ ಒಡ್ಡಿನಿಂದ ಮುಂದಿರುವ ಒಂದು ವಿಶಾಲವಾದ ಬೆಟ್ಟದ ಕಣಿವೆಯವರೆಗೂ ಅಂದರೆ ಸುಮಾರು ೩ ಕಿ. ಮಿ. ದೂರದಷ್ಟು ಉದ್ದಕ್ಕೂ ವಿರಳವಾಗಿ ಇವೆ. ತೋಟಗಾರಿಕೆಗಾಗಿ ಆ ಪ್ರದೇಶವನ್ನು ಅಗೆದಾಗ ಏನಾದರೂ ಅವಶೇಷಗಳು ಸಿಕ್ಕಿರಬಹುದೆಂಬ ಅನುಮಾನದಿಂದ ಅದರ ಕೆಲಸಗಾರರನ್ನು ವಿಚಾರಿಸಿದೆ. ಅವರು ಅಲ್ಲಿ ಅಗೆದಾಗ ಪೆಟ್ಟಿಗೆಯಾಕಾರದ ಕಲ್ಲಿನ ಕೋಣೆಗಳು ಅವುಗಳಲ್ಲಿ ಮೃತ್‌ಪಾತ್ರೆಗಳ ಅವಶೇಷಗಳು ಹಾಗು ಎಲುಬಿನ ಚೂರುಗಳು ಸಿಕ್ಕಿದವೆಂದು ತಿಳಿಸಿದರು. ಅವರ ಹೇಳಿಕೆಯು ಡಾ. ಎಂ. ಎಚ್. ಕೃಷ್ಣರವರ ಉತ್ಖನನದಲ್ಲಿ ದೊರೆತ ಐದಾರು ಕಲ್ಗೋರಿಗಳು ಜ್ಞಾಪಕಕ್ಕೆ ತಂದಿತು. ಆದ್ದರಿಂದ ಬೆಟ್ಟಿನಲ್ಲಿ ಬೆಟ್ಟದಂಚಿನಿಂದ ಬಹುಶಃ ತೋಟ ಮತ್ತು ತಿಮ್ಮಣ್ಣನಾಯಕನ ಕೆರೆಯ ಪ್ರದೇಶವೇ ಇವೆರಡು ಸಂಸ್ಕೃತಿಗಳ ಜನರ ವಾಸ್ತವ್ಯದ ನೆಲೆಯಾಗಿತ್ತೆಂಬುದು ನಿಸ್ಸಂಶಯವಾಗಿ ತಿಳಿದು ಬಂತು.

ಬಂಡೆ ರೇಖಾ ಚಿತ್ರಗಳು (Rock-engravings)


ಮೇಲೆ ಹೇಳಿದ ಕಾಡು ಕೋಣ (ಚಿತ್ರ 1: ೧)ನ ಚಿತ್ರದಲ್ಲಿ ಈ ಪ್ರಾಣಿಯ ಎಡಭಾಗದ ಬಾಹ್ಯರೇಖೆಯನ್ನು ಮಾತ್ರ ಬಿಡಿಸಲಾಗಿದೆ. ಆದರೂ ಅದರ ಬಲಿಷ್ಠತೆಯು ರೇಖೆಯ ಲಾಲಿತ್ಯದಿಂದ ಮನಮುಟ್ಟುವ ಹಾಗಿದೆ. ಇದು ಸ್ವಲ್ಪ ಹೆಚ್ಚು ಕಡಿಮೆ ಪೂರ್ವಾಭಿಮುಖವಾಗಿದೆ. ಬಲವಾದ ಮುಸುಡಿ. ಎದ್ದು ಕಾಣುವ ಬಿದಿಗೆ ಚಂದ್ರಾಕೃತಿಯ ಕೋಡುಗಳು, ಉಬ್ಬಿದಬೆನ್ನು, ಸುಮಾರು ೧.೫೦ ಮಿ. ಉದ್ದ ೧. ಮಿ. ಎತ್ತರ. ಇದನ್ನು ಬಿಡಿಸಿದ ಚಿತ್ರಕಾರನು ಪ್ರಾಣಿಯ ಅವಯವಗಳ ಪ್ರಮಾಣಬದ್ಧತೆ ಪರಿಮಿತಗಳನ್ನು ಸೂಕ್ಷ್ಮವಾಗಿ ಗಮನಿಸಿ ಅದರಂತೆಯೆ ರೇಖೆಗಳನ್ನು ಎಳೆಯುವುದರಲ್ಲಿ ನುರಿತವನು ಎಂಬುದು ಸತ್ಯ.

ಇದರಿಂದ ಮುಂದೆ ತಿಮ್ಮಣ್ಣನಾಯಕನ ಕೆರೆಯ ಒಡ್ಡಿನ ಹತ್ತಿರದ ಬಂಡೆಯ ಮೇಲೆ ಒಂದು, ಇದರ ಹಿಂದೆ ಸಮೀಪದಲ್ಲಿಯ ಮತ್ತೊಂದು ಬಂಡೆಯ ಮೇಲೆ ಎರಡು ಇಂಥ ಪ್ರಾಣಿಗಳ ರೇಖಾ ಚಿತ್ರಗಳಿವೆ. ಮೊದಲನೆಯದರಲ್ಲಿ ಹಿಂಭಾಗ ಮಾತ್ರ ಸ್ಪಷ್ಟ

ಚಿತ್ರ 1



೧



೨

ಚಿತ್ರದುರ್ಗ : ಬಂಡೆ ರೇಖಾ ಚಿತ್ರಗಳು, ೧, ೨, ಕಾಡುಕೋಣ.

ಚಿತ್ರ 2



೧. ಚಿತ್ರದುರ್ಗ: ಗೂಳಿ



೨. ಚಂದ್ರವಳ್ಳಿ : ಹುಲಿ

ವಾಗಿದೆ. ಎರಡನೇಯದರಲ್ಲಿ ಈ ಪ್ರಾಣಿಯ ಎರಡು ಚಿತ್ರಗಳಿವೆ. ಪ್ರಮಾಣದಲ್ಲಿ ಸಣ್ಣವು (ಚಿತ್ರ 1; ೨).

ಕೋಟೆಗಳ ೫–೬ನೇ ಹೆಬ್ಬಾಗಿಲುಗಳ ನಡುವಿನ ಒಂದು ಬಂಡೆಯ ಮೇಲೆ ರೇಖಾ ಚಿತ್ರವಿರುವುದನ್ನು ಮೇಲೆ ಹೇಳಿದೆಯಷ್ಟೆ. ಇದು (ಚಿತ್ರ 2; ೧) ಬಹುಶಃ ಒಂದು ಗೂಳಿಯ ಚಿತ್ರವೆಂದು ಹೇಳಬಹುದು. ಇದರ ಕೋಡುಗಳು ಸ್ವಲ್ಪಮಟ್ಟಿಗೆ ರೋಮನ್ ಲಿಪಿಯ ಆಕಾರದಲ್ಲಿದ್ದು ರೇಖೆಗಳು ಹೊರಬದಿಯಲ್ಲಿ ಸ್ವಲ್ಪ ಉಬ್ಬಿವೆ. ಕೋಡುಗಳ ತುದಿಗಳು ಅಡ್ಡವಾಗಿ ಬಾಗಿವೆ. ಕುತ್ತಿಗೆಯ ಮೇಲೆ ಅಡ್ಡ ರೇಖೆಯಿದ್ದು ಹಗ್ಗದ ಸರವನ್ನು ಸೂಚಿಸುವುದೇನೋ ಎಂಬ ಸಂಶಯ. ದೇಹವು ನೀಳವಾಗಿದೆ. ಆದ್ದರಿಂದ ಸ್ವಲ್ಪ ಸಪೂರವಾಗಿ ಕಾಣುತ್ತದೆ. ಇದರ ತಲೆಯ ಹತ್ತಿರ ಪ್ರತ್ಯೇಕ ಆದರೆ ಅರ್ಥ ತಿಳಿಯಲಾಗದ ಒಂದು ಸಣ್ಣ ರೇಖಾ ಚಿತ್ರವಿದೆ.

ಇವೆಲ್ಲ ಚಿತ್ರಗಳ ರೇಖೆಗಳು ಸ್ವಲ್ಪ ದಪ್ಪವಾಗಿದ್ದು ತಗ್ಗಾಗಿರುವುದು ವೈಶಿಷ್ಟ್ಯ. ರೇಖೆ ತೆಗೆದ ಭಾಗವು ನಯವಾಗಿದೆ. ಇವು ಬಹುಶಃ ನೂತನ ಬೃಹತ್ ಶಿಲಾಯುಗ ಸಂಸ್ಕೃತಿಗಳ ಪರಸ್ಪರ ವ್ಯಾಪ್ತಿಯ ಕಾಲದ್ದೆಂದು(ಸು. ಕ್ರಿ. ಪೂ.೯೦೦-೭೦೦)ಹೇಳಬಹುದು.

ಗೂಳಿಯ ಚಿತ್ರವಿರುವ ಬಂಡೆಯ ಪಕ್ಕದಲ್ಲಿರುವ ಮತ್ತೊಂದು ಬಂಡೆಯ ಮೇಲೆ ಸ್ವಲ್ಪ ಮಟ್ಟಿಗೆ ಬಸವನ ಹುಳುವನ್ನು ಹೋಲುವ ಒಂದು ಚಿತ್ರವು ಮತ್ತು ಇತರ ಅಸ್ಪಷ್ಟ ಚಿತ್ರಗಳಿವೆ. ಆದರೆ ರೇಖೆಗಳು ಸ್ವಲ್ಪ ಹೊಸದಾಗಿ ತೆಗೆದ ಹಾಗೆ ಕಾಣುತ್ತದೆ. ಆದರೂ ಕನಿಷ್ಠ ೨೦೦ ವರ್ಷಗಳ ಹಿಂದಿನದ್ದೆಂದು ಹೇಳಬಹುದು. ಏಕೆಂದರೆ ಕೆಲವು ಚಿತ್ರಗಳ ಮೇಲೆ ಇನ್ನು ನಾಯಕರ ಕಾಲದ ಜನವಸತಿಯ ಹಾಳು ಮಣ್ಣು ಇದೆ. ಮೊದಲು ಇವೆಲ್ಲ ಚಿತ್ರಗಳು ಈ ಮಣ್ಣಿನಲ್ಲಿ ಮುಚ್ಚಿದ್ದು ಮಳೆಯ ದೆಸೆಯಿಂದ ಸ್ವಲ್ಪಭಾಗ ತೊಳೆದು ಹೋದ್ದರಿಂದ ಕೆಲವು ಮಾತ್ರ ಕಾಣಿಸುತ್ತಿವೆ.

ನೂತನ-ಬೃಹತ್ ಶಿಲಾ ಸಂಸ್ಕೃತಿಗಳ ೨ನೇ ನೆಲೆ

ಕೋಟೆಯ ೫–೬ನೇ ಸುತ್ತುಗಳೊಳಗಿನ ಬಂಡೆ ಚಿತ್ರಗಳಿಂದ ಮುಂದೆ ೭ನೇ ಸುತ್ತಿಗೆ ಹೋಗುವ ದಾರಿಯಲ್ಲಿ ನಾಯಕರ ಕಾಲದ ಗಣೇಶ ದೇವಾಲಯವು, ೭ನೇ ಸುತ್ತಿನೊಳಗೆ ಹಿಡಿಂಬೇಶ್ವರ, ಸಂಪಿಗೆ ಸಿದ್ಧೇಶ್ವರ, ಏಕನಾಥೇಶ್ವರಿ ದೇವಾಲಯಗಳು, ಇವುಗಳಿಗೆ ಸೇರಿದ ಹಾಗೆ ರಥದೋಪಾದಿಯಲ್ಲಿರುವ ಪ್ರತ್ಯೇಕ ಪ್ರತ್ಯೇಕ ಗೋಪುರಗಳು, ಸ್ವಲ್ಪದೂರದಲ್ಲಿ ಗೋಪಾಲಕೃಷ್ಣ ದೇವಾಲಯ, ಧ್ವಜಸ್ತಂಭಗಳು, ಇವಲ್ಲದೆ ಅರಸರ ಇಟ್ಟಿಗೆಯ ಮತ್ತು ಮಣ್ಣಿನ ಕಟ್ಟಡಗಳು ಇವೆ. ಈ ಸ್ಥಳದಿಂದ ಸ್ವಲ್ಪ ಕೆಳಗೆ ಪರ್ಜನ್ಯೇಶ್ವರ, ಕಾಶಿ ವಿಶ್ವೇಶ್ವರ, ತುಂಗಭದ್ರೇಶ್ವರ, ಆಂಜನೇಯನ ದೇವಾಲಯಗಳು, ಕೊಳಗಳು ಇವೆಲ್ಲ ಸರ್ವವಿದಿತ.

ಕಾಶಿ ವಿಶ್ವೇಶ್ವರ ದೇವಾಲಯದಿಂದ ಸಮೀಪದ ಇಕ್ಕಟ್ಟಿನ ಹಾದಿಯಲ್ಲಿ ಬೆಟ್ಟವನ್ನು ಇಳಿಯುತ್ತಾ ಒನಕೆ ಓಬವ್ವನ ಕಿಂಡಿಯ ಮೂಲಕ ಬೆಟ್ಟದ ಮೇಲಿನ ಕೆಳಸುತ್ತಿನ ಕೋಟೆಯೊಳಗೆ ಹೋದರೆ ಫಲ್ಗುಣೇಶ್ವರ ದೇವಾಲಯವು ಕಾಣುತ್ತದೆ. ಇಲ್ಲಿಂದ ಕೆಳಗಿನ ಬಯಲು ಪ್ರದೇಶದಲ್ಲಿರುವ ಚಂದ್ರವಳ್ಳಿಯ ಪ್ರಾಚೀನ ನೆಲೆಯು ಸುಮಾರು ೩ ಕಿ. ಮಿ. ದೂರದಲ್ಲೆ ಇದೆ; ಮತ್ತು ಅದರ ಪೂರ್ವ ಭಾಗವು ಕಾಣುತ್ತದೆ.

ಏಳನೇ ಸುತ್ತಿನ ಕೋಟೆಯೊಳಗಿನ ಮಣ್ಣಿನ ಕಟ್ಟಡದ ಸುತ್ತಲೂ ನಾಯಕರ ಕಾಲದ ಜನವಸತಿಯಿದ್ದ ಹಾಳುಮಣ್ಣು ನೆಲದಲ್ಲಿಯೆ ಹಗೆ (ಕಣಜ)ಗಳು ಇವೆ. ಇಲ್ಲಿಂದ ಕಾಶಿ ವಿಶ್ವೇಶ್ವರ ದೇವಾಲಯದ ವರೆಗಿನ ಪ್ರದೇಶದಲ್ಲಿ ಬಹಳ ಸೂಕ್ಷ್ಮವಾಗಿ ನೆಲೆಯನ್ನು ನೋಡುತ್ತಾ ಹೋದರೆ ಅಲ್ಲೊಂದು ಇಲ್ಲೊಂದು ನೂತನ ಮತ್ತು ಬೃಹತ್ ಶಿಲಾ ಯುಗದ ಮೃತ್‌ಪಾತ್ರೆ ಚೂರುಗಳು ಸಿಗುತ್ತವೆ.

ಫಲ್ಗುಣೇಶ್ವರ ದೇವಾಲಯದ ಹಿಂದೆ ಎಡಬಲ ಬದಿಗಳಲ್ಲಿಯವು ಕೋಟೆಯಂತೆ ಬೆಟ್ಟದಿಂದ ಆವೃತವಾದ ಪ್ರದೇಶದಲ್ಲಿ ಹೇರಳ ಪ್ರಮಾಣದಲ್ಲಿ ನೂತನ–ಬೃಹತ್-ಶಿಲಾ ಯುಗ ಸಂಸ್ಕೃತಿಗಳ ಬೂದು ಹಾಗು ಕಪ್ಪು-ಕೆಂಪು ದ್ವಿವರ್ಣದ, ಕೆಂಪು ಬಣ್ಣಗಳ ಮೃತ್‌ಪಾತ್ರೆಗಳ ಚೂರುಗಳು, ಉಜ್ಜಿ ನಯಮಾಡಿದ ಮೈಯುಳ್ಳ ಕಲ್ಲಿನ ಕೊಡಲಿಗಳು ಇವೆ. ಅಲ್ಲಿಯ ಒಂದು ಕೊರಕಲಿನಲ್ಲಿ ಕನಿಷ್ಠ ೧ಮಿ. ನಷ್ಟು ಈ ಸಂಸ್ಕೃತಿಗಳ ಹಾಳು ಮಣ್ಣು ಕಾಣಿಸುತ್ತದೆ.

ಈಗ ಈ ಸಂಸ್ಕೃತಿಗಳ ಬಗ್ಗೆ ಮೇಲೆ ಹೇಳಿದ ವಿಷಯಗಳನ್ನೆಲ್ಲ ಸಮಗ್ರವಾಗಿ ಪರಿಶೀಲಿಸಿದಾಗ ತಿಮ್ಮಣ್ಣನಾಯಕನ ಕೆರೆಯ ಪ್ರದೇಶದಲ್ಲಿರುವ ನೆಲೆ ಮತ್ತು ಫಲ್ಗುಣೇಶ್ವರ ದೇವಾಲಯದ ಹತ್ತಿರವಿರುವ ೨ನೇ ನೆಲೆ ಸ್ವಲ್ಪ ಹೆಚ್ಚು ಕಡಿಮೆ ಕ್ರಮವಾಗಿ ಬೆಟ್ಟದ ದಕ್ಷಿಣ ಮತ್ತು ಉತ್ತರ ಬದಿಗಳಲ್ಲಿದ್ದು ಇವೆರೆಡರ ಮಧ್ಯದ ಬೆಟ್ಟದ ಮೇಲಿನ ಹಾದಿಯಿಂದ ಒಂದಕ್ಕೊಂದು ಪರಸ್ಪರ ಸಂಬಂಧವಿತ್ತೆಂದು ತೋರುತ್ತದೆ. ಈ ಹಾದಿಯಲ್ಲೆ ಅಡ್ಡಲಾಗಿ ಬಾಗಿದ ಕೋಡುಗಳುಳ್ಳ ಗೂಳಿಯ ಚಿತ್ರವೂ ಅಲ್ಲೊಂದು ಇಲ್ಲೊಂದು ಈ ಸಂಸ್ಕೃತಿಗಳ ಮೃತ್‌ಪಾತ್ರೆಗಳ ಅವಶೇಷಗಳೂ ಇವೆ.

ಫಲ್ಗುಣೇಶ್ವರ ಬದಿಯಲ್ಲಿರುವ ೨ನೇ ನೆಲೆಯು ಬೃಹತ್ ಶಿಲಾ ಸಂಸ್ಕೃತಿಯ ಕೊನೆಯ ಹಂತದಲ್ಲಿ ಅಲ್ಲಿಯೆ ಕೆಳಗೆ ಕಾಲಾನುಕ್ರಮದಲ್ಲಿ ಚಂದ್ರವಳ್ಳಿಯೆಂದು ಕರೆಯಲಾದ ಬೆಟ್ಟದಂಚಿನ ಬಯಲು ಪ್ರದೇಶದಲ್ಲಿ ಈ ಸಂಸ್ಕೃತಿಯ ಜನರು ವಾಸಮಾಡಲು ತೊಡಗಿದ ಸ್ವಲ್ಪ ಸಮಯದಲ್ಲೇ ಇತಿಹಾಸ ಪ್ರಾರಂಭ ಕಾಲದ ಸಂಸ್ಕೃತಿಯ ಹಂತವು ಶುರುವಾಯಿತೆಂದೆನ್ನಬಹುದು. ವೀಲ್ಲರವರತ್ತನನ ಉದಲ್ಲಿ Ch–43ನೇ ಗುಂಡಿ[೧೩]ಯಲ್ಲಿ ನಿಸರ್ಗದ ನೆಲೆ (ಪದರು ೧೩ NE)ಯ ಮೇಲಿನ ಎರಡು ಪದರು (೧೩N, ೧೨)ಗಳಲ್ಲಿ

ಅಂದರೆ ಅತ್ಯಂತ ಕೆಳಗಿನ ಎರಡು ಪದರುಗಳ ಸುಮಾರು ೧೫ ಮಿ. ಆಳದಷ್ಟು ಹಾಳು ಮಣ್ಣಿನಲ್ಲಿ ಬೃಹತ್ ಶಿಲಾ ಮತ್ತು ಇತಿಹಾಸ ಪ್ರಾರಂಭಕಾಲದ ಸಂಸ್ಕೃತಿಗಳ ಅವಶೇಷ ಗಳು ದೊರೆತವು. ಆದರೆ ಮೊದಲನೆಯದರದ್ದೆ ಹೆಚ್ಚಾಗಿತ್ತು. ಈ ಎಲ್ಲ ಪದರುಗಳಲ್ಲಿ ಮೇಲೆ ಹಳದಿ ಬಣ್ಣದ ಲೇಪನವುಳ್ಳ ಬಿಳಿ ಬಣ್ಣದ ರೇಖಾ ಚಿತ್ರಗಳುಳ್ಳ ಮೃತ್ ಪಾತ್ರೆಯ ಚೂರುಗಳೂ ಅಲ್ಪಪ್ರಮಾಣದಲ್ಲಿ ಇದ್ದವು. ಈ ವಿಶಿಷ್ಟ ಲಕ್ಷಣವುಳ್ಳ ಮೃತ್ ಪಾತ್ರೆಯು ಸಾಮಾನ್ಯವಾಗಿ ಇತಿಹಾಸ ಪ್ರಾರಂಭಕಾಲದಿಂದ ಬಳಕೆಗೆ ಬಂತೆಂದು ದಕ್ಷಿಣ ಭಾರತದ ಹಲವಾರು ಉತ್ಖನನಗಳಿಂದ ತಿಳಿದು ಬಂದಿದೆ. ಪದರುಗಳು ೧೦ ರಿಂದ ೧೭ರ ವರೆಗಿನ ಅವಶೇಷಗಳಲ್ಲಿಯೇ ಕೆಳಗಿನವುದರೊಳಗೆ ಶಾತವಾಹನರ ಕಾಲದ ಸತುವಿನ ನಾಣ್ಯಗಳು ಮೇಲಿನವುದರೊಳಗೆ (೫-೧) ಈ ನಾಣ್ಯಗಳೊಡನೆ ರೋಮನ್ ದಿನಾರವು ದೊರೆತವು. ಅಂದರೆ ಈ ಹಂತದಲ್ಲಿ ಇಲ್ಲಿದ್ದ ಜನವಸತಿಯೂ ನಗರವಾಗಿ ಬೆಳೆಯಿತು. ಆದ್ದರಿಂದ ನನ್ನ ಇತ್ತೀಚಿನ ಪುರಾತತ್ವ ಶೋಧನೆಯಲ್ಲಿ ಕೃಷ್ಣರವರ ಅನ್ವೇಷಣೆಯಲ್ಲಿ ದೊರೆತ ಕಲ್ಲಿನ ಕೊಡಲಿಗಳು ಮತ್ತು ೧೯೭೭ರ ಕೇಂದ್ರ ಸರಕಾರದ ಪುರಾತತ್ವ ಸರ್ವೇ ಕ್ಷಣ ಶಾಖೆಯ ಉತ್ಖನನದಲ್ಲಿ ದೊರೆತ ನೂತನ ಶಿಲಾಯುಗ ಸಂಸ್ಕೃತಿಯ ಕೆಲವೇ ಮೃತ್ ಪಾತ್ರೆಗಳ ಚೂರುಗಳು ಎಲ್ಲಿಂದ ಬಂದಿರಬಹುದೆಂಬುದು ಗೊತ್ತಾದುದಲ್ಲದೆ, ಮೊದಲಿನ ಶೋಧನೆಗಳಿಂದ ತಿಳಿದಿದ್ದ ಇತಿಹಾಸ ಪ್ರಾರಂಭಕಾಲದ ಮತ್ತು ಇದರ ಮೊದಲಿನ ಹಂತದೊಡನೆ ಇದ್ದ ಬೃಹತ್ ಶಿಲಾ ಸಂಸ್ಕೃತಿಯ ಪೂರ್ವಭಾಗ ಹಾಗು ಇದಕ್ಕೆ ಹೊಂದಿಕೊಂಡ ಹಾಗೆ ಇದಕ್ಕೂ ಹಿಂದಿನ ನೂತನ ಶಿಲಾಯುಗ ಸಂಸ್ಕೃತಿಯ ಹಂತವೂ ಸಿಕ್ಕಿದೆಯೆಂಬುದು ಗಮನಾರ್ಹ. ಹಿಂದಿನ ಶೋಧನೆಗಳಿಂದ ಇಲ್ಲಿಯ ಸಂಸ್ಕೃತಿಯ ಪ್ರಾಚೀನತೆಯನ್ನು ಸುಮಾರು ಕ್ರಿ. ಪೂ. ೨ನೇ ಶತಮಾನದವರೆಗೂ ಗುರುತಿಸ ಬಹುದಾಗಿತ್ತು. ಈಗಿನ ಶೋಧನೆಗಳಿಂದ ಸುಮಾರು ಕ್ರಿ. ಪೂ. ೨ನೇ ಶತಮಾನದಿಂದ ಕ್ರಿ. ಪೂ. ೧೮೦೦ರ ವರೆಗೆ ಒಯ್ಯಬಹುದಾಗಿದೆ. ಆದ್ದರಿಂದ ಈ ಕಾಲದ ಜನಜೀವನದ ಚಿತ್ರವನ್ನು ತಿಳಿಯಲು ಫಲ್ಗುಣೇಶ್ವರ ದೇವಾಲಯದ ಬಳಿಯ ೨ ನೆಲೆಯು ಉತ್ಖನನಕ್ಕೆ ಯೋಗ್ಯ.

ಚಂದ್ರವಳ್ಳಿ ನೆಲೆಯಲ್ಲಿಯ ಬಂಡೆ ಚಿತ್ರ

ಈ ನೆಲೆಯ ಪೂರ್ವಭಾಗದಲ್ಲಿ ಉತ್ತರಾಭಿಮುಖವಾಗಿರುವ ಒಂದು ಆಳವಾದ ನೀರಿನ ಕೊರಕಲು ಇದೆ. ಇದರ ಪೂರ್ವದ ಬದಿಯ ಮಣ್ಣಿನಲ್ಲಿ ಮುಕ್ಕಾಲು ಭಾಗ ಮುಚ್ಚಿದ ಒಂದು ಬಹುದೊಡ್ಡ ಬಂಡೆಯಿದೆ. ಇದರ ಪಶ್ಚಿಮ ಬದಿಯು ಮಣ್ಣು ಕೊಚ್ಚಿಕೊಂಡು ಹೋಗಿರುವುದರಿಂದ ಬಂಡೆಯ ಕಡಿದಾದ ಸಮತಲ ಮೈ ಕಾಣುತ್ತದೆ. ಈ ಬಂಡೆಯ ಎರಡು ಬದಿಗಳಲ್ಲಿ ಸುಮಾರು ೧ಮಿ. ಆಳದಷ್ಟು ಇತಿಹಾಸ ಪ್ರಾರಂಭ ಕಾಲದ ಹಾಳು ಮಣ್ಣು ಇದೆ.

ಈ ಬಂಡೆಯ ಮೇಲೆ ಒಂದು ಅಪರೂಪ ತರಹದ ರೇಖಾಚಿತ್ರವಿದೆ. ನಾಲ್ಕು ಬದಿಗಳಲ್ಲೂ ಒಳಬಾಗುಳ್ಳ ಮತ್ತು ಬಾಗಿದ ಮೂಲೆಗಳುಳ್ಳ ಒಂದು ಚೌಕಟ್ಟಿನ ಒಳಗೂ


ಮತ್ತು ಮೇಲೂ ಕೆಳಗೂ ಬರುವ ಹಾಗೆ ಒಬ್ಬ ಮನುಷ್ಯನ, ಅದರ ಮುಂದೆ ಸೊಂಟದ ಕೆಳಭಾಗವನ್ನು ಮಾತ್ರ ತೋರಿಸಿರುವ ದೊಡ್ಡ ಆಕೃತಿಯ ಮನುಷ್ಯನ, ಇವನ ಬಲಬದಿಗೆ ಒಂದು ಪ್ರಾಣಿಯ (ನಾಯಿ?) ಹಿಂಭಾಗದ ಚಿತ್ರಗಳಿವೆ. ದೊಡ್ಡ ಆಕೃತಿಯ ಮನುಷ್ಯನ ಪಾದಗಳನ್ನು ಅವುಗಳ ಬೆರಳುಗಳನ್ನು ಬಿಡಿಸಲಾಗಿದೆ. ಪ್ರಾಣಿ ಮುಂದೆ, ಅದರ ಹಿಂದೆ ಈ ಮನುಷ್ಯನು ಹೋಗುತ್ತಿರುವ ಹಾಗಿದೆ. ದೊಡ್ಡ ಆಕಾರದ ಮನುಷ್ಯನ ಮೇಲ್ಭಾಗದ ರೇಖಾ ಚಿತ್ರ ಕಾಣಿಸುವುದಿಲ್ಲ. ಮೂಲದಲ್ಲಿ ಪೂರ್ತಿ ಇದ್ದು ಆ ಭಾಗ ಯಾವಾಗಲೂ ಗಾಳಿ, ಮಳೆಗೆ ಸಿಕ್ಕುತ್ತಿದ್ದರಿಂದ ಅಳಿಸಿ ಹೋಗಿದೆ. ಈಗ ಈ ಚಿತ್ರವನ್ನು ಕೊರಕಲಿನ ಪಶ್ಚಿಮ ದಂಡೆಯಿಂದ ನೋಡಲು ಸಾಧ್ಯ. ಆ ಬಂಡೆಯ ಹತ್ತಿರ ಹೋಗಿ ಮೇಲ್ಭಾಗವನ್ನು ಎತ್ತರದ ಏಣಿಯ ಸಹಾಯವಿಲ್ಲದೆ ಸೂಕ್ಷ್ಮವಾಗಿ ಪರೀಕ್ಷಿಸಲು ಆಗುವುದಿಲ್ಲ. ಪ್ರಾಣಿಯ ಮುಂಭಾಗವನ್ನು ಮತ್ತು ದೊಡ್ಡ ಆಕೃತಿಯ ಮುಂಡ ರುಂಡ ಭಾಗವನ್ನು ಬಿಡಿಸಲೆ ಇಲ್ಲವೆನ್ನುವುದು ಅಸಹಜವಾಗಿ ಕಾಣುತ್ತದೆ.

ಈಗ ಈ ರೇಖಾಚಿತ್ರವನ್ನು ಆ ಬಂಡೆಯ ಸುತ್ತಲೂ ಇತಿಹಾಸ ಪ್ರಾರಂಭಕಾಲದ ಜನರು ವಾಸಿಸುತ್ತಿದ್ದ ಕಾಲದಲ್ಲೆ ಒಂದು ಹಂತದಲ್ಲಿ ಆ ಜನರೆ ಬಿಡಿಸಿದರೆ ಅಥವಾ ಈ ಸಂಸ್ಕೃತಿಯ ಹಾಳು ಮಣ್ಣಿನಿಂದ ಅರೆವಾಸಿ ಮುಚ್ಚಿ ಹೋಗಿದ್ದ ಬಂಡೆಯ ಬದಿಯಲ್ಲಿ ಕಾಲಾಂತರದಲ್ಲಿ ಕೊರಕಲು ಬಿದ್ದು ಕಾಣುವ ಹಾಗೆ ಆದ ಮೇಲೆ ಬಿಡಿಸಲಾಯಿತೆ ಎಂಬ ಪ್ರಶ್ನೆ ಏಳುತ್ತದೆ.


ಬಂಡೆಯ ಎರಡು ಬದಿಗಳನ್ನು ಸೂಕ್ಷ್ಮವಾಗಿ ನೋಡಿದರೆ ಬಂಡೆಯ ಬುಡದಲ್ಲಿ ಸುಮಾರು ೫–೧೦ ಸೆಂ. ಮಿ. ನಷ್ಟು ಹಾಳು ಮಣ್ಣು ಇದೆ. ಇದರ ಕೆಳಗೆ ನಿಸರ್ಗದ ಗರಸು ಕೆಂಪು ಮಣ್ಣು ಇದೆ. ಅಂದರೆ ಆ ಭಾಗದಲ್ಲಿ ಜನವಸತಿ ಇದ್ದಾಗ ಅಲ್ಲಿ ಬಂಡೆ ಇರಲಿಲ್ಲ. ಕ್ರಮೇಣ ಅಲ್ಲಿಯೇ ಸ್ವಲ್ಪ ಮೇಲೆ ಇದ್ದ ಈ ಬಂಡೆಯು ಜರಿದಿರಬೇಕು. ಅಥವ ಬಂಡೆಯ ಬುಡದ ಸುತ್ತಲೂ ನೀರಿನ ಕೊರೆತದಿಂದ ಮಣ್ಣು ಹೋಗಿದ್ದು ಕ್ರಮೇಣ ಅಲ್ಲಿ ಜನ ವಸತಿ ಪ್ರಾರಂಭವಾದ ಮೇಲೆ ಕೊರೆದ ಭಾಗದಲ್ಲಿ ಹಾಳು ಮಣ್ಣು ತುಂಬಿರಬೇಕು. ಇವೆಲ್ಲ ಸಂಶಯಗಳ ಸತ್ಯಾಸತ್ಯತೆಯನ್ನೂ ತಿಳಿಯಲು ಬಂಡೆಯ ಬುಡದಲ್ಲಿ ಸುಮಾರು ೧ ಮಿ. ನಷ್ಟು ಒಳಗಾದರು ಸುರಂಗವನ್ನೂ ತೆಗೆದರೆ ತಿಳಿಯುವುದು. ಇದು ಒಂದು ಅಂಶ.

ಇನ್ನೊಂದು ಅಂಶವೆಂದರೆ ರೇಖಾ ಚಿತ್ರಗಳು ಪೂರ್ತಿಯಾಗಿ ಮುಚ್ಚಿ ಹೋಗುವಷ್ಟು ಎತ್ತರ ಹಾಳು ಮಣ್ಣು ಇತ್ತು. ಆ ಪ್ರದೇಶದಲ್ಲಿ ಇತಿಹಾಸ ಪ್ರಾರಂಭಕಾಲದ ನಂತರ ಜನವಸತಿ ಇದ್ದ ಗುರುತುಗಳಿಲ್ಲ. ಕೇವಲ ಮಯೂರ ಶರ್ಮನು ಕೆರೆ ನಿರ್ಮಿಸಿದ ಶಾಸನ ಮಾತ್ರ ಅಲ್ಲಿ ಇದೆಯೇ ಹೊರತು ಆ ಕಾಲದ ಜನವಸತಿ ಇದ್ದ ಕುರುಹುಗಳಿಲ್ಲ. ಮತ್ತು ಕದಂಬರ ಕಾಲದಿಂದ ಯಾವ ಚಿತ್ರವನ್ನೇ ಆಗಲಿ ಅದರ ಎಲ್ಲ ಅಂಗಾಂಗ

ಚಿತ್ರ 3



ಚಂದ್ರವಳ್ಳಿ : ೧, ೨ ಮತ್ತು ೩; ಮಯೂರಶರ್ಮನ ಶಾಸನದ ಬಂಡೆ ಬುಡದಲ್ಲಿ ಶಿವಲಿಂಗ


ಚಿತ್ರದುರ್ಗ : ೧ : ಹಿಡಿಂಬೇಶ್ವರ ಲಿಂಗ

೨, ೩ ಅರವೆಲಂ; ಕೈವಲಯಣದಲ್ಲಿರುವ ಲಿಂಗಗಳು

ಲಕ್ಷಣಗಳನ್ನು ಸರಿಯಾಗಿ ಬಿಡಿಸಲಾಗಿರುತ್ತದೆ. ಕದಂಬರ ಕಾಲದಲ್ಲಿ ಜನವಸತಿ ಅಲ್ಲೆಲ್ಲೊ ಇದ್ದಿರಲೇಬೇಕು. ಅವ್ವರಿಂದಲೇ ಮಯೂರ ಶರ್ಮನು ಕೆರೆಯನ್ನು ಕಟ್ಟಿಸಿದನು. ಆದರೆ ಆ ನಿವೇಶನ ಇನ್ನೂ ಶೋಧಪಾಗಿಲ್ಲ. ಅಂಕಲಿಮಠದಲ್ಲಿ ಕಂಡುಬರುವ ನಿರ್ಮಿತಿ ಗಳೆಲ್ಲ ನಾಯಕರ ಕಾಲದ್ದು. ನಾಯಕರ ಮತ್ತು ಅವರ ಹಿಂದಿನ ಕಾಲದಲ್ಲಿ ಕಲ್ಲಿನಲ್ಲಿ ಮೂರ್ತಿಯನ್ನು ಕೆತ್ತಲು ಮೊದಲು ರೇಖಾಚಿತ್ರವನ್ನು ಮೂಡಿಸುವ ಕ್ರಮವೇ ಬೇರೆ. ಈಗ ಈ ಬಂಡೆ ರೇಖಾಚಿತ್ರದ ರೇಖೆಗಳನ್ನು ಬಿಡಿಸಿರುವ ಕ್ರಮವನ್ನು ನೋಡಿದರೆ ಅದು ಮೇಲೆ ಹೇಳಿದ ನೂತನ–ಬೃಹತ್ ಶಿಲಾ ಸಂಸ್ಕೃತಿ ಹಂತದ ಗೂಳಿ ಮತ್ತು ಕಾಡುಕೋಣದ ಚಿತ್ರಪಟ್ಟಗಳಿಗೆ ಹೋಲುತ್ತದೆ. ರೇಖಾಚಿತ್ರದ ವಿಷಯವನ್ನು ಮತ್ತು ಮನುಷ್ಯರ ಬಾಹ್ಯ ರೇಖೆಗಳನ್ನು ಮಾತ್ರ ಹಾಗೆ ದೊಡ್ಡ ಪ್ರಮಾಣದ ಮನುಷ್ಯ ಕಾಲಿನ (ಮೂರು ಮೂರು) ಬೆರಳನ್ನು ಬಿಡಿಸಿರುವ ಶೈಲಿಯು[೧೪]ನ್ನೂ ಅನುಲಕ್ಷಿಸದಾಗ ಇದು ಬೃಹತ್ ಶಿಲಾ–ಇತಿಹಾಸ ಪ್ರಾರಂಭ ಕಾಲದ್ದೆನ್ನಬಹುದು.

II ಶಿಲ್ಪಗಳು


೧. ಅಪರೂಪದ ಶಿವಲಿಂಗ (ಚಿತ್ರ 3: ೧. ೨, ೩).

ಮಾರ್ಚ್ ೭೮ರಲ್ಲಿ ಈ ಚಂದ್ರವಳ್ಳಿ ನೆಲೆಯ ಪ್ರದೇಶದಲ್ಲಿಯ ನನ್ನ ಅನ್ವೇಷಣೆ ಯಲ್ಲಿ ಮಯೂರ ಶರ್ಮನ ಶಾಸನವಿರುವ ಬಂಡೆಯ ಕೆಳಗಡೆ ಸಂದಿಯಲ್ಲಿ ಒಂದು ಶಿವಲಿಂಗವು ಬಿದ್ದಿರುವುದು ನನ್ನ ಗಮನ ಸೆಳೆಯಿತು. ಉತ್ತರ ಕರ್ನಾಟಕದಲ್ಲೆಲ್ಲ ನಾನು ನೋಡಿದ ಶಿವಲಿಂಗಗಳಲ್ಲಿ ಇದು ಅಪರೂಪವಾಗಿ ತೋರಿತು.[೧೫] ಸುಮಾರು ೧.೫೦ ಮಿ. ಎತ್ತರ. ಸಾಮಾನ್ಯವಾಗಿ ೬–೭ನೇ ಶತಮಾನದಿಂದ ಶಿವಲಿಂಗವು ಕೆಳಭಾಗ ಚೌಕೋನ. ಮಧ್ಯಭಾಗ ಅಷ್ಟಕೋನ ಮತ್ತು ಮೇಲ್ಭಾಗ ವರ್ತುಳಾಕಾರವಾಗಿದ್ದು ಹೆಚ್ಚು ಕಡಿಮೆ ಈ ಮೂರು ಭಾಗಗಳು ಒಂದಕ್ಕೊಂದು ಅಳತೆಯಲ್ಲಿ ಸಮವಾಗಿರುತ್ತವೆ. ಈ ಭಾಗಗಳಿಗೆ ಕ್ರಮವಾಗಿ ಬ್ರಹ್ಮ, ವಿಷ್ಣು, ಮತ್ತು ಶಿವಭಾಗಗಳೆಂದು ಮೂರ್ತಿ ಶಿಲ್ಪ ಗಳಲ್ಲಿ ನಿರ್ದೇಶಿಸಲಾಗಿದೆ. ಆದರೆ ಈ ಲಿಂಗದಲ್ಲಿ ಎರಡೇ ಭಾಗಗಳಿರುವುದು ವೈಶಿಷ್ಟ್ಯ. ಕೆಳಭಾಗ ಆಯತಾಕಾರ (ಸು. ೫೫ × ೧೮ಸೆ. ಮಿ.)ವಾಗಿದ್ದು ೦. ೯೨ ಸೆ. ಮಿ. ಎತ್ತರ ವಿದೆ. ಮೇಲ್ಭಾಗ (೫೦ಸೆ. ಮಿ. ಎತ್ತರ)ವು ಅಂಡಾಕೃತಿಯಲ್ಲಿದ್ದು ಮೇಲಕ್ಕೆ ಸಪೂರ ವಾಗುತ್ತ ಹೋಗುತ್ತದೆ. ಮಧ್ಯದಲ್ಲಿ ಸ್ವಲ್ಪ ಉಬ್ಬಿದೆ. ಕೆಳಗೆ ಮತ್ತು ಮಧ್ಯದಲ್ಲಿ ಸ್ವಲ್ಪ ಉಬ್ಬಿದೆ. ಕೆಳಗೆ ಮತ್ತು ಮಧ್ಯದಲ್ಲಿ ಸುಮಾರು ೨೭, ೨೮ ಸೆ. ಮಿ. ಮೇಲೆ ೧೭ ಸೆ. ಮಿ. ಅಗಲವಿದೆ. ಇವೆರಡು ಭಾಗಗಳ ಮಧ್ಯ ಭಾಗವು ಸುಮಾರು ೮ ಸೆ. ಮಿ. ಅಗಲದಷ್ಟು ಕೊರೆಯಲ್ಪಟ್ಟು ಕಂಠದ ಹಾಗೆ ಕಿರಿದಾಗಿದ್ದು ಸುಮಾರು ೨೫ ಸೆ. ಮಿ. ಅಗಲವಿರುವುದು ಮತ್ತೊಂದು ವೈಶಿಷ್ಟ್ಯ. ಈ ಅಂಡಾಕೃತಿಯ ಒಂದು ಮುಖದ ಎರಡು ಅಂಚುಗಳುದ್ದಕ್ಕೂ ಮತ್ತು ಮಧ್ಯದಲ್ಲಿ ಊರ್ಧ್ವ ಉಬ್ಬಿದ ರೇಖೆಗಳಿವೆ.

ಊರ್ಧ್ವ ರೇಖೆಯ ತುದಿಯಿಂದ ಪಾರ್ಶ್ವನಾಡಿಗಳು ಇಳಿಬಿದ್ದು ಕೆಳಗೆ ಸುತ್ತು ಹಾಕಿ ಒಂದಾಗಿವೆ. ಈ ಪಾರ್ಶ್ವನಾಡಿಗಳು ಕೊರೆದರೇಖೆಗಳು. ಉಳಿದೆಲ್ಲೆಡೆಗಳಲ್ಲಿ ಮಧ್ಯ ಮತ್ತು ಪಾರ್ಶ್ವನಾಡಿಗಳುಳ್ಳ ಬ್ರಹ್ಮಸೂತ್ರವನ್ನು ಕೊರೆದ ರೇಖೆಗಳಿಂದಲೆ ಸೂಚಿಸಲಾಗಿದೆ. ಇಲ್ಲಿ ಮಾತ್ರ ಬದಿಯಲ್ಲಿ ಅಂಡಾಕೃತಿಯ ಉಬ್ಬಿದ ರೇಖೆಯಿರುವುದು. ಊರ್ಧ್ವ ಮಧ್ಯನಾಡಿಯನ್ನು ಉಬ್ಬಿದ ರೇಖೆಯಿಂದ ತೋರಿಸಿರುವುದು ಇನ್ನೊಂದು ವೈಶಿಷ್ಟ್ಯ ಕೊನೆಯ ಎರಡು ವಿಶಿಷ್ಟ ಲಕ್ಷಣಗಳನ್ನು ಬಿಟ್ಟರೆ, ಈ ಲಿಂಗವು ಅಂಕೋಲದ ಬಳಿ ಬೋಳೆಯಲ್ಲಿ ದೊರೆತ ೧-೨ನೇ ಶತಮಾನದ ಶಿವಲಿಂಗಕ್ಕೆ[೧೬] ಹೋಲುತ್ತದೆ.

ಗೋವೆಯ ಮಪುಸಾ ತಾಲೂಕಿನ ಅರವೇಲಂನಲ್ಲಿ "ಪಾಂಡವಲೇಣ" ಎಂದು ಕರೆಯಲಾದ ಕೆಂಪು ಮೃದು ಕಲ್ಲಿನ (Laterite) ಬೆಟ್ಟದಲ್ಲಿ ಕೊರೆದು ಸೃಜಿಸಿದ ಲಯಣವಿದೆ[೧೭] (ಚಿತ್ರ 5; ೨) ಈ ಲಯಣದಲ್ಲಿ ದಕ್ಷಿಣಾಭಿಮುಖವಾಗಿರುವ ಆಯತಾಕಾರದ ಮೊಗಸಾಲೆಯಿದ್ದು ಹಿಂಬದಿಯಲ್ಲಿ ನಾಲ್ಕು ಗರ್ಭಗೃಹಗಳಿವೆ. ಮೊಗಸಾಲೆಯ ಪಶ್ಚಿಮ ಬದಿಯಲ್ಲಿ ಮತ್ತೊಂದು ಗರ್ಭಗೃಹವು ಇದೆ. ಈ ಲಯಣದ ಎಡಬದಿ ಅಥವಾ ಪೂರ್ವ ಬದಿಗೆ ಒಂದು ಪ್ರತ್ಯೇಕ ಕೋಣೆಯಿದೆ. ಇವೆಲ್ಲ ಗರ್ಭಗೃಹಗಲ್ಲೂ ಒಂದೊಂದು ಲಿಂಗವಿದೆ. ಗರ್ಭಗೃಹಗಳ ಮಧ್ಯದಲ್ಲಿದ್ದ ಕಲ್ಲನ್ನು ಕೆತ್ತಿ ಮಾಡಿದ ಪೀಠದಲ್ಲಿ ಇವುಗಳನ್ನು ಸ್ಥಾಪಿಸಲಾಗಿದೆ. ಈ ಲಿಂಗಗಳಲ್ಲಿ ಮೂರು ಪ್ರಕಾರಗಳಿವೆ. ಒಂದು ವೃತ್ತಾಕಾರವಾಗಿದ್ದು ಮೇಲಕ್ಕೆ ಸಪೂರವಾಗುತ್ತಾ ಹೋಗಿ ತುದಿಯು ಸ್ವಲ್ಪ ಮೊಂಡಾಗಿದೆ. ಲಿಂಗದ ಬುಡದ ಭಾಗದಲ್ಲಿ ಬ್ರಹ್ಮಸೂತ್ರವು ಸುತ್ತುವರೆದು ಮುಂದೆ ಪಾರ್ಶ್ವನಾಡಿಗಳಂತೆ ಮೇಲೆ ಹೋಗಿ ಲಿಂಗದ ಮಧ್ಯಭಾಗದಲ್ಲಿ ಬಾಣಾಕಾರದಂತೆ ಸೇರಿಕೊಳ್ಳುತ್ತವೆ. ಮಧ್ಯನಾಡಿಯಿಲ್ಲ (ಚಿತ್ರ5: ೧). ಈ ತರಹದ ಲಿಂಗಗಳು ಪೂರ್ವಾಭಿಮುಖವಾಗಿರುವ ಗರ್ಭಗುಡಿಯಲ್ಲಿ ಇದರ ಪಕ್ಕದಲ್ಲಿರುವ ದಕ್ಷಿಣಾಭಿಮುಖವಾಗಿರುವ ಎರಡು ಗರ್ಭಗೃಹಗಳನ್ನು ಬಿಟ್ಟು ಉಳಿದ ಎರಡು ಗರ್ಭಗೃಹಗಳಲ್ಲಿವೆ. ಉಳಿದೆರಡು ಗರ್ಭಗೃಹಗಳಲ್ಲಿ ಒಂದೊಂದು ಬೇರೆ ಬೇರೆ ಪ್ರಕಾರದ ಲಿಂಗಗಳಿವೆ. ಒಂದು ಚಂದ್ರವಳ್ಳಿಯಲ್ಲಿದ್ದ ಲಿಂಗಕ್ಕೆ ಸ್ವಲ್ಪ ಮಟ್ಟಿಗೆ ಹೋಲುತ್ತದೆ. ಆದರೆ ತುದಿಯು ಚೂಪಾಗಿದ್ದು ಬಾಣದ ಹಾಗೆ ಕಾಣುತ್ತದೆ. (ಚಿತ್ರ 4: ೨,) ಮತ್ತೊಂದು ಕೆಳಭಾಗ ಆಯತಾಕಾರವಾಗಿ ಮಧ್ಯದಲ್ಲಿ ಅಡ್ಡ ಪಟ್ಟಿಕೆಯಂತಿದ್ದು ಮೇಲಿನ ಭಾಗವು ಸೂರ್ಯನೋಪಾದಿಯಲ್ಲಿ ದುಂಡಾಗಿದೆ. (ಚಿತ್ರ. 4: ೩) ಅದೃಷ್ಟವಶಾತ್ ಅಡ್ಡಪಟ್ಟಿಕೆ ಮೇಲೆ ಒಂದು ಸಾಲಿನ ಶಾಸನವಿದೆ. ಅದು "ಸಾಂಭಪುರವಾಸಿ ರವಿ." ಎಂದಿದೆ. ಇವೆರಡು ಲಿಂಗಗಳು ಅವುಗಳ ಆಕಾರದ ಮೇಲೆ ಮತ್ತು ಶಾಸನದಲ್ಲಿಬರುವ ರವಿ ಎಂಬ ಹೆಸರಿನ ಆಧಾರದ ಮೇಲೆ, ಕ್ರಮವಾಗಿ ಕಾರ್ತಿಕೇಯ ಮತ್ತು ಸೂರ್ಯನನ್ನು ನಿರ್ದೇಶಿಸಬಹುದೆಂದು ಮತ್ತು ಈ ಲಯಣದಲ್ಲಿಯ ಲಿಂಗಗಳು ಶೈವ, ಸೌರ ಮತ್ತು ಸ್ಕಾಂದ ಸಂಪ್ರದಾಯಗಳದ್ದೆಂದು ಅಭಿಪ್ರಾಯ ಪಡಲಾಗಿದೆ. ಶಾಸನದ ಅಕ್ಷರಗಳು ಮೇಲೆ ಚೌಕೋನದ ತಲೆಕಟ್ಟನ್ನು

೧



೨



ಅರವೆಲಂ : ೧. ಶೈವಾಲಯಗಳಲ್ಲಿಯ ಒಂದು ಶಿವಲಿಂಗ ೨. ಶೈವಾಲಯಗಳು

ಚಿತ್ರ 6



ಚಿತ್ರದುರ್ಗ: ೧. ಕೊಳ್ಳದಲ್ಲಿಯ ನೂತನ ಶಿಲಾಯುಗದ ನೆಲೆ ಮತ್ತು ಅದರಲ್ಲಿರುವ ಫಲ್ಗುಣೇಶ್ವರ ದೇವಾಲಯ.



೨

ಚಿತ್ರದುರ್ಗದ : ವಾಹನ ಮಂಟಪ

ಹೊಂದಿರುವುದರಿಂದಲೂ ಮತ್ತು ಅವುಗಳ ಲಕ್ಷಣಗಳಿಂದಲೂ ಈ ಲಯಣವು ಮತ್ತು ಲಿಂಗಗಳು ಬನವಾಸಿ ಕದಂಬರ ಕಾಲದ್ದೆಂದುದೂ ಅಭಿಪ್ರಾಯು[೧೮] ಪಡಲಾಗಿದೆ. ಶಾಸನದ ಆಧಾರದ ಮೇಲೆ ಇದು ಸರಿಯೆಂದು ತೋರುವುದು. ಚಂದ್ರವಳ್ಳಿಯ ಲಿಂಗವು ಇಲ್ಲಿಯ ಬಾಣಾಕಾರದ ಲಿಂಗಕ್ಕೆ ಬಹು ಮಟ್ಟಿಗೆ ಹೋಲುವುದರಿಂದ ಇದು ಅದೇ ಕಾಲದ್ದೆಂದು ತರ್ಕಿಸಿದಲ್ಲಿ ತಪ್ಪಾಗಲಾರದು.

ಈ ಲಿಂಗವು ಮಯೂರ ಶರ್ಮನ ಶಾಸನದ ಬಂಡೆಯ ಕೆಳಗೆ ಇತ್ತೆಂದು ಮೇಲೆ ಹೇಳಿದೆ. ಈ ಬಂಡೆಯ ಬದಿಯಲ್ಲಿ ನಾಯಕರ ಕಾಲದಲ್ಲಿ ಜೀರ್ಣೋದ್ಧಾರ ಹೊಂದಿದ ಭೈರವೇಶ್ವರನ ದೇವಾಲಯವಿದೆ. ಪ್ರಾಯಶಃ ಮಯೂರಶರ್ಮನು ಅಲ್ಲಿ ಕೆರೆಯನ್ನು ಕಟ್ಟಿಸಿದ ಕಾಲದಲ್ಲಿ ಅಲ್ಲಿಯ ಒಂದು ಸಣ್ಣ ಶಿವ ದೇವಾಲಯವನ್ನು ಕಟ್ಟಿಸಿದ್ದು ಈ ಲಿಂಗವು ಅದರದ್ದೆಂದು ಅನಿಸುವುದು. ಕೆರೆಯ ಒಡ್ಡನ್ನು[೧೯] ಇಟ್ಟಿಗೆಯಿಂದ ಕಟ್ಟಿಸಿದ್ದರಿಂದ ಈ ದೇವಾಲಯವನ್ನು ಇಟ್ಟಿಗೆಯಿಂದ ಕಟ್ಟಿಸಿದ್ದಾಗಿರಬೇಕು. ಕಾಲಾಂತರದಲ್ಲಿ ನಿರ್ಜನ ವಸತಿಯಿಂದ ಅದು ಹಾಳಾಗಿ ನಾಯಕರ ಕಾಲದಲ್ಲಿ ಜೀರ್ಣೋದ್ಧಾರದ ಕಾಲದಲ್ಲಿ ಅಲ್ಲಿ ಬೇರೆ ಮೂರ್ತಿಯನ್ನು ಸ್ಥಾಪಿಸಲಾಯಿತೆಂದು ಕಾಣುತ್ತದೆ. ಈ ವಾದ ಸರಣಿ ಸರಿಯಾಗಿದ್ದಲ್ಲಿ ಈ ಲಿಂಗವು ೪ನೇ ಶತಮಾನದ ೫ನೇ ದಶಕದ್ದಾಗಿರಬಹುದು. ಆದರೆ ಈ ಅಭಿಪ್ರಾಯಕ್ಕೆ ಒಂದು ಆಕ್ಷೇಪಣೆ ಎತ್ತಬಹುದು. ಮಯೂರಶರ್ಮನು (ಸು. ಕ್ರಿ. ಶ. ೩೪೫–೩೬೫) ತನ್ನ ಶಾಸನದಲ್ಲಿ ಕೆರೆ ಕಟ್ಟಿಸಿದ ವಿಷಯ ಹೇಳಿದವನು ಶಿವಾಲಯವನ್ನೂ ಕಟ್ಟಿಸಿದ್ದು ಏಕೆ ಹೇಳಲಿಲ್ಲ? ಇದಕ್ಕೆ ಸಮರ್ಪಕವಾಗಿ ಉತ್ತರಕೊಡುವುದು ಕಷ್ಟ. ಆದರೆ ಒಂದು ಸಮಾಧಾನ ಹೇಳ ಬಹುದು. ಇದನ್ನೂ ಇವನು ಕಟ್ಟಿಸದೆ, ಕೆರೆ ಕಟ್ಟಿಸಿದ ಕಾಲಕ್ಕೆ ಅಲ್ಲಿ ಶಿವಾಲಯವಿದ್ದಿರಬಹುದು. ಹೇಗೆ ತಾಳಗುಂದದಲ್ಲಿ ಕಾಕುಸ್ಥವರ್ಮನು (ಸು. ಕ್ರಿ. ಶ. ೪೦೫–೪೩೦) ಶಾತಕರ್ಣಿಗಳಿಂದ ಪೂಜಿಸಲ್ಪಟ್ಟ "ಮಹಾದೇವ" (ಅನಂತರ ಪ್ರಣವೇಶ್ವರನೆಂದು ಕರೆಯಲಾದ ದೇವಾಲಯದ ಬಳಿಯಲ್ಲಿ ಕೆರೆಯನ್ನು ಕಟ್ಟಿಸಿದನೊ[೨೦] ಹಾಗೆಯೇ ಇವನ ಅಜ್ಜನಾದ ಮಯೂರಶರ್ಮನು ಅಲ್ಲಿಯ ಶಾತವಾಹನರ ಕಾಲದ ಕೊನೆಯ ಹಂತದಲ್ಲಿ ಶಿವದೇವಾಲಯದ ಬಳಿಯಲ್ಲಿ ಕೆರೆಯನ್ನು ನಿರ್ಮಿಸಿದ್ದರಿಂದ ದೇವಾಲಯವನ್ನು ನಿರ್ಮಿಸಿದ ಉಲ್ಲೇಖ ಅವನ ಶಾಸನದಲ್ಲಿ ಬರಲಾಗಲಿಲ್ಲವೆಂದು ಊಹಿಸಬಹುದು. ಇಂಥ ಪರಿಸ್ಥಿತಿಯಲ್ಲಿ ಈ ಲಿಂಗವು ಕೇವಲ ಶೈಲಿಯ ಮೇಲೆ ೩ ಅಥದ ೪ನೇ ಶತಮಾನದ್ದೆಂದು ಹೇಳಬಹುದು.

ಉತ್ತರ ಕರ್ನಾಟಕದಲ್ಲೆ ನನಗೆ ತಿಳಿದ ಮಟ್ಟಿಗೆ(ಪ್ರಾಯಶಃ ಕರ್ನಾಟಕದಲ್ಲೆ)ಇದು ಅಪರೂಪದ ಲಿಂಗವಾಗಿದೆ. ಮತ್ತು ಅಂಕೋಲದ ಬೋಳೆಯ ಲಿಂಗವು ತದನಂತರದ ಈ ಲಿಂಗವು ಬಾದಾಮಿ ಚಾಲುಕ್ಯರ ಕಾಲದ ವರೆಗೆ ಲಿಂಗಗಳ ಶಿಲ್ಪ ಲಕ್ಷಣ ಮತ್ತು ವಿಕಾಸದ ಹಂತಗಳನ್ನು ತಿಳಿಯಲು ಸಹಾಯಕಾರಿಯಾಗಿವೆ.

ಹಿಡಿಂಬೇಶ್ವರ ದೇವಾಲಯದ ಲಿಂಗವೂ ಇದೇ ಆಕಾರದಲ್ಲಿದೆ. ಲಿಂಗವು ಒಂದು ಗವಿಯೊಳಗೆ ಇದೆ. ಗವಿಯ ಮುಂಭಾಗದಲ್ಲಿ ನಾಯಕರು ಆಳುತ್ತಿದ್ದ ಕಾಲದಲ್ಲಿ ದೇವಾಲಯವನ್ನು[೨೧] ಕಟ್ಟಿಸಲಾಯಿತು.

೨. ಇತರ ಶಿಲ್ಪಗಳು

i ಮಯೂರಶರ್ಮನ ಶಾಸನದ ಬಳಿಯಿರುವ, ಅಂಕಲಿಮಠದ ಹತ್ತಿರವೇ ಒಂದು ಗವಿಯಲ್ಲಿ ೫-೬ ಲಿಂಗಗಳಿವೆ. ಅವು ಬಾದಾಮಿ ಚಾಲುಕ್ಯ–ರಾಷ್ಟ್ರಕೂಟರ ಕಾಲದವು.

ii ಹಿಡಿಂಬೇಶ್ವರ ದೇವಾಲಯದೊಳಗೆ. ಸು. ೮–ನೇ ಶತಮಾನದ ಮಹಿಷ ಮರ್ದಿನಿ ಮೂರ್ತಿ, ನಾಯಕರ ಕಾಲದ ಭಿಕ್ಷಾಟನ ಶಿವನ ಶನಿದೇವರ ಮತ್ತು ದುರ್ಗಾ ಮೂರ್ತಿಯುಳ್ಳ ಶೂಲಬ್ರಹ್ಮನ ಮೂರ್ತಿಗಳು ಮತ್ತು ನಾಗನ ಮಂಟಪ ಗಮನಾರ್ಹವಾಗಿವೆ (ಚಿತ್ರ 6; ೧. 7; ೧.೨).

ಟಿಪ್ಪಣಿಗಳು

೧ **ಆರ್ಕಿಯಾಲಾಜಿಕಲ್ ಸರ್ವೆ ಆಫ್ ಮೈಸೂರ್ ಆ್ಯನ್ಯುಯಲ್ ರಿಪೋರ್ಟ್ಸ್** (ಎ. ಎಸ್. ಎಮ್) ೧೯೦೦–೦೯ ಪಾ. II : ಎಡಿಟೆಡ್ ಬೈ. ಎಸ್. ಶೆಟ್ಟರ್, ೧೯೭೬, ಪುಟಗಳು ೯೯-೧೦೧, ೧೫೧-೫೩

೨ ಎಕ್ಸಕವೇಶನ್ ಆ್ಯಟ್ ಚಂದ್ರವಳ್ಳಿ : ೧೯೩೧, ಎ ಸಪ್ಲಿಮೆಂಟ್ ಟು ದಿ ಆ್ಯನುಯಲ್ ರಿಪೋರ್ಟ್ ಆಫ್ ದಿ ಮೈಸೂರ್ ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟ್ ಫಾರ್ ದಿ ಇಯರ್ ೧೯೨೯, ಪುಟ ೬. ಪ್ಲೇಟ್ III: 1.

೩-೪ ಅದೇ ಕಡೆ ಪುಟ ೨,

೫ ಎ.ಎಸ್. ಎಮ್, ೧೯೭೬ ಪುಟ ೧೫೩ ೬ ಮತ್ತು ೭ ಅದೇ ಕಡೆ ಪು.೯೯.

೮ ಎಕ್ಸ್‌ಕವೇಶನ್ ಆ್ಯಟ್ ಚಂದ್ರವಳ್ಳಿ ೧೯೩೧.


೯. ಎನ್ಷಿಯೆಂಟ್ ಇಂಡಿಯ (ಎ. ಇ.) ಸಂ. ೪. (ಕೇಂದ್ರ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ಶಾಖೆ) ೧೯೪೭-೪೮ ಪುಟಗಳು ೨೭೦-೯೫.

೧೦ ಅದೇ ಕಡೆ ಪುಟ ೨೯೧.


ಚಿತ್ರ 7



೧ ವಾಹನ ಮಂಟಪ ಮತ್ತು ಆದರಲ್ಲಿಯ ವಾಹನಗಳು.



೨, ಚಿತ್ರದುರ್ಗ: ಹಿಡಿಂಬೇಶ್ವರ ದೇವಾಲಯದಲ್ಲಿರುವ ಶೂಲಬ್ರಹ್ಮ



ಅರವೆಲಂ : ಲಯಣದ ತಳ ವಿನ್ಯಾಸ.

೧೧ ಈ ಸಲದ ನನ್ನ ಅನ್ವೇಷಣೆಯಲ್ಲಿ, ಅಲ್ಲಿ ಉತ್ಖನನವನ್ನು ಇನ್ನೂ ನಡೆಸುತ್ತಿದ್ದ ಕೇಂದ್ರ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣಾ ಶಾಖೆಯ ಮಧ್ಯ-ದಕ್ಷಿಣ ಮಂಡಲದ ಅಧಿಕಾರಿಗಳಾದ ಶ್ರೀ ಕೆ. ವಿ. ರಾವ್ ಅವರು ಮತ್ತು ಅವರ ಸಹಾಯಕಾನುವರ್ತಿಗಳು ಉತ್ಖನನ ನಡೆಸಿದುದನ್ನು, ಶೋಧಿಸಿದ ಪುರಾತತ್ತ್ವ ಅವಶೇಷಗಳನ್ನು ಅಂಕಿಅಂಶವನ್ನು ತೋರಿಸಿದರು. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು.

೧೨ ಎಕ್ಸ್‌ಕವೇಶನ್…ಚಂದ್ರವಳ್ಳಿ ಪುಟಗಳು ೨೫-೨೬ ಪ್ಲೇಟ್ಸ್ IX. ೩,೪ X, ೧.

೧೩ ಎ. ಇ. ಅದೇ ಕಡೆ ಪುಟಗಳು ೨೭೨-೭೪.

೧೪ ಚೌಕಟ್ಟಿನಲ್ಲಿರುವ ಮನುಷ್ಯ ಚಿತ್ರದ ಶೈಲಿ ಹಾಗು ದೊಡ್ಡ ಆಕೃತಿಯ ಮನುಷ್ಯನ ಪಾದಗಳಲ್ಲಿ ಮೂರು ಮೂರೇ ಬೆರಳುಗಳನ್ನು ತೋರಿಸಿರುವ ರೀತಿ ಗಂಗಾವತಿ ಹೊಸಪೇಟೆ ಪ್ರದೇಶದಲ್ಲಿ ಕೆಲವೆಡೆಗಳಲ್ಲಿರುವ ನೂತನ-ಬೃಹತ್ ಶಿಲಾಸಂಸ್ಕೃತಿಯ ಮನುಷ್ಯರ ವರ್ಣಚಿತ್ರಗಳನ್ನು ಹೋಲುತ್ತವೆ.

೧೫ ಆ ಸಮಯದಲ್ಲಿ ಶ್ರೀ ಕೆ. ವಿ. ರಾವ್ ಅವರು, ಸ್ಥಳೀಕ ಪ್ರಾಚ್ಯವಸ್ತು ಸಂಗ್ರಹಾಲಯದ ಗೌರವ ಕ್ಯುರೇಟರಾದ ಶ್ರೀ ಹುಲ್ಲೂರು ಪಾಂಡುರಂಗ ಜೋಯ್ಸರು ನನ್ನೊಡನೆ ಇದ್ದರು. ಆದ್ದರಿಂದ ಅವರಿಗೆ ಆ ಲಿಂಗದ ಶಿಲ್ಪ ಲಕ್ಷಣಗಳ ಮಹತ್ತ್ವವನ್ನು ವಿವರಿಸಿ ಅದನ್ನು ಸುರಕ್ಷಿತವಾಗಿ ಕಾದಿಡಲು ಅವರನ್ನು ವಿನಂತಿಸಿಕೊಂಡಿದ್ದೆ. ಕೇಂದ್ರ ಸರ್ಕಾರದ ಪುರಾತತ್ತ್ವ ಶಾಖೆಯವರು ಅನಂತರ ಲಿಂಗವನ್ನು ತಮ್ಮ ಸ್ಥಳೀಕ ಕಚೇರಿಗೆ ಒಯ್ದು ಸುರಕ್ಷಿತವಾಗಿ ಇಟ್ಟಿದ್ದು ನಾನು ಜೂನ್ ತಿಂಗಳಲ್ಲಿ ಆ ಪ್ರದೇಶದ ಅನ್ವೇಷಣೆಗೆ ಹೋದಾಗ ನೋಡಿದ್ದೇನೆ.

೧೬ ಸುಂದರ. ಅ: ೧೯೭೬: "ಕ್ರಿಸ್ತಶಕ ಪ್ರಾರಂಭದ ಶಿವ ದೇವಾಲಯ" **ಕರ್ನಾಟಕ ಭಾರತಿ** ೮, ಭಾಗ, ೩., ಪುಟಗಳು ೯೫-೯೬.

೧೭ ಮೊದಲು ಈ ಲಯಣವನ್ನು ಬಾಂಬೆಯ ಫಾದರ್ ಹೆರಾಸ್ ಇನ್‌ಸ್ಟಿಟ್ಯೂಟ್ ಸಂಶೋಧಕರು ಗೋವೆಯಲ್ಲಿ ಬಹುಶಃ ೧೯೪೦ರ ದಶಕದಲ್ಲಿ ಪ್ರಾದೇಶಿಕ ಅನ್ವೇಷಣೆ ನಡೆಸಿದಾಗ ಈ ಲಯಣವನ್ನು ಶೋಧಿಸಿದರು. ಅವರು ತಮ್ಮ ಅನ್ವೇಷಣೆಯ ಫಲಿತಾಂಶವನ್ನು ಪ್ರಕಟಿಸಿದರು. ಆ ಲೇಖನವನ್ನು ನಾನು ಓದಿದ್ದೇನೆ. ಆದರೆ ಅದು ಈಗ ನನಗೆ ದೊರಕದಿದ್ದುದರಿಂದ ಕ್ರಮವಾಗಿ ಉಲ್ಲೇಖಿಸಲು ಸಾಧ್ಯವಾಗಿಲ್ಲ. ಅನಂತರ ಕೇಂದ್ರ ಸರ್ಕಾರದ ಪುರಾತತ್ತ್ವ ಸರ್ವೇಕ್ಷಣ ಶಾಖೆಯ ಸ್ಮಾರಕಗಳ ವಿಭಾಗಕ್ಕೆ ಈಗ ನಿರ್ದೇಶಕರಾಗಿರುವ ಶ್ರೀ ಕೆ. ವಿ. ಸೌಂದರ ರಾಜನ್ನರವರು ಈ ಲಯಣಗಳ ಬಗ್ಗೆ ಪಣಜಿ (ಗೋವ)ಯಿಂದ ಹೊರಡುವ ಒಂದು ಪತ್ರಿಕೆಯಲ್ಲಿ ವಿಶದವಾಗಿ "ಕೇವ್ ಟೆಂಪಲ್ಸ್ ಆ್ಯಟ್ ಅರವೆಲಂ. ಗೋವಾ ಸ್ಟೇಟ್" ಒಂದು ಲೇಖನವನ್ನು ಸುಮಾರು ೭-೮ ವರ್ಷಗಳ ಹಿಂದೆ ಪ್ರಕಟಿಸಿದ್ದಾರೆ. ಆದರೆ ಆ ಲೇಖನದ ಪ್ರತಿ ನನಗೆ ಸಿಕ್ಕಿಲ್ಲ. ಪ್ರಕಟನೆಗೆ ಕೊಟ್ಟ ಲೇಖನದ ಬೆರಳಚ್ಚಿನ ಪ್ರತಿಮಾತ್ರ ದೊರಕಿದೆ.

೧೮ ಶ್ರೀ ಸೌಂದರರಾಜನ್ ಅವರ ಲೇಖನ ನೋಡಿ.

೧೯ **ಎಕ್ಸ್‌ಕವೇಶನ್ ಆ್ಯಟ್ ಚಂದ್ರವಳ್ಳಿ,** ಪುಟಗಳು ೬-೭.

೨೦ **ಎಪಿಗ್ರಾಫಿಯ ಕರ್ನಾಟಿಕ,** ಸಂಪುಟ ೭. ಭಾಗ ೧. ಸಂಖ್ಯೆ ೧೭೬. ಪು. ೨೦೦-೦೨.

೨೧ ಈ ಬೆಟ್ಟದಲ್ಲಿರುವ ಸಂಪಿಗೆ ಸಿದ್ಧೇಶ್ವರ, ಕಾಶಿ ವಿಶ್ವೇಶ್ವರ, ಫಲ್ಗುಣೇಶ್ವರ, ದೇವಾಲಯಗಳ ಗರ್ಭಗೃಹಗಳು ನೈಸರ್ಗಿಕ ಗವಿಗಳು, ಇವುಗಳ ಮುಂಬದಿಯಲ್ಲಿ ಆನಂತರ ನಾಯಕ ಅರಸರು ಸಭಾಮಂಟಪ ಮತ್ತು ಮುಖ ಮಂಟಪಗಳನ್ನು ಕಟ್ಟಿಸಿದರು. ಗರ್ಭಗುಡಿಯಾಗಿ ಉಪಯೋಗಿಸಿದ ಗವಿ ಬಂಡೆಯ ಮೇಲೆ ಶಿಖರದ ಸ್ತೂಪಿ ಮತ್ತು ಕಲಶದ ಭಾಗಗಳನ್ನು ಮಾತ್ರ ಕಟ್ಟಲಾಗಿದೆ.

ಕೃತಜ್ಞತೆ

ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ನೆರವಿನಿಂದ ಉತ್ತರ ಕರ್ನಾಟಕದಲ್ಲಿಯ ಬಂಡೆ ಚಿತ್ರಗಳು ಎಂಬ ವಿಷಯದ ಬಗ್ಗೆ ಬರೆಯುತ್ತಿರುವ ಪುಸ್ತಕದ ಸಲುವಾಗಿ ಮೇಲಿನ ಅನ್ವೇಷಣೆಯನ್ನು ಕೈಗೊಂಡಿದ್ದೆ. ಈ ಕಾರ್ಯದಲ್ಲಿ ಕೇಂದ್ರ ಸರ್ಕಾರದ ಪುರಾತತ್ವ ಶಾಖೆಯ ಸ್ಥಳಿಕ ಸಿಬ್ಬಂದಿಯವರಾದ ಶ್ರೀ ಜೆ. ಕೃಷ್ಣಪ್ಪ ಮತ್ತು ಅವರ ಸಹೋದ್ಯೋಗಿಗಳು ತುಂಬ ಸಹಾಯ ಮಾಡಿದ್ದಾರೆ. ಈ ಶಾಖೆಯ ಮಧ್ಯ ದಕ್ಷಿಣ ಮಂಡಲದ ಹಿರಿಯ ಅಧಿಕಾರಿ ಸೂಪರಿನ್‌ಟೆಂಡಿಂಗ್ ಆರ್ಕಿಯಾಲಾಜಿಸ್ಟರವರು ಆ ಶಾಖೆಯ ೭೮ರ ಉತ್ಖನನದ ಬಗ್ಗೆ ಈ ಲೇಖನದಲ್ಲಿ ಹೇಳಿರುವುದಕ್ಕೆ ಅನುಮತಿ ಕೊಟ್ಟಿದ್ದಾರೆ. ಶ್ರೀ ಶ್ರೀ. ಕೃ.ಜೋಶಿಯವರು ಅರವೆಲಂ ಲಯಣದ ರೇಖಾಚಿತ್ರವನ್ನು ಮಾಡಿ ಕೊಟ್ಟಿದ್ದಾರೆ. ನನ್ನ ಪತ್ನಿ ಶ್ರೀಮತಿ ಭಾಗ್ಯಲಕ್ಷ್ಮಿ ಸುಂದರ ಈ ಲೇಖನದ ಉತ್ತಮ ಪ್ರತಿಯನ್ನು ಮಾಡಿದ್ದಾರೆ. ಇವರೆಲ್ಲರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

———

ಗ್ರಾಮೀಣ ಮಹಿಳೆ

● ಕೆ. ಜಿ. ಗುರುಮೂರ್ತಿ

ಯಾವುದೇ ಸಮಾಜಕ್ಕೆ, ಸಂಸ್ಕೃತಿಗೆ ಮಹಿಳೆಯರ ಕೊಡುಗೆ ಅಪಾರ. ಸಮಾಜದ ಜನಸಂಖ್ಯೆಯ ಅರ್ಧದಷ್ಟಾಗುವ ಮಹಿಳೆಯರು ಅನಾದಿಕಾಲದಿಂದಲೂ ಮಾನವ ಸಂಸ್ಕೃತಿಯ ಬೆಳವಣಿಗೆಯಲ್ಲಿ ಪುರುಷನಿಗೆ ಜೊತೆಗಾತಿಯಾಗಿ, ಸಹಕಾರಿಯಾಗಿ ಬಂದಿದ್ದಾರೆ. ಪುರುಷ ಮನೆಯಿಂದ ಹೊರಗೆ ನಿಂತು ಕುಟುಂಬಕ್ಕೆ ದುಡಿದರೆ, ಕುಟುಂಬದ ರಕ್ಷಣೆ ಮಾಡಿದರೆ, ಮನೆಯಲ್ಲಿದ್ದು ಗೃಹವನ್ನು ನಡೆಸುವ, ಮಕ್ಕಳನ್ನು ಪಾಲಿಸುವ ಕಾರ್ಯ ಯಾವಕಾಲದಲ್ಲೂ ಮಹಿಳೆಗೇ ಸೇರಿದ್ದು. ಅನಾದಿಕಾಲದಿಂದ ಇಲ್ಲಿಯವರೆಗೆ ಮಹಿಳೆ ಅನೇಕ ರೀತಿಯ ಶೋಷಣೆಗೆ, ಅನಾದರಣೆಗೆ, ಹಿರಿಮೆಗೆ ಹೆಸರಾಗಿದ್ದಾಳೆ. ಸಮಾಜ-ಸಂಸ್ಕೃತಿಗೆ, ಕಾಲಕ್ಕೆ ತಕ್ಕಂತೆ ಆಕೆಯ ಸ್ಥಾನಮಾನಗಳೂ ಬೇರೆಬೇರೆಯಾಗುತ್ತಾ ಬಂದಿವೆ. ಇಂದಿನ ಸಮಾಜದಲ್ಲಿಯೂ ಆಕೆಯ ಪ್ರಜ್ಞೆ, ವಿದ್ಯಾಮಟ್ಟ, ವಾಸಸ್ಥಳ ಮುಂತಾದವನ್ನು ಗಣನೆಗೆ ತೆಗೆದುಕೊಂಡು ಆಕೆಯನ್ನು ಆಧುನಿಕ, ಹಿಂದುಳಿದ.ಗ್ರಾಮೀಣ, ನಗರ, ಔದ್ಯೋಗಿಕ ಮುಂತಾಗಿ ಅನೇಕ ಬಗೆ ವಿಂಗಡಿಸಬಹುದು. ಇವರಲ್ಲಿ ಗ್ರಾಮೀಣ ಮಹಿಳೆಯನ್ನು ನಾವಿಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ. ಗ್ರಾಮೀಣ ಸಮಾಜವು ಅನೇಕ ವಿಧದಲ್ಲಿ ಜನಪದ ಸಮಾಜವನ್ನು ಹೋಲುತ್ತದೆ. ಇಲ್ಲಿಯ ಜನ ಸಂಪ್ರದಾಯಸ್ಥರು, ಆಧುನಿಕ ಜಗತ್ತಿನಿಂದ ಹೊರಗಿರುವವರು, ಪ್ರಮುಖವಾಗಿ ವ್ಯವಸಾಯ ಮತ್ತು ಅದಕ್ಕೆ ಸಂಬಂದಪಟ್ಟ ಕೆಲಸಗಳಲ್ಲಿ ತೊಡಗಿದವರು. ಹೀಗೆ ನಗರಗಳಿಂದ ದೂರವಿರುವ, ಆಧುನಿಕತೆಯ ಕಕ್ಷೆಯಿಂದ ಹೊರಗಿರುವ, ವಿದ್ಯೆ ಮುಂತಾದ ಸೌಲಭ್ಯಗಳಿಂದ ಮುಕ್ತವಿರುವ ಗ್ರಾಮೀಣ ಸಮಾಜದಲ್ಲಿ ಅದರದೇ ಆದ ಅನುಕೂಲತೆಗಳು, ಅನಾನುಕೂಲತೆ

ಗಳಿವೆ. ಒಂದು ರೀತಿಯಲ್ಲಿ ಹೇಳುವುದಾದರೆ ಅವರಿಗೆ ಅನುಕೂಲತೆಗಳೇ ಇಲ್ಲ. ಬರೀ ಅನಾನುಕೂಲತೆಗಳೇ. ಗ್ರಾಮಸ್ಥರಿಗೆ ಈಗಾಗಲೇ ಇರುವ ಅನೇಕ ತೊಂದರೆಗಳ ಜೊತೆಗೆ ನಗರೀಕತೆ–ಆಧುನಿಕತೆಯಿಂದಾಗಿ ಅನೇಕ ತೊಂದರೆಗಳೂ ಬಂದುಬಿಟ್ಟಿವೆ. ಗ್ರಾಮೀಣ ಸಮಾಜದ ಒಂದಂಗವಾದ ಮಹಿಳೆಯೂ ಇವಕ್ಕೆ ಭಾಗಸ್ಥಳಿರುತ್ತಾಳೆ. ಒಂದು ಹೆಜ್ಜೆ ಮುಂದೆಹೋಗಿ ಹೇಳಬೇಕೆಂದರೆ ಗ್ರಾಮಜೀವನದಲ್ಲಿ ಸುಖ–ಸಂತೋಷಗಳಿದ್ದರೆ ಅವು ಪುರುಷರಿಗೆ; ತೊಂದರೆಗಳೆಲ್ಲವೂ ಮಹಿಳೆಯರಿಗೆ ಹೋಗುವುದರಿಂದ ಅವರ ಅನೇಕ ತೊಂದರೆಗಳು, ಸಮಸ್ಯೆಗಳು ನಾವು ತಿಳಿದಿರುವುದಕ್ಕಿಂತಲೂ ಹೆಚ್ಚಿನವು, ಆಳವಾದವು. ಇಂದು ನಮ್ಮ ಸರಕಾರ ತಂದಿರುವ ಅನೇಕ ಅಭಿವೃದ್ಧಿಕಾರ್ಯಗಳಾವೂ ಆಕೆಯ ಸ್ಥಿತಿಯನ್ನು ಉತ್ತಮಪಡಿಸಿಲ್ಲವೆಂದು ಹೇಳಬಹುದು.

ವಿದ್ಯೆ, ಹೆಚ್ಚಿನ ಪ್ರಜ್ಞೆ, ನಾಗರೀಕತೆಯ ಸೋಂಕು ಇಲ್ಲದ ಗ್ರಾಮೀಣ ಮಹಿಳೆ ಕೆಲವೊಂದು ವಿಧದಲ್ಲಿ ಸುಖಿ ಎನ್ನಬಹುದು. ಏಕೆಂದರೆ ಆಕೆಗಾಗುವ ಅನೇಕ ತೊಂದರೆಗಳು ದೈಹಿಕವಾದವು ಮತ್ತು ತನ್ನೆಲ್ಲಾ ತೊಂದರೆಗಳಿಗೆ ತನ್ನ ಹಣೆಯ ಬರಹವೇ ಕಾರಣವೆಂದು ಬಗೆದು ತನ್ನ ಜೀವನ ಸಾಗಿಸುತ್ತಿರುವುದರಿಂದ ಇಂದು ಆಧುನಿಕ, ವಿದ್ಯಾವಂತ ಮಹಿಳೆಗಿರುವಂತೆ ಆಕೆಗೆ ಮಾನಸಿಕವಾದ ತೊಳಲಾಟಗಳಿಲ್ಲ. ಹೊರಜಗತ್ತಿನ ಬಿಸಿ ಅಷ್ಟಾಗಿ ಬಡಿದಿಲ್ಲವಾದ್ದರಿಂದ ಆಕೆ ಇನ್ನೂ ಮಾನಸಿಕವಾಗಿ ಸುಖಿ. ಈಗಾಗಲೇ ಅನೇಕ ರಂಗಗಳಲ್ಲಿ, ಈಕೆಯ ಜೀವನಕ್ರಮದಲ್ಲಿ ಆಧುನಿಕತೆಯ ಬಿಸಿ ಮುಟ್ಟಿದೆ ಎನ್ನಲೂ ಬಹುದು. ಹಳ್ಳಿಗಳು ಹೊರಜಗತ್ತಿನೊಂದಿಗೆ ಹೆಚ್ಚು ಹೆಚ್ಚು ಸಂಪರ್ಕ ಬೆಳೆಸಿದಂತೆ, ಹೊಸ ಹೊಸ ವಿಷಯಗಳು ಹಳ್ಳಿಯನ್ನು ಮುತ್ತಿ ಅಲ್ಲಿಯ ಜನಜೀವನವನ್ನು ಬದಲಾಯಿಸುತ್ತಿವೆ. ಆದರೂ ಗ್ರಾಮೀಣ ಮಹಿಳೆ ಹೊರಜಗತ್ತಿನ ದೃಷ್ಟಿಯಲ್ಲಿ ಗಾಣದೆತ್ತಿನಂತೆ, ಇನ್ನೊಬ್ಬರನ್ನು ಆಶ್ರಯಿಸಿ, ತೊತ್ತಾಗಿ ಬಾಳುವ ಜೀವಿ ಎಂದು ವರ್ಣಿಸಲಾಗಿದೆ.

ಗ್ರಾಮೀಣ ಮಹಿಳೆ ನಗರದ ತನ್ನ ಸೋದರಿಯಿಂದ ಅನೇಕ ವಿಧದಲ್ಲಿ ಬೇರೆಯೇ ಆಗಿದ್ದಾಳೆ. ಮೊದಲನೆಯದಾಗಿ ಆಕೆ ಇನ್ನೂ ಸಂಪ್ರದಾಯದ ನೆರಳಲ್ಲಿದ್ದಾಳೆ. ಎರಡನೆಯದಾಗಿ, ಆಕೆ ಹಳ್ಳಿಯ ವೃತ್ತಿಗಳಾದ ವ್ಯವಸಾಯ, ಪಶುಪಾಲನೆ, ಕುಶಲ ಕಸಬುಗಳು ಮುಂತಾದವುಗಳಲ್ಲಿ ತೊಡಗಿರುತ್ತಾಳೆ. ಮೂರನೆಯದಾಗಿ, ಈಕೆ ಅವಿದ್ಯಾವಂತೆಯಾದ್ದರಿಂದ ಆಕೆಯಲ್ಲಿ ಆರೋಗ್ಯ, ನೈರ್ಮಲ್ಯ, ಮುಂತಾದವುಗಳ ಬಗೆಗೆ ಗ್ರಾಮೀಣ ನಡೆ–ನುಡಿಗಳು, ನಂಬಿಕೆಗಳು ತುಂಬಿರುತ್ತವೆ. ನಾಲ್ಕನೆಯದಾಗಿ, ಆಕೆಗೆ ತನ್ನ ಹಕ್ಕುಗಳು ಮತ್ತು ಸ್ಥಾನಮಾನಗಳು ತಿಳಿಯದಾದ್ದರಿಂದ ತನ್ನ ಅಸ್ತಿತ್ವಕ್ಕೆ, ಸಂರಕ್ಷಣೆಗೆ ಮತ್ತು ಘನತೆ ಗೌರವಕ್ಕೆ ತನ್ನ ಕುಟುಂಬದವರ ಮೇಲೆ ಅವಲಂಬಿಯಾಗಿರುತ್ತಾಳೆ. ಇನ್ನೂ ಜನಪದ ಪ್ರಭಾವದಲ್ಲಿರುವ ಗ್ರಾಮೀಣ ಸಮಾಜ ಹಳತು–ಹೊಸತುಗಳ ನಡುವೆ ಸಿಕ್ಕಿದೆ. ಸಮಾಜದ ಹಿರಿಯವರ್ಗ ಹಳತನ್ನು ಕಾಯ್ದಿಡಬೇಕೆಂದು ಶ್ರಮಿಸುತ್ತಿದ್ದರೆ ಕಿರಿಯ ವರ್ಗ

ಹಳತನ್ನು ಬಿಟ್ಟು ಹೊಸದು, ನಗರದ್ದು ಮತ್ತು ಆಧುನಿಕವಾದುದನ್ನು ಹೊಂದಬೇಕೆನ್ನುತ್ತಿವೆ. ಹೀಗಾಗಿ ಗ್ರಾಮೀಣ ಸಮಾಜದ ಈ ಎರಡು ಮನೋವರ್ಗಗಳ ನಡುವೆ ಘರ್ಷಣೆ ಪ್ರಾರಂಭವಾಗಿದೆ. ಇಲ್ಲಿ ಹೆಚ್ಚಿನ ತೊಂದರೆ ಅನುಭವಿಸುತ್ತಿರುವವಳು ಮಹಿಳೆಯಾಗಿದ್ದಾಳೆ. ಪುರುಷಪ್ರಧಾನವಾದ ನಮ್ಮ ಸಮಾಜದಲ್ಲಿ ಸ್ತ್ರೀಯರಿಗೆ ಅಷ್ಟಾಗಿ ಪ್ರಾಮುಖ್ಯತೆ ಇಲ್ಲ. ಅದರಲ್ಲೂ ಗ್ರಾಮೀಣ ಸಮಾಜದಲ್ಲಿ ಅನೇಕ ತೊಂದರೆಗಳಿರುತ್ತವೆ. ಅವರಿಗೇ ಸಂಬಂಧಿಸಿದ ಅನೇಕ ಪ್ರಮುಖ ವಿಷಯಗಳಾದ ವಿವಾಹ, ಮುಂತಾದವುಗಳ ಬಗೆಗೂ ಅವರಿಗೆ ಸೂಕ್ತ ಸ್ವಾತಂತ್ರ್ಯವಿರುವುದಿಲ್ಲ. ಸಾಮಾಜಿಕವಾಗಿ ಅವರಿಗಿರುವ ವಿಶೇಷವಾದ ಸ್ಥಾನ–ಮಾನಗಳೂ ಅವರಿಗೆ ಲಭ್ಯವಿಲ್ಲದಾಗಿವೆ.

ಭಯಸ್ಥ ತಂದೆ–ತಾಯಿ ಅಥವಾ ಗಂಡನನ್ನು ಪಡೆದು ತೊಂದರೆ ಅನುಭವಿಸುತ್ತಿರುವ ಸ್ತ್ರೀಯರಂತೆ ಪ್ರೀತಿ ಪಾತ್ರರಾದ ತಂದೆತಾಯಿಗಳನ್ನು ಮತ್ತು ಗಂಡಂದಿರನ್ನು ಪಡೆದ ಸ್ತ್ರೀಯರು ಅತ್ಯಂತ ಪ್ರಬಲರಾಗಿ ತಮ್ಮ ಕುಟುಂಬದ ಹೊಣೆಯನ್ನು ನಿರ್ವಹಿಸಿರುವ ಉದಾಹರಣೆಗಳೂ ಇವೆ. ದಕ್ಷನಾದ ಗಂಡನಿದ್ದಾಗ ಅಂಜಿ ನಡೆವ ಹೆಂಡತಿಯಾಗಿ, ಅವನು ಅಕಾಲ ಮರಣಕ್ಕೆ ಗುರಿಯಾದಾಗ ತಾನೇ ನಿಂತು ಮನೆತನದ ವ್ಯವಹಾರವನ್ನು ದಕ್ಷರೀತಿಯಲ್ಲಿ ನಡೆಸಿದ ಉದಾಹರಣೆಗಳೂ ಇವೆ. ಅನೇಕ ಮಕ್ಕಳನ್ನು ಪಡೆದು ತನ್ನ ಗಂಡನ ವಂಶವನ್ನು ಬೆಳೆಸಿದಾಗ ಆಕೆಗೆ ಸಿಗುವ ಗೌರವಕ್ಕಿಂತ ಬಂಜೆಯಾಗಿ, ಈ ಕಾರಣಕ್ಕೆ ತನ್ನ ಸಿರಗಿತ್ತಿಯನ್ನು ತಂದಾಗ ಅನುಭವಿಸುವ ತೊಂದರೆಗಳೇ ಜಾಸ್ತಿ. ಮಗಳಾಗಿ ಪಡೆಯುವ ಪ್ರೀತಿಗಿಂತ ತಾಯಿಯಾಗಿ ಪಡೆಯುವ ತೊಂದರೆಗಳು ಅನೇಕ. ಅತ್ತೆಯಾಗಿ ಪಡೆಯುವ ಘನತೆ–ಗೌರವಕ್ಕಿಂತ ಸೊಸೆಯಾಗಿ ಅನುಭವಿಸುವ ಬವಣೆಗಳು ಹೆಚ್ಚು. ಹೀಗೆ ಮಗಳಾಗಿ, ಸತಿಯಾಗಿ. ತಾಯಿಯಾಗಿ. ಅತ್ತೆಯಾಗಿ, ಅಜ್ಜಿಯಾಗಿ ಆಕೆ ಪಡೆಯುವ ಆದರಣೆ ಮತ್ತು ಅನಾದರಣೆಗಳು ವಿಭಿನ್ನವಾಗಿವೆ. ಕೆಲವು ಆಕೆಯನ್ನು ತಾಪದಲ್ಲಿ ಬೇಯುವಂತೆ ಮಾಡಿದರೆ ಉಳಿದವು ಆಕೆಯನ್ನು ಪ್ರೀತಿಯ ಕಡಲಲ್ಲಿ ಮೀಯಿಸಿವೆ. ಆದರೆ ಕಷ್ಟಬಂದಾಗ ಕುಗ್ಗದೆ, ಸುಖ ಬಂದಾಗ ಹಿಗ್ಗದೆ ತನ್ನ ಸ್ಥಾನವನ್ನು ಮಹಿಳೆ ಉಳಿಸಿಕೊಂಡು ಬಂದಿದ್ದಾಳೆ.

ಪುರುಷ ಪ್ರಧಾನವಾದ ಸಮಾಜದಲ್ಲಿಯ ಕುಟುಂಬದಲ್ಲಿ ಸ್ತ್ರೀಗೆ ಯಾವಾಗಲೂ ಮೂರನೆಯ ಸ್ಥಾನ: ಗಂಡ, ಮಕ್ಕಳು. ನಂತರ ಈಕೆ. ಈ ಭೇದವನ್ನು ಜೀವನದ ಎಲ್ಲಾ ರಂಗಗಳಲ್ಲಿಯೂ ಕಾಣಬಹುದು. ಇದು ಹುಟ್ಟಿನಿಂದಲೇ ಪ್ರಾರಂಭವಾಗುತ್ತದೆ ಎನ್ನಬಹುದು. ಗ್ರಾಮೀಣ ಸಮಾಜದಲ್ಲಿ ಎಲ್ಲರಿಗೂ ತಮ್ಮ ಮೊದಲ ಮಗು ಗಂಡಾಗಬೇಕೆಂಬ ಬಯಕೆ. ಗಂಡೇ ಹುಟ್ಟಿದರೆ ಇದನ್ನು ತಿಳಿಸಲು ತಟ್ಟೆಯೊಂದನ್ನು ಡಣ ಡಣ ಎಂದು ಬಾರಿಸುತ್ತಾರೆ: ನಂತರ ಗ್ರಾಮದಲ್ಲಿ ಸಿಹಿ ಹಂಚುತ್ತಾರೆ. ಅದರಲ್ಲೂ ಹಿರಿಯ ಕೂಸು ಗಂಡಾದರೆ ಆ ದಂಪತಿಗಳಿಗೆ ಇಲ್ಲದ ಸಂತೋಷ ಮತ್ತು ಸಂಭ್ರಮ. ಅನೇಕ

ಸಂದರ್ಭಗಳಲ್ಲಿ ಈ ವಿಷಯ ತಂದೆ–ತಾಯಿಗಳಿಗೆ ಸ್ಥಾನ–ಮಾನ ತರುವ ವಿಷಯವೂ ಆಗಿರುತ್ತದೆ. ಸಾಮಾನ್ಯವಾಗಿ ಮಗ ಬೆಳೆದು ದೊಡ್ಡವನಾಗಿ ತನ್ನನ್ನು ಸಂಸಾರದ ಹೊಣೆಗಳಿಂದ ಬೇಗನೇ ಬಿಡಿಸುತ್ತಾನೆಂದು ತಂದೆಯು ಬಯಕೆಯಾದರೆ, ದೊಡ್ಡವನಾಗಿ ಸೊಸೆ ತಂದು ತನ್ನ ಮೇಲಿರುವ ಸಂಸಾರದ ಭಾರ ಇಳಿಸುತ್ತಾನೆಂದು ತಾಯಿಯ ಆಸೆ. ಸಾಮಾನ್ಯವಾಗಿ ಮೊದಲ ಹೆರಿಗೆ ತೌರಿನಲ್ಲಾಗುವುದರಿಂದ ಈ ಗಂಡುಮಗು ಹುಟ್ಟಿದ ಸುದ್ದಿ ತಂದವನಿಗೆ ಹೆಚ್ಚು ದವಸ–ಧಾನ್ಯಗಳ ಜೊತೆಗೆ ಬಟ್ಟೆಯನ್ನು ಕೊಡುವುದು ವಾಡಿಕೆ. ಸ್ಥಿತಿವಂತರು ಇವುಗಳ ಜೊತೆಗೆ ತಾಂಬ್ರ ಅಥವಾ ಹಿತ್ತಾಳೆಯ ಪಾತ್ರೆ–ತಟ್ಟೆ ಕೊಡುವುದೂ ವಾಡಿಕೆ. ನಂತರ ತಾಯಿ ಮಗನನ್ನು ನೋಡಲು ಕೂಡಲೇ ಹೋಗುತ್ತಾಳೆ. ನಾಮಕರಣವೂ ಹೆಚ್ಚಿನ ಆಡಂಬರದಿಂದ ನಡೆಯುತ್ತದೆ. ಗಂಡುಮಗುವನ್ನು ಹೆತ್ತ ತಾಯಿಗೆ ಎಲ್ಲರೂ ಪ್ರೀತಿ, ಆದರ ಮತ್ತು ಒಡವೆ–ವಸ್ತುಗಳನ್ನು ಕೊಡುತ್ತಾರೆ. ಈ ಎಲ್ಲಾ ಸಡಗರಗಳು ಹೆಣ್ಣು ಹೆತ್ತವಳಿಗಾಗುವುದಿಲ್ಲ. ಮೊದಲನೆಯ ಮಗು ಹೆಣ್ಣಾದರೆ ಮೂಗು ಮುರಿಯುವ ಸಮಾಜ ಎರಡನೆಯದೂ ಹೆಣ್ಣಾದರೆ ಇನ್ನೂ ಹೆಚ್ಚಿನ ಅನಾದರಣೆ ಮಾಡುತ್ತದೆ. ಮಗುವಿನ ನಾಮಕರಣ ಮುಂತಾದವನ್ನು ಮುಂದಕ್ಕೆ ಹಾಕುತ್ತಾರೆ. ಮತ್ತು ಸರಳವಾಗಿ, ಆಡಂಬರವಿಲ್ಲದೆ ಮಾಡಿಬಿಡುತ್ತಾರೆ. ಮುಂದೆ ಹೆಣ್ಣುಮಕ್ಕಳು ಹುಟ್ಟುವುದು ನಿಲ್ಲಲೆಂದು ಮಗುವಿಗೆ ನಾಮಕರಣ ಮಾಡುವಾಗ ಹೆಣ್ಣುಹುಟ್ಟುವುದು ಸಾಕು ಎಂದು 'ಸ'ಕಾರದಿಂದಲೇ ಬರುವ ಹೆಸರುಗಳನ್ನೇ ಇಡುತ್ತಾರೆ. ಹೀಗೆ ಹೆಣ್ಣುಹುಟ್ಟುತ್ತಲೇ ವಿರೋಧ ಕಟ್ಟಿಕೊಂಡು ಹುಟ್ಟುತ್ತಾಳೆ. ಇಲ್ಲಿ ಒಂದು ಸೋಜಿಗದ ಸಂಗತಿ ಎಂದರೆ ಗಂಡಸರಿಗಿಂತ ಹೆಂಗಸರೇ ಹೆಣ್ಣು ಹಡೆದವಳನ್ನು ಕೀಳಾಗಿ ಕಾಣುತ್ತಾರೆ. ಹೀಗೆ ಹುಟ್ಟಿನಿಂದಲೇ ಬೇಡವಾದ ಮಗಳು ಮುಂದೆ ತನ್ನ ಕಿಶೋರ ವಯಸ್ಸಿನವರೆಗೂ ಇದೇ ತರಹದ ಅನಾದರಣೆಗೆ ಗುರಿಯಾಗುತ್ತಾಳೆ. ಊಟ, ಬಟ್ಟೆ, ಪ್ರಾಮುಖ್ಯತೆ ಇವುಗಳಲ್ಲಿ ಗಂಡುಮಕ್ಕಳಿಗೆ ಪ್ರಾಸಿಧ್ಯವಿದ್ದು ಈಕೆ ಎಲ್ಲವರಲ್ಲೂ ಕೊನೆಗೆ ಬರುತ್ತಾಳೆ. ಇನ್ನೂ ಕಿಶೋರ ವಯಸ್ಸಿನಲ್ಲಿರುವಾಗಲೇ ಈಕೆಯ ಮೇಲೆ ಸಂಸಾರದ ಹೊಣೆಗಳು ಬೀಳುತ್ತವೆ. ಕುಟುಂಬವು ಮಧ್ಯಮ ಅಥವ ಬಡ ವರ್ಗಕ್ಕೆ ಸೇರಿದ್ದರೆ ಈಕೆ ತನ್ನ ತಂದೆ–ತಾಯಂದಿರ ನೆರವಿಗೆ ಬರಬೇಕಾಗುತ್ತದೆ. ಮನೆ ಕೆಲಸದಲ್ಲಿ ನೆರವಾಗುವುದು. ತಾಯಿ ಹೊಲಗೆಲಸಕ್ಕೆ ಹೋದಾಗ ತನ್ನ ತಮ್ಮ–ತಂಗಿಯರನ್ನು ನೋಡಿಕೊಳ್ಳುವುದು ಹೀಗೆ ಹತ್ತಾರು ಹೊಣೆಗಳು ಆಕೆಯ ಪಾಲಿಗೆ ಬರುತ್ತವೆ. ಅದೇ ವಯಸ್ಸಿನ ಹುಡುಗರು ಇನ್ನೂ ಸಣ್ಣವರು–ಎನ್ನುವ ರೀತಿಯಲ್ಲಿ ಯಾವ ಜವಾಬ್ದಾರಿಗಳೂ ಇಲ್ಲದೆ ಆಡಿಕೊಂಡಿರುವಾಗ ಹುಡುಗಿಗೆ ಅನೇಕ ಜವಾಬ್ದಾರಿಗಳು ಬೀಳುತ್ತವೆ.

ಮುಂದೆ ಸ್ವಲ್ಪ ದೊಡ್ಡವಳಾಗುತ್ತಿದ್ದಂತೆ ಆಗಲೇ ವಿವಾಹದ ಮಾತುಗಳು ಪ್ರಾರಂಭವಾಗುತ್ತವೆ. ಇಲ್ಲಿ ಆಕೆಯ ಬೌದ್ಧಿಕ ಮತ್ತು ಶಾರೀರಿಕ ಬೆಳವಣಿಗೆಗೆ ಮಹತ್ವವಿಲ್ಲ, ಆಕೆ ಆದಷ್ಟು ಸಣ್ಣವಯಸ್ಸಿನಲ್ಲಿರುವಾಗಲೇ ವಿವಾಹಮಾಡಿಬಿಡುವುದು ಹಿಂದಿನಿಂದ

-ಬಂದ ಪದ್ಧತಿ. ಅನೇಕ ವೇಳೆ, ಸೋದರಿಕೆಯ ವಿವಾಹ ಪದ್ಧತಿಯಿಂದಾಗಿ ಆಕೆ ಹುಟ್ಟಿದಾಗಲೇ ಇಂತಹವರಿಗೆ ಕೊಡುವುದೆಂದು ಮಾತಾಗಿರುತ್ತದೆ. ಇಲ್ಲಿ ಬೇಡವಾಗಿ ಅಲ್ಲಿ ಬೇಕಾಗುವುದರಿಂದ ಆಕೆಯ ವಿವಾಹ ಬೇಗನೇ ಮುಗಿದು ಬಿಡುತ್ತದೆ. ಮದುವೆಯಾದ ನಂತರ ಮಕ್ಕಳು ಹುಟ್ಟುವುದು, ಅವರ ಪಾಲನೆ–ಪೋಷಣೆ–ಹೀಗೆ ಆಕೆಯ ಜೀವನ ಕ್ರಮ ಪ್ರಾರಂಭವಾಗುತ್ತದೆ. ಅನೇಕ ವೇಳೆ ಗಂಡನಮನೆ ಆಕೆಗೆ ಸುಖ–ಸಂತೋಷಗಳ ತಾಣವಾಗದೆ ತೊಂದರೆಯದಾಗಬಹುದು. ಹಳ್ಳಿಗಾಡಿನಲ್ಲಿ ಸೋದರಿಕೆ ಸಂಬಂಧಗಳು ಹೆಚ್ಚಿದ್ದರೂ ವ್ಯಕ್ತಿತ್ವಗಳ ಹೊಂದಾಣಿಕೆ ಇಲ್ಲದೆ ಅಥವ ಅತ್ತೆ ಮಾವ ಇವರಲ್ಲಿ ಯಾರಾದರೊಬ್ಬರಿಗೆ ಈಕೆ ಸೊಸೆಯಾಗಿ ಬರುವುದು ಬೇಕಿಲ್ಲದಿದ್ದರೆ, ಆಕೆಯ ತೊಂದರೆಗಳು ಪ್ರಾರಂಭವಾಗುತ್ತವೆ. ತಮ್ಮೆಲ್ಲಾ ನಿರಾಶೆ, ಸಿಟ್ಟನ್ನು ತಮ್ಮ ಸೊಸೆಯ ಮೇಲೆ ತೀರಿಸಿಕೊಳ್ಳುತ್ತಾರೆ. ಸೊಸೆ ಮಾಡುವ ಎಲ್ಲಾ ಕೆಲಸದಲ್ಲಿಯೂ ತಪ್ಪು ಹುಡುಕುತ್ತಾರೆ. ಆಗ ಹೆಣ್ಣಿಗೆ ಹೆಣ್ಣೇ ಮುಳ್ಳಾಗುತ್ತದೆ, ಆಕೆಗೆ ತನ್ನ ಮನೆಯೇ ನರಕವಾಗುತ್ತದೆ.

ಅನೇಕ ಸಂದರ್ಭಗಳಲ್ಲಿ ಗಂಡನಾದವನು ಪ್ರೀತಿ ವಿಶ್ವಾಸಗಳಿಂದಿರುವುದಿಲ್ಲ. ಅವನೇನಾದರೂ ಪರಸ್ತ್ರೀಲಂಪಟನಾಗಿದ್ದರೆ, ಜೂಜುಕೋರನಾಗಿದ್ದರೆ ಅಥವಾ ಆಲಸಿಯಾಗಿದ್ದರೆ ಆಕೆಗೆ ಆಗುವ ತೊಂದರೆಗಳ ಜೊತೆಗೆ ಅವನ ಈ ಎಲ್ಲಾ ವ್ಯವಹಾರಕ್ಕೂ ಆಕೆಯೂ ಸಮಾಜದಲ್ಲಿ ತಲೆ ತಗ್ಗಿಸಬೇಕಾಗುತ್ತದೆ. ಆಗಲೂ ಸಮಾಜ ಈಕೆಯನ್ನೇ ಹಿಯಾಳಿಸಿ ತಪ್ಪನ್ನು ಈಕೆಯ ಮೇಲೆಯೇ ಹಾಕುತ್ತದೆ. ಈ ವ್ಯಥೆಯ ಜೊತೆಗೆ ಮನೆತನದ ಗೌರವ ಕಾಪಾಡಲು, ಮನೆತನವನ್ನು ಸರಿಯಾಗಿ ತೂಗಿಸಿಕೊಂಡು ಹೋಗಲು, ತಾನೇ ಮನೆತದ ಕಸುಬನ್ನು ನಿಭಾಯಿಸಿಕೊಂಡು ಹೋಗಬೇಕಾಗುತ್ತದೆ. ಅನೇಕ ವೇಳೆ ತಾನು ಕಷ್ಟಪಟ್ಟು ದುಡಿದರೂ ಅದರಿಂದ ಬರುವ ಆದಾಯ, ಆನಂದವನ್ನು ಪಡೆಯುವವರು ಗಂಡ ಅಥವಾ ಬೇರೆಯವರಿರುತ್ತಾರೆ. ಇತರರು ಸಂತೋಷವಾಗಿರುವುದನ್ನೇ ನೋಡಿಕೊಂಡು ತಾನು ಸಂತೋಷದಿಂದಿರಬೇಕಾಗುತ್ತದೆ. ಮುಂದೆ ಮಕ್ಕಳ ಮದುವೆ–ಮುಂಜಿಗಳಿಗೆ ತಾನೇ ಓಡಾಡಿ, ಸೋದರಿಕೆಯಲ್ಲಿ ಸಂಬಂಧ ಹುಡುಕಿ ತರಬೇಕಾಗುತ್ತದೆ. ಇದಾದ ನಂತರವೂ ಆಕೆಯ ಮಕ್ಕಳು ಆಕೆಗೆ ಅಭಾರಿಯಾಗಿ, ಗೌರವದಿಂದ ನೋಡಿಕೊಂಡರೆ ಆಕೆಯ ಪುಣ್ಯ. ಅನೇಕ ವೇಳೆ ಇಲ್ಲಿಯೂ ಆಕೆಗೆ ಸುಖವಿರುವುದಿಲ್ಲ. ಮನೆಗೆ ಸೊಸೆ ಬಂದನಂತರ ಈಕೆಯ ಸ್ಥಾನ ಮತ್ತೂ ಸಡಿಲವಾಗುತ್ತದೆ. ಇಳಿವಯಸ್ಸಿನಲ್ಲಿ ಶಕ್ತಿ, ಆರೋಗ್ಯ, ದೃಷ್ಟಿಗಳನ್ನು ಕಳೆದುಕೊಂಡು ಈಕೆ ಮಕ್ಕಳ, ಸೊಸೆಯ ಆದರ–ಗೌರವವನ್ನು ಕಳೆದುಕೊಂಡರೆ, ಪರರ ಮರುಕದಲ್ಲಿ ಜೀವಿಸಬೇಕಾಗುತ್ತದೆ. ಬಂದ ಸೊಸೆ ಸೋದರಿಕೆಯವಳಲ್ಲದಿದ್ದರೆ, ಗೌರವದಿಂದ ಕಾಣದಿದ್ದರೆ, ಕಾಲಕಾಲಕ್ಕೆ ಸರಿಯಾಗಿ ಅನ್ನ-ಆಹಾರಗಳಿಲ್ಲದೆ ಕೊರಗಿ ಸಾಯಬೇಕಾಗುತ್ತದೆ. ಹೀಗೆ ಹುಟ್ಟಿನಿಂದ ಸಾಯುವವರೆಗೂ ಕಷ್ಟಗಳನ್ನೇ ಉಂಡು ಕೊನೆಗೊಂದುದಿನ ಮಣ್ಣಾಗುವಳು ಗ್ರಾಮೀಣ ಮಹಿಳೆ.

ಆದರೆ ಎಲ್ಲಾ ಗ್ರಾಮೀಣ ಮಹಿಳೆಯರ ಬಾಳೂ ಗೋಳಿನದಾಗಿರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಇವೆಲ್ಲವೂ ಆಕೆಯ ಮನೋಭಾವಕ್ಕೆ, ವ್ಯಕ್ತಿತ್ವಕ್ಕೆ ತಕ್ಕಂತೆ ಆಗುತ್ತವೆ. ಆಕೆ ಬೆಳೆದ ಸ್ವಭಾವವೂ ಕಾರಣವಿರುತ್ತವೆ. ಎಲ್ಲಾ ಗಂಡಂದಿರು, ಅತ್ತೆಯರೂ ಕೆಟ್ಟವರಿರುವುದಿಲ್ಲ. ಕೆಟ್ಟ ಸ್ವಭಾವದಲ್ಲಿ ಬೆಳೆದ ಸೊಸೆ ತಾನು ಕಾಲಿಟ್ಟ ಮನೆಗೆ ಮಾರಿಯಾಗಬಹುದು. ತನ್ನ ಸುಖದ ಜೊತೆಗೆ ಇತರ ಸುಖವನ್ನೂ ಬಲಿ ತೆಗೆದುಕೊಳ್ಳುವ ಮಾರಿಯಾಗಬಹುದು. ಅಥವ ಸ್ವಭಾವಕ್ಕೆ ತಕ್ಕಂತೆ ಹೊಂದಿಕೊಂಡು ಬಂದ ಮನೆತನವನ್ನೇ ಉದ್ಧಾರ ಮಾಡಬಹುದು. ಆಕೆಯ ಜೀವನದ ಪ್ರತಿ ಹಂತದಲ್ಲಿಯೂ ಕೆಲವಾರು ಸೂಕ್ತ ಹಾಗು ಉತ್ತಮ ಸ್ಥಾನಮಾನಗಳಿವೆ. ಇಂದಿಗೂ 'ಹೆಣ್ಣು ಹುಟ್ಟಿದ ಮನೆ ತಣ್ಣಗೆ' ಎಂದು ಹಳ್ಳಿಗರು ಹೇಳುತ್ತಾರೆ. ನಂಬುತ್ತಾರೆ. ತಮ್ಮ ಕೊನೆಯ ಕಾಲದಲ್ಲಿ ಆಗುವವಳು ಮಗಳೇ, ಹೆಂಡತಿಯ ಹಿಂದೆ ಹೋಗುವ ಮಗನಲ್ಲವೆಂದೂ ಹೇಳುತ್ತಾರೆ. ಹೆಣ್ಣುಮಕ್ಕಳಿಲ್ಲದ ತಂದೆ–ತಾಯಿಗಳ, ಅದರಲ್ಲೂ ತಾಯಿಯ ಜೀವನ ಕಷ್ಟಕರ ಎಂದೂ ಹೇಳುತ್ತಾರೆ. ಅಲ್ಲದೆ ಮಗ ಮನೆಗೆ ಬೇಕಾದರೆ ಮಗಳು ಮನೆಗೆ ಅಂದ ಚಂದ. ಮಗಳನ್ನು ಕುಟುಂಬದ ಕುಡಿ ಎಂದು ಬಗೆದು ಬೇರೆ ಮನೆತನವೂ ಬೆಳೆಯಲೆಂದು ತಮ್ಮ ಕರುಳಿನ ಕುಡಿಯನ್ನು "ಕತ್ತರಿಸಿ" ಕೊಡುತ್ತಾರೆ ಈ ಕುಡಿಯನ್ನು ಕೊಟ್ಟವರಂತೆ ತೆಗೆದುಕೊಂಡವರೂ ಈ ಭಾವನೆಯನ್ನೇ ಹೊಂದಿರುತ್ತಾರೆ. ಆದ್ದರಿಂದ ಹುಡುಗಿ ಇನ್ನೂ ಹುಟ್ಟುತ್ತಿದ್ದಂತೆಯೇ ಅಥವಾ ಇನ್ನೂ ಚಿಕ್ಕವಳಿದ್ದಾಗಲೇ ಆಕೆಯನ್ನು ಸೊಸೆಯಾಗಿ ತಂದುಕೊಳ್ಳಲು ಮನೆತನಗಳು ಸಿದ್ಧವಿರುತ್ತವೆ. ಆಕೆ ಉತ್ತಮ ಮನೆತನದಲ್ಲಿ, ಉತ್ತಮರಲ್ಲಿ ಹುಟ್ಟಿದ್ದರಂತೂ ಆಕೆಯ ವಿವಾಹದ ಬಗೆಗೆ ಆಕೆಯ ತಂದೆ ತಾಯಂದಿರು ಚಿಂತಿಸಬೇಕಾದುದೇ ಇಲ್ಲ. ಹೀಗೆ ಇಷ್ಟಪಟ್ಟು ತಂದ ಸೊಸೆ ಸುಖವಾಗಿರಲೆಂದೂ ಬಯಸುತ್ತಾರೆ. ಆದರೆ ಅನೇಕ ಕಾರಣಗಳಿಂದ ಗಂಡನಮನೆಯಲ್ಲಿ ಆಕೆಯ ಜೀವನ ತನ್ನ ತೌರಿಗಿಂತ ಕಷ್ಟದಾಯಕವಾಗಬಹುದು.

ಇಂದು ಇಡೀ ಸಮಾಜದಲ್ಲಾಗಿರುವ ಬದಲಾವಣೆಯಿಂದಾಗಿ ಗ್ರಾಮೀಣ ಮಹಿಳೆಯೂ ಆಧುನಿಕತೆ, ಮತ್ತು ಮುನ್ನಡೆಯತ್ತ ನಡೆದಿದ್ದಾಳೆ. ಮೊದಲನೆಯದಾಗಿ ಆಕೆ ಹೊರಜಗತ್ತಿನೊಂದಿಗೆ ಹೆಚ್ಚು ಹೆಚ್ಚಾಗಿ ಬೆರೆಯುವ ಅವಕಾಶಬಂದಿದೆ. ಇಂದು ಆಕೆ ವಿದ್ಯೆಪಡೆಯಲು ಅವಕಾಶಗಳಿವೆ. ಇದರಿಂದಾಗಿ ಆಕೆಯಲ್ಲಿ ತನ್ನತನ, ತನ್ನದೇ ವ್ಯಕ್ತಿತ್ವ, ತನ್ನ ಒಳಿತು ಮುಂತಾದವುಗಳ ಕಡೆ ಗಮನಕೊಡುವಷ್ಟು ಆಕೆ ಮುಂದುವರೆದಿದ್ದಾಳೆ. ಇದಕ್ಕೆ ಪೋಷಕವಾಗಿ ಸರಕಾರ ಅಥವಾ ಸಮಾಜವೇ ತಂದಿರುವ ಅನೇಕ ಅನುಕೂಲತೆಗಳಿವೆ. ಇಂದು ವಿದ್ಯಾಭ್ಯಾಸವನ್ನು ಎಲ್ಲರಿಗೂ ಒದಗಿಸುವ ಸಲುವಾಗಿ ಸರಕಾರ ಪ್ರತಿ ಹಳ್ಳಿಗಳಲ್ಲಿಯೂ ಶಾಲೆಗಳನ್ನು, ದೊಡ್ಡ ಊರುಗಳಲ್ಲಿ ಪ್ರೌಢಶಾಲೆಗಳನ್ನು, ಕಾಲೇಜಗಳನ್ನು ತೆರೆದಿದೆ. ಇದೇ ರೀತಿಯಲ್ಲಿ ದೊಡ್ಡ ದೊಡ್ಡ ಊರುಗಳಲ್ಲಿ ಆಸ್ಪತ್ರೆಗಳನ್ನು ತೆಗೆದು ವೈದ್ಯಕೀಯ ಮತ್ತು ಸೂಲಗಿತ್ತಿಯರ ಸಹಾಯ ನೀಡುತ್ತಿದೆ. ಇದರಿಂದಾಗಿ

ಅನೇಕ ಗ್ರಾಮೀಣ ಮಹಿಳೆಯರ ತೊಂದರೆಗಳೂ ಸ್ವಲ್ಪಮಟ್ಟಿಗಾದರೂ ನಿವಾರಣೆಯಾದಂತಾಗಿದೆ.

ಇಂದಿಗೂ ಉಳಿದುಕೊಂಡು ಬಂದಿರುವ ಗ್ರಾಮೀಣ ಮಹಿಳೆಯರ ಸಮಸ್ಯೆಗಳಿಗೆ ಬಾಲ ವಿವಾಹ, ಅನಕ್ಷರತೆ, ಅನಾರೋಗ್ಯ ಮತ್ತು ಆರ್ಥಿಕವಾಗಿ ಅವಲಂಬನೆ ಮುಖ್ಯವಾದವು. ಹೊರಜಗತ್ತು ಎಷ್ಟೇ ಆಧುನಿಕತೆ ಹೊಂದಿದ್ದರೂ ಗ್ರಾಮೀಣ ಸಮಾಜ ಇನ್ನೂ ಸಂಪ್ರದಾಯದ ಬಿಗಿತದಲ್ಲಿದೆ. ಈ ಕಾರಣದಿಂದ ಗ್ರಾಮಸ್ಥರು ತಮ್ಮ ಮಕ್ಕಳನ್ನು ಅದಷ್ಟು ಜಾಗ್ರತೆ ವಿವಾಹ ಮಾಡಿಬಿಡುತ್ತಾರೆ. ಇದಕ್ಕೆ ಅನೇಕ ಕಾರಣಗಳಿವೆ. ಉತ್ತಮ ಸಂಬಂಧ ಬಂದರೆ, ಖರ್ಚು ಕಡಿಮೆ ಮಾಡಲು, ಲೋಕನಿಂದನೆಯನ್ನು ತಪ್ಪಿಸಲು, ತಮ್ಮ ಮಕ್ಕಳನ್ನು, ಅದರಲ್ಲೂ ಹೆಣ್ಣುಮಕ್ಕಳನ್ನು ಬೇಗನೆ ಮದುವೆ ಮಾಡಿಬಿಡುತ್ತಾರೆ. ಇದರಿಂದಾಗಿ ಆಕೆ ಚಿಕ್ಕವಯಸ್ಸಿನಲ್ಲೇ ತಾಯಿಯಾಗಿ, ಸಂಸಾರದ ಭಾರ ಹೊತ್ತು ತನ್ನ ದೇಹ ಹಾಗು ಮಾನಸಿಕ ಆರೋಗ್ಯ ಕೆಡಿಸಿಕೊಳ್ಳುತ್ತಾಳೆ. ಅನೇಕ ಸಂದರ್ಭಗಳಲ್ಲಿ ಆಕೆ ಬಾಲವಿಧವೆಯಾಗಬಹುದು, ಇಲ್ಲವೆ ಮುದಿ ವಯಸ್ಸಿನ ಅಥವಾ ಕೆಟ್ಟ ಗಂಡನೊಂದಿಗೆ ಬಾಳಲಾರದೆ ಬಿಡುಗಡೆ ಪಡೆದು ತೌರಿಗೆ ಹಿಂತಿರುಗಬಹುದು. ಆಗ ಜೀವನಮಾಡಲು ಆಕೆ ಮತ್ತೆ ಇತರರನ್ನೇ ಅವಲಂಬಿಸಬೇಕಾಗುತ್ತದೆ.

ಗ್ರಾಮೀಣ ಪ್ರದೇಶದಂತೆ ಗ್ರಾಮೀಣ ಮಹಿಳೆಯ ಆರೋಗ್ಯ ಇನ್ನೂ ಸುಧಾರಿಸಬೇಕಾಗಿದೆ. ಇದಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ಅನಕ್ಷರತೆ, ಅನಾನುಕೂಲತೆ, ಮೂಢನಂಬಿಕೆ, ಬಡತನ ಮತ್ತು ಸೂಕ್ತ ಸಹಾಯವಿಲ್ಲದ್ದು ಇವು ಮುಖ್ಯವಾದವು. ಗ್ರಾಮೀಣ ಪ್ರದೇಶದಲ್ಲಿ ಅನೇಕ ಅನುಕೂಲತೆಗಳಿರುವುದಿಲ್ಲ. ಆಸ್ಪತ್ರೆ ಮುಂತಾದ ಅನುಕೂಲಕ್ಕೆ ಅವರು ಹತ್ತಿರದ ಪಟ್ಟಣಕ್ಕೆ ಹೋಗಬೇಕು. ಅಲ್ಲಿಗೆ ಹೋಗಲು ಸಾರಿಗೆಯ ಅನುಕೂಲತೆ ಇರುವುದಿಲ್ಲ. ಹೆಚ್ಚಿಕ್ಕೆ ಅವರಲ್ಲಿ ಹಣವಿರುವುದಿಲ್ಲ. ಅನೇಕ ಸಂದರ್ಭದಲ್ಲಿ ಇವರಿಗೆ ಇನ್ನೂ ಮಾಯ-ಮಾಟದಲ್ಲಿ, ದೇವರು ಮುನಿಯುವುದರಲ್ಲಿ ನಂಬಿಕೆ ಹೆಚ್ಚು. ಅದ್ದರಿಂದ ಯಾರಿಗಾದರೂ ಕಾಯಿಲೆಯಾದರೆ ಇದು ಯಾವುದಾದರೂ ಭೂತ-ಪ್ರೇತದ ಚೇಷ್ಟೆ ಅಥವಾ ದೇವರಿತ್ತ ಶಿಕ್ಷೆ ಎಂದು ಬಗೆದು ಅದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಮಂತ್ರವಾದಿಯ ಕಡೆ ಹೋಗುವರು. ದೇವರನ್ನು ಸಂತುಷ್ಟಪಡಿಸಲು ಆಹುತಿ ಮತ್ತು ಬಲಿ ನೀಡುವರು, ತೀರ್ಥಯಾತ್ರೆ ಮಾಡುವರು. ಇದೇ ಹಣದಲ್ಲಿ ವೈದ್ಯರಲ್ಲಿಗೆ ಹೋಗಿ, ಸೂಕ್ತ ಔಷಧೋಪಚಾರ ಮಾಡಿಕೊಂಡರೆ ಬೇಗನೆ ವಾಸಿಯಾಗಬಹುದು. ಆದರೆ ಅವರಲ್ಲಿಯ ಮೂಢನಂಬಿಕೆಗಳಿಂದಾಗಿ ಅದರ ಬದಲು ತೆಗೆದುಕೊಳ್ಳುವುದು, ಕಾಣಿಕೆ ನೀಡುವುದು ಮುಂತಾದವನ್ನು ಮಾಡುತ್ತಾರೆ. ಇದೇ ರೀತಿ ಅನೇಕ ರೋಗಗಳ ಬಗೆಗೆ ಅವರಿಗೆ ಸರಿಯಾದ ಮಾಹಿತಿ ಇರುವುದಿಲ್ಲ. ಇವರ ನಂಬಿಕೆಯಂತೆ ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಸಂಬಂಧವೇ ಇರುವುದಿಲ್ಲ. ಆದ್ದರಿಂದ ಮೈ, ಬಟ್ಟೆ, ಮನೆ ಮತ್ತು ವಾತಾವರಣದ ಸ್ವಚ್ಛತೆಗೆ ಗಮನವನ್ನೇ ನೀಡುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿಯ

ಮತ್ತೊಂದು ಸಮಸ್ಯೆ ಎಂದರೆ ಸ್ವಚ್ಛ ಮತ್ತು ಸತ್ವಪೂರ್ಣ ಆಹಾರದ ಕೊರತೆ. ಹಿಂದಿನ ಕಾಲದಲ್ಲಿ ಸಂಪ್ರದಾಯಿಕವಾದ ರೀತಿಯಲ್ಲಿ ಬಂದ ಆಹಾರಗಳು ಸೂಕ್ತ ಸತ್ವಗಳಿಂದ ಕೂಡಿರುತ್ತಿದ್ದವು. ಇಂದು ಆಧುನಿಕತೆಯ ಹೆಸರಿನಲ್ಲಿ ಇವನ್ನು ಕೈಬಿಡಲಾಗಿದೆ. ಆದ್ದರಿಂದ ಸತ್ವರಹಿತ ಅನ್ನವೆಂದು ಗ್ರಾಮೀಣ ಜನ ಅದರಲ್ಲೂ ಮಕ್ಕಳು ವಿಶೇಷವಾಗಿ ತೊಂದರೆಗೀಡಾಗಿದ್ದಾರೆ. ಅಲ್ಲದೆ ಬಾಣಂತಿಯಾಗಿದ್ದಾಗ, ಮಗುವಿಗೆ ಹಾಲುಣಿಸುವ ದಿನಗಳಲ್ಲಿ, ಮಹಿಳೆಗೆ ಸೂಕ್ತ ಆಹಾರದ ಅವಶ್ಯಕತೆ ಇದೆ. ಇಂದು ಗ್ರಾಮೀಣ ಮಹಿಳೆ ಇದನ್ನು ಕಳೆದುಕೊಂಡು ಅನಾರೋಗ್ಯ, ಅಶಕ್ತತೆ ಮುಂತಾದ ತೊಂದರೆಗಳಿಗೆ ಇಡಾಗಿದ್ದಾಳೆ.

ಕೊನೆಯದಾಗಿ ಗ್ರಾಮೀಣ ಮಹಿಳೆಗೆ ಇರುವ ಅವಕಾಶಗಳು ಕಡಿಮೆ. ಇದು ಆರ್ಥಿಕ, ಸಾಮಾಜಿಕ ಅಥವಾ ರಾಜಕೀಯ ರಂಗದಲ್ಲಿರಬಹುದು. ಒಂದು ವಿಧದಲ್ಲಿ ಹೇಳುವುದಾದರೆ ಇವೆಲ್ಲವೂ ಇಡೀ ಗ್ರಾಮೀಣ ಸಮಾಜದ ಸಮಸ್ಯೆಗಳು. ಅದರಲ್ಲೂ ಮಹಿಳೆಯ ಸ್ಥಾನ ಮಾನ ಇನ್ನೂ ಹೆಚ್ಚಿನ ಸೋಚನೀಯ ಸ್ಥಿತಿಯಲ್ಲಿವೆ. ಗ್ರಾಮೀಣ ಮಹಿಳೆ ತನ್ನ ಸ್ವಂತ ಆಸೆ-ಆಕಾಂಕ್ಷೆಗಳಿಂದ, ಬುದ್ಧಿ ಚಾತುರ್ಯದಿಂದ ಯಾವುದಾದರೂ ಕೆಲಸವನ್ನು ಮಾಡಿದರೆ, ಅದರಿಂದ ಹಣ, ಘನತೆಗೌರವಗಳು ಬಂದರೆ ಅವು ಆಕೆಗಿಂತ ಆಕೆಯ ಗಂಡನಿಗೆ ಅಥವ ಮನೆತನಕ್ಕೆ ಸೇರುತ್ತವೆ. ಗ್ರಾಮದಲ್ಲಿ ವ್ಯವಸಾಯವನ್ನು ಬಿಟ್ಟು ಉಳಿದ ಆರ್ಥಿಕ ಅವಕಾಶಗಳು ಕಡಿಮೆ. ಯಾರಾದರೂ ಮಹಿಳೆಯರು ಹಾಲು ಮಾರಿ, ಬುಟ್ಟಿ ಹೆಣೆದು, ಕುರಿ–ಕೋಳಿ ಸಾಕಿ, ಕೂಲಿ ಮಾಡಿ ಹೆಚ್ಚಿಗೆ ಹಣ ಗಳಿಸಿದರೆ ಅದರಿಂದ ಆಕೆಗೆ ಸಿಗುವುದು ಲಾಭಕ್ಕಿಂತ ನಿರಾಶೆಯೇ ಹೆಚ್ಚು. ಏಕೆಂದರೆ ಆಕೆಯೇ ಇತರರ ಸೊತ್ತಾಗಿರುವಾಗ ಆಕೆಗೆ ಸೇರಿದ ವಸ್ತುಗಳೂ ಆಕೆಯವಲ್ಲ. ಅವುಗಳು ತನ್ನವೆಂದು ವಾದಮಾಡಿ ಕಳೆದುಕೊಳ್ಳುವುದು ಬೇಡವೆಂದು ಗುಪ್ತವಾಗಿ ಮಾಡಿ, ಕೊನೆಗೆ ಸಿಕ್ಕಾಗ ಅನುಭವಿಸುವ ತೊಂದರೆಗಳೂ ಅನೇಕ. ಅದ್ದರಿಂದ ಅನೇಕ ಮಹಿಳೆಯರಿಗೆ ಮನಸ್ಸು, ಕಾಲ ಮತ್ತು ಪರಿಣತೆ ಇದ್ದರೂ ಅವುಗಳನ್ನು ಉಪಯೋಗಿಸಿ ಹೆಚ್ಚಿನ ಲಾಭಪಡೆಯಲು ತೊಡಗುವುದಿಲ್ಲ.

ರಾಜಕೀಯ ಹಾಗು ಸಾರ್ವಜನಿಕವಾಗಿಯೂ ಆಕೆಯ ಸ್ಥಾನಮಾನ ಉತ್ತಮವಿಲ್ಲ. ಗ್ರಾಮದಲ್ಲಿ ಅಥವಾ ಹೊರಗೆ ನಡೆಯುವ ಅನೇಕ ಹಬ್ಬ, ಜಾತ್ರೆಗಳಿಗೆ ವಯಸ್ಸಾದ ಮಹಿಳೆ ಹೋಗುವಂತಿಲ್ಲ. ಉತ್ತಮ ಕುಲ–ಮನೆತನಕ್ಕೆ ಸೇರಿದ ಮಹಿಳೆಯರಿಗೆ ಇನ್ನೂ ಹೆಚ್ಚಿನ ನಿರ್ಬಂಧಗಳಿರುತ್ತವೆ. ಇದೇ ರೀತಿ ಗ್ರಾಮದಲ್ಲಾಗುವ ಸಮಾರಂಭಗಳಿಗೆ, ಸಭೆಗಳಿಗೆ ಹೋಗಿ ತನ್ನ ಮನೋಭಾವನೆ ಬೆಳಸಿಕೊಳ್ಳುವಂತಿಲ್ಲ. ರಾಜಕೀಯವಾಗಿ ಈಕೆಗೆ ಮತ ನೀಡುವ ಹಕ್ಕಿದ್ದರೂ ಅದನ್ನು ನಿಯಂತ್ರಿಸುವ ಹಕ್ಕು ಆಕೆಯ ತಂದೆಗೆ, ಗಂಡನಿಗೆ ಇರುತ್ತದೆಯಾದ್ದರಿಂದ ಅವರು ಹೇಳಿದವರಿಗೆ ಮತನೀಡಬೇಕಾಗುತ್ತದೆ. ಗ್ರಾಮಪಂಚಾಯತಿಗಳಲ್ಲಿ, ಸಂಘ ಸಂಸ್ಥೆಗಳಲ್ಲಿ ಮಹಿಳಾ ಸದಸ್ಯೆಯರು ಇರಲೇಬೇಕೆಂಬ

ನಿಬಂಧನೆಇರುವುದರಿಂದ ಇರುವ ಅನೇಕ ಮಹಿಳೆಯರೂ ಕೂಡ ಈ ಕಾರಣದಿಂದ ತಮ್ಮ ಹಕ್ಕನ್ನು ಚಲಾಯಿಸುವಂತಿಲ್ಲ. ಅನೇಕ ವೇಳೆ ಇಂತಹ ಸಾರ್ವಜನಿಕ ಸ್ಥಾನಕ್ಕೆ–ಮಾನಕ್ಕೆ ಒಪ್ಪಿದ ಮಹಿಳೆಯ ಸಾಮಾಜಿಕ ಸ್ಥಾನಮಾನ, ಶೀಲ ಮತ್ತು ಮನೋಧರ್ಮಗಳ ಬಗೆಗೆ ಗ್ರಾಮಸ್ಥರಲ್ಲಿ ಒಳ್ಳೆಯ ಅಭಿಪ್ರಾಯವೇ ಇರುವುದಿಲ್ಲವಾದ್ದರಿಂದ ಇಂತಹವರಲ್ಲದೆ ಉಳಿದ ಯಾರೂ ಈ ಸ್ಥಾನ–ಮಾನಗಳನ್ನು ಪಡೆಯಲು ಮುಂದೆ ಬರುವುದಿಲ್ಲ. ಹೀಗಾಗಿ ತಮಗೆ ಅನೇಕ ಅವಕಾಶ, ಸಹಾಯಗಳಿದ್ದರೂ ಗ್ರಾಮೀಣ ಮಹಿಳೆಯು ಅವುಗಳನ್ನು ಪಡೆದಿಲ್ಲ. ತಮ್ಮ ಅವಕಾಶಗಳ ಬಗೆಗೆ, ಒಳಿತಿನ ಬಗೆಗೆ ವಾದಮಾಡಲು ಅವಳು ಗ್ರಾಮ ಪಂಚಾಯಿತಿಗಳಲ್ಲಿ, ಸಂಘ–ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ಪಡೆದಿದ್ದರೂ ಯಾರೂ ಅಲ್ಲಿ ಹೋಗಿ ಈ ಬಗ್ಗೆ ವಾದಿಸಿಲ್ಲ. ಹೀಗಾಗಿ ಗ್ರಾಮೀಣ ಮಹಿಳೆಯರ ಒಳಿತಿಗೆ ಹೊರಗಿನವರು ಮಾಡುವ ಅನೇಕ ಅಭಿವೃದ್ಧಿ ಕಾರ್ಯಗಳು ಹೆಚ್ಚಿನಸಫಲಕಾರಿಯಾಗಿಲ್ಲ.

ಕಪ್ಪು ಹಣ ಹಾಗೂ ಹಣದುಬ್ಬರ

● ಎಮ್. ಸಿ. ಕೊಡ್ಲಿ

ಕಪ್ಪು ಹಣವೆಂದರೆ ಕಾಯದೆ ವಿರುದ್ಧವಾಗಿ ಗಳಿಸಿದ ಹಣ ಅಥವಾ ಸರಕಾರಕ್ಕೆ ಸಂದಬೇಕಾದ ಕರವನ್ನು ಕೊಡದೆ ಬಚ್ಚಿಟ್ಟ ಹಣ. ಕಪ್ಪು ಹಣವು ಪ್ರತಿದಿನವೂ ಎಲ್ಲ ಕಡೆಗೂ ಸಂಪಾದ್ಯವಾಗುತ್ತಿರುತ್ತದೆ. ಅದು ಕೇವಲ ಕೆಲವು ಪೈಸೆಗಳಾಗಿರಬಹುದು, ಅಥವಾ ಲಕ್ಷ ರೂಪಾಯಿಗಳಾಗಿರಬಹುದು. ಸರಕಾರಿ ಅಧಿಕಾರಿಯು ಯಾವದೇ ವ್ಯಕ್ತಿಯಿಂದ ಸಂಭಾವನೆಯನ್ನು ಸ್ವೀಕರಿಸಿದಾಗ ಕಪ್ಪು ಹಣವನ್ನು ಗಳಿಸುತ್ತಾನೆ. ಕೆಲವೊಂದು ವಸ್ತುಗಳ ಉತ್ಪಾದಕರು ಸರಕಾರವು ನಿಗದಿ ಪಡಿಸಿದ ಬೆಲೆಗಿಂತ ಹೆಚ್ಚು ಬೆಲೆಯನ್ನು ಗ್ರಾಹಕರಿಂದ ಸ್ವೀಕರಿಸಿ, ಹೆಚ್ಚಿನ ಬೆಲೆಯನ್ನು ತೋರಿಸದೆ ಇರುವಾಗ ಕಪ್ಪುಹಣವು ಉತ್ಪನ್ನವಾಗುತ್ತದೆ. ಅದೇ ರೀತಿಯಾಗಿ ಸಿನಿಮಾ ಥೇಟರಿನ ಮಾಲಕರು ಟಿಕೆಟನ್ನು ನಿಗದಿಪಡಿಸಿದ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಿದಾಗ ಕಪ್ಪುಹಣ ಹುಟ್ಟುತ್ತದೆ. ಎಷ್ಟೋ ಚಿಕ್ಕ ವ್ಯಾಪಾರಿಗಳು ಮತ್ತು ಸ್ವಂತ ಉದ್ಯೋಗವಿದ್ದಂಥ ಜನರು ಅವರ ವಾರ್ಷಿಕ ಉತ್ಪನ್ನ ಹೆಚ್ಚಾಗಿದ್ದಾಗ್ಯೂ ತೆರಿಗೆಯನ್ನು ತಪ್ಪಿಸಲು ತಮ್ಮ ಆದಾಯವನ್ನು ಕಡಿಮೆ ತೋರಿಸುತ್ತಾರೆ. ಹೀಗಾಗಿ ಕರಕೊಡದೆ ತಪ್ಪಿಸಿದ ಹಣವು ಕಪ್ಪುಹಣವಾಗುತ್ತದೆ. ಜನಸಾಮಾನ್ಯರು ಕಪ್ಪು ಹಣವು ಕೇವಲ ಕಾಳಸಂತೆಯಿಂದ ಉದ್ಭವಿಸುತ್ತದೆಯೆಂದು ತಿಳಿದಿರುತ್ತಾರೆ. ಬಹುಪಾಲಿಗೆ ಈ ಕಲ್ಪನೆಯು ನಿಜವಾಗಿದೆಯಾದರೂ ಕಪ್ಪುಹಣವು ಬೇರೆ ಬೇರೆ ರೀತಿಯಾಗಿಯೂ ಸಂಪಾದ್ಯವಾಗುತ್ತದೆ. ಒಬ್ಬ ಆಫೀಸ ಪೇದೆಯು ಗಳಿಸುವ ಸಣ್ಣಪುಟ್ಟ ಸಂಭಾವನೆಗಳೂ ಸಹಿತ ಕಪ್ಪುಹಣವಾಗುತ್ತದೆ. ಸಿನಿಮಾ ತಾರೆಯರು ಕರತಪ್ಪಿಸಲು ತಮ್ಮ ಸಂಭಾವನೆಯನ್ನು ಕಡಿಮೆ

ತೋರಿಸಿವಾಗ ಉಳಿದ ಹಣವು ಕಪ್ಪುಹಣವೆಂದು ಪರಿಗಣಿಸಲ್ಪಡುತ್ತದೆ. ಅದೇ ರೀತಿಯಾಗಿ ಪರದೇಶಗಳಿಗೆ ವಸ್ತುಗಳನ್ನು ರಫ್ತುಮಾಡುವಾಗ ವ್ಯಾಪಾರಿಯು ತನ್ನ ವಸ್ತುಗಳನ್ನು ಪರದೇಶಗಳಲ್ಲಿ ಮಾರಿದ ಬೆಲೆಗಿಂತ ಕಡಿಮೆ ಬೆಲೆ ತೋರಿಸಿ ಉಳಿದ ಹಣವನ್ನು ಪರದೇಶದ ಬ್ಯಾಂಕುಗಳಲ್ಲಿಟ್ಟು ಮುಂದೆ ಆ ಹಣವನ್ನು ಹೆಚ್ಚಿನ ವಿನಿಮಯ ಬೆಲೆಗೆ ಮಾರಿ ಗಳಿಸಿದ ಹಣವು ಕಪ್ಪುಹಣವಾಗುತ್ತದೆ.

ನಾವು ಇಲ್ಲಿ ಕಪ್ಪುಹಣ ಮತ್ತು ಕಪ್ಪು ಐಶ್ವರ್ಯ ಎಂಬ ವಿಂಗಡಣೆಯನ್ನು ಮಾಡಬಹುದು. ಈ ವಿಂಗಡಣೆಯು ಅವಶ್ಯ. ಯಾಕೆಂದರೆ ಜನಸಾಮಾನ್ಯರು ಕಪ್ಪುಹಣವೆಂದರೆ ಅದು ಕೇವಲ ಕರೆನ್ಸಿ ನೋಟುಗಳ ರೂಪದಲ್ಲಿಯೇ ಇರುತ್ತದೆಯೆಂದು ಕಲ್ಪಿಸಬಹುದು. ಕಪ್ಪುಹಣ ಗಳಿಸುವವರು ಈ ಹಣದಿಂದ ಭಂಗಾರ, ವಜ್ರ, ವೈಡೂರ್ಯ ಆಸ್ತಿಪಾಸ್ತಿಗಳನ್ನು ಕೊಂಡಿರಬಹುದು. ಮೇಲಾಗಿ ಪ್ರತಿದಿನವೂ ಕಪ್ಪುಹಣವು ಬಿಳಿಯ ಹಣವಾಗಿ ಪರಿವರ್ತನೆ ಹೊಂದುತ್ತಾ ಇರುತ್ತದೆ. ಕಪ್ಪು ಹಣಕ್ಕೆ ತನ್ನದೇ ಆದ ಒಂದು ಬಣ್ಣವಿರುತ್ತದೆಯೆಂದು ಯಾರೂ ಭಾವಿಸಬಾರದು. ಒಂದೇ ಹಣವು ಕಾಯದೆ ವಿರುದ್ಧ ವ್ಯವಹಾರದಲ್ಲಿ ಕಪ್ಪು ಹಣವಾಗಿಯೂ ಕಾಯದೆ ಬದ್ಧ ವ್ಯವಹಾರದಲ್ಲಿ ಬಿಳಿಯ ಹಣವಾಗಿಯೂ ಪರಿವರ್ತನೆ ಹೊಂದುತ್ತದೆ.

ನಾವೀಗ ಕಪ್ಪು ಹಣವೆಂದರೇನು ಮತ್ತು ಅದು ಹೇಗೆ ಉತ್ಪನ್ನವಾಗುತ್ತದೆಯೆಂಬುದನ್ನು ಕಂಡುಕೊಂಡಂತಾಯಿತು. ಈಗ ಈ ಕಪ್ಪು ಹಣವು ನಮ್ಮ ದೇಶದಲ್ಲಿ ಎಷ್ಟಿದೆಯೆಂಬುದನ್ನು ಕಂಡುಕೊಂಡು ಈ ಹಣವು ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಯಾವ ಪರಿಣಾಮವನ್ನು ಬೀರುತ್ತದೆ ಮತ್ತು ಈ ಕಪ್ಪು ಹಣವನ್ನು ಹೇಗೆ ನಿರ್ಮೂಲನೆ ಮಾಡುವದೆಂಬುದನ್ನು ಕಂಡುಕೊಳ್ಳುವಾ.

ನಮ್ಮ ದೇಶದಲ್ಲಿಯ ಕಪ್ಪುಹಣದ ಮೊತ್ತದ ಬೇರೆ ಬೇರೆ ಅಂದಾಜುಗಳಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಈ ಅಂದಾಜುಗಳು ೧೦೦ ಕೋಟಿಯಿಂದ ೧೦ ಸಾವಿರ ಕೋಟಿ ರೂಪಾಯಿಗಳವರೆಗೆ ನಮ್ಮ ದೇಶದಲ್ಲಿ ಕಪ್ಪುಹಣವಿದೆಯೆಂದು ಲೆಕ್ಕಹಾಕಿವೆ.

"ವಾಂಚೂ ಕಮಿಟಿಯು" ೧೯೬೮–೧೯೬೯ರಲ್ಲಿ ನಮ್ಮ ದೇಶದಲ್ಲಿ ಕಪ್ಪುಹಣವು ಸುಮಾರು ೭ ಸಾವಿರ ಕೋಟಿ ರೂಪಾಯಿ ಇದ್ದಿತೆಂದು ಅಂದಾಜು ಮಾಡಿದೆ. ಡಾಕ್ಟರ ಡಿ. ಆರ್ ರಾಂಗ್ನೇಕರ ಅವರ ಪ್ರಕಾರ ನಮ್ಮ ದೇಶದಲ್ಲಿಯ ಕಪ್ಪುಹಣವು ೧೯೬೯–೭೦ರಲ್ಲಿ ಸುಮಾರು ೩೦೮೦ ಕೋಟಿ ರೂಪಾಯಿಗಳು. ಪ್ರೊಫೆಸರ ಬಿ. ಪಿ ಅಡರಕರ ಅವರು ಕಪ್ಪುಹಣವು ನಮ್ಮ ದೇಶದಲ್ಲಿ ೧೫೦೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಇರಲಾರದೆಂದು ಅಭಿಪ್ರಾಯ ಪಡುತ್ತಾರೆ. ಆದರೆ ಸಮಾಜವಾದಿ ಗುಂಪಿನ ಧುರೀಣ ಶಶಿಭೂಷಣರವರು ನಮ್ಮ ದೇಶದಲ್ಲಿ ಕಪ್ಪುಹಣವು ಸುಮಾರು ೧೦ ಸಾವಿರ ಕೋಟಿ

ರೂಪಾಯಿಗಳಷ್ಟು ಇದೆಯೆಂದು ಹೇಳುತ್ತಾರೆ. ಜೇರೆ ಜೇರೆ ಅಂದಾಜುಗಳಲ್ಲಿ ಇಷ್ಟು ವ್ಯತ್ಯಯ ಬರಲು ಕಾರಣವೆಂದರೆ, ಕೆಲವರು ಕೇವಲ ಕಪ್ಪು ಹಣದ, ಅಂದಾಜು ಮಾಡಿದ್ದರೆ ಮತ್ತೆ ಕೆವಲರು ಕಪ್ಪುಐಶ್ವರ್ಯವನ್ನು ಹಿಡಿದು ಲೆಕ್ಕ ಹಾಕಿದ್ದಾರೆ. ಕಪ್ಪು ಹಣ ಮತ್ತು ಕಪ್ಪು ಐಶ್ವರ್ಯ ಎರಡೂ ಸೇರಿ ನಮ್ಮ ದೇಶದಲ್ಲಿ ಅವು ಸುಮಾರು ೧೦ ಸಾವಿರ ಕೋಟಿಯಿದೆಯೆಂದು ಒಪ್ಪಬಹುದು. ಯಾಕೆಂದರೆ ಕಪ್ಪು ಹಣವು ಸಮುದ್ರದಲ್ಲಿ ತೇಲುವ ಹಿಮಗಟ್ಟೆಗಳಿದ್ದಂತೆ. ಮೇಲಿನ ತುದಿಯಷ್ಟೇ ನೀರಿನ ಹೊರಗೆ ಕಾಣುತ್ತದೆ. ಉಳಿದೆಲ್ಲ ಭಾಗ ನೀರಿನಲ್ಲಿ ಮುಚ್ಚಿಹೋಗಿರುತ್ತದೆ. ಅದೇ ರೀತಿಯಾಗಿ ಕಪ್ಪುಹಣವೂ ಸಹಿತ ಕೇವಲ ಕೆಲವೊಂದು ಭಾಗವು ನಮ್ಮ ಕಣ್ಣಿಗೆ ಬೀಳುತ್ತದೆ. ಉಳಿದ ಭಾಗ ಜನಸಾಮಾನ್ಯರ ಕಣ್ಣಿಗೆ ಕಾಣದ ಹಾಗೆ ಆಸ್ತಿಪಾಸ್ತಿಗಳಲ್ಲಿ ಮುಚ್ಚಿ ಹೋಗಿ ಬಿಟ್ಟಿರುತ್ತದೆ.

ಈ ಕಪ್ಪು ಹಣದಿಂದ ದೇಶದ ಆರ್ಥಿಕ ರಂಗದ ಮೇಲಾಗುವ ಪರಿಣಾಮಗಳೇ ನೆಂಬುದನ್ನು ನಾವಿಷ್ಟು ಕಂಡುಕೊಳ್ಳುವಾ. ಇಲ್ಲಿ ಕಪ್ಪು ಹಣವು ಹಣದುಬ್ಬರದ ಮೇಲೆ ಪರಿಣಾಮವನ್ನು ಬೀರಬಲ್ಲದೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಕೆಲವರು ಕಪ್ಪುಹಣ ದಿಂದ ಹಣದುಬ್ಬರವಾಗುತ್ತದೆಯೆಂದು ಅಭಿಪ್ರಾಯ ಪಡುತ್ತಾರೆ. ಮತ್ತೆ ಕೆಲವರು ಕಪ್ಪು ಹಣವು ಹಣದುಬ್ಬರವನ್ನು ಕಡಿಮೆ ಮಾಡುವಲ್ಲಿ ಸಹಾಯಕವಾಗುತ್ತದೆಯೆಂದು ಹೇಳುತ್ತಾರೆ. ಯಾಕೆಂದರೆ ಕಪ್ಪು ಹಣದ ಚಲಾವಣೆಯ ಗತಿಯು ಬಿಳಿಯ ಹಣ ಕ್ಕಿಂತಲೂ ಕಡಿಮೆಯಿರುವದರಿಂದ ಅದು ಹಣದುಬ್ಬರವನ್ನು ಕಡಿಮೆ ಮಾಡುತ್ತದೆ ಯೆಂದು ಅವರು ಹೇಳುತ್ತಾರೆ. ಆದ್ದರಿಂದ ಕಪ್ಪು ಹಣವು ಹಣದುಬ್ಬರಕ್ಕೆ ಸಹಾಯಕ ವಾಗುತ್ತದೆಯೋ ಅಥವಾ ಅದನ್ನು ಕಡಿಮೆ ಮಾಡುತ್ತದೆಯೋ ಎಂಬ ಪ್ರಶ್ನೆಗೆ ಉತ್ತರ ಹೇಳುವದು ಕಠಿಣವಾಗುತ್ತದೆ. ಈ ಪ್ರಶ್ನೆಗೆ ಸಮರ್ಪಕವಾದ ಉತ್ತರ ಹೇಳಬೇಕಾದರೆ ಕಪ್ಪು ಹಣವು ಯಾವ ರೀತಿಯಾಗಿ ವೆಚ್ಚವಾಗಿ ಹೋಗುತ್ತದೆಯೆಂಬುದನ್ನು ನಾವು ಕಂಡು ಕೊಳ್ಳಬೇಕು. ಕಪ್ಪು ಹಣ ಗಳಿಸುವವರು ಹೆಚ್ಚು ಹಣವನ್ನು ಖರ್ಚು ಮಾಡಬಹುದು. ಅನ್ಯಾಯವಾಗಿ ಗಳಿಸಿದ ಈ ಹಣವನ್ನು ಜನರು ಸುಲಭವಾಗಿ ಖರ್ಚು ಮಾಡುತ್ತಾರೆ. ಆದರೆ ಅದೇ ವೇಳೆಯಲ್ಲಿ ಮತ್ತೊಬ್ಬನ ವೆಚ್ಚಮಾಡುವ ಶಕ್ತಿಯು ಕಡಿಮೆಯಾಗಿರು ತ್ತದೆಯೆಂಬುದನ್ನು ನಾವು ಗಮನದಲ್ಲಿಡಬೇಕು. ಉದಾಹರಣಾರ್ಥವಾಗಿ. ಒಬ್ಬ ರೇಲ್ವೆ ಕಂಡಕ್ಟರನು ಒಬ್ಬ ಪ್ಯಾಸಿಂಜರನಿಗೆ ಸ್ಥಳಕೊಡಲು ೫ ರೂಪಾಯಿಗಳನ್ನು ತೆಗೆದುಕೊಂಡರೆ ಕಂಡಕ್ಟರನ ಖರ್ಚುಮಾಡುವ ಶಕ್ತಿಯು ಹೆಚ್ಚುತ್ತದೆ. ಅದೇ ವೇಳೆಗೆ ಆ ಪ್ಯಾಸಿಂಜರನ ಖರ್ಚು ಮಾಡುವ ಶಕ್ತಿಯು ೫ ರೂಪಾಯಿಗಳ ಮಟ್ಟಿಗೆ ಕಡಿಮೆಯಾಗುತ್ತದೆ.ಆದ್ದರಿಂದ ಕಪ್ಪು ಹಣವು ಉತ್ಪನ್ನದ ಹಂಚಿಕೆಯಲ್ಲಿ ಬದಲಾವಣೆಯನ್ನು ಮಾಡುತ್ತದೆ. ಕಪ್ಪು ಹಣವನ್ನು ಕೊಡುವವರಿಂದ ಸ್ವೀಕರಿಸುವವರಿಗೆ ಉತ್ಪನ್ನದ ವರ್ಗಾವಣೆಯಾಗುತ್ತದೆ. ಈ ಉತ್ಪನ್ನದ ವರ್ಗಾವಣೆಯಿಂದಾಗಿ ಒಟ್ಟು ವೆಚ್ಚದಲ್ಲಿ ಬದಲಾವಣೆಯಾಗುವ ಸಂಭವ ವಿರುತ್ತದೆ.

ಕಪ್ಪು ಹಣವು ಕಡಿಮೆ ಉತ್ಪನ್ನದ ಜನರಿಂದ ಹೆಚ್ಚಿಗೆ ಉತ್ಪನ್ನವಿದ್ದ ಜನರಿಗೆ ವರ್ಗಾವಣೆಯಾದಲ್ಲಿ ಜೀವನಾವಶ್ಯಕ ವಸ್ತುಗಳ ಬೇಡಿಕೆ ಕಡಿಮೆಯಾಗಿ ಸುಖೋಪಭೋಗಿ ವಸ್ತುಗಳ ಬೇಡಿಕೆ ಹೆಚ್ಚಾಗುತ್ತದೆ. ಆದರೆ ಕಪ್ಪುಹಣದ ವರ್ಗಾವಣೆಯು ಶ್ರೀಮಂತ ವರ್ಗದಿಂದ ಸಾಮಾನ್ಯ ವರ್ಗದ ಜನರಾದ ಕಾರಕೂನರು, ಕಂಡಕ್ಟರರು ಮುಂತಾದ ಜನರಿಗೆ ಆದರೆ ಜೀವನಾವಶ್ಯಕ ವಸ್ತುಗಳ ಬೇಡಿಕೆ ಹೆಚ್ಚಾಗುತ್ತದೆ,

ಜನಸಾಮಾನ್ಯರಿಗೆ ಕಪ್ಪು ಹಣ ಸಂದಾಯವಾದಾಗ ಅವರು ಅದನ್ನು ತೀವ್ರವಾಗಿ ಖರ್ಚುಮಾಡಿ ಬಿಡುತ್ತಾರೆ. ಆದರೆ ಹೆಚ್ಚಿಗೆ ಉತ್ಪನ್ನವಿದ್ದ ಜನರಿಗೆ ಕಪ್ಪು ಹಣ ಸಂದಾಯವಾದಾಗ ಅವರು ಅದನ್ನು ಹೇಗೆ ಖರ್ಚುಮಾಡುತ್ತಾರೆಂಬುದು ಅವರು ಯಾವ ವರ್ಗಕ್ಕೆ ಸೇರಿದ ಜನರೆಂಬುದನ್ನು ಅವಲಂಬಿಸಿರುತ್ತದೆ. ದೊಡ್ಡ ಪ್ರಮಾಣದಲ್ಲಿ ಕಪ್ಪು ಹಣವು ನೌಕರಿ ವರ್ಗದ ಜನರಿಗೆ ಸಿಕ್ಕಾಗ ಅವರು ಅದನ್ನು ಹಣರೂಪವಾಗಿ ಸಂಗ್ರಹಿಸಬಹುದು, ಬಂಗಾರ, ವಜ್ರ–ವೈಡೂರ್ಯಗಳ ರೂಪದಲ್ಲಿಯೂ ಸಂಗ್ರಹಿಸಿಡಬಹುದು. ಅಥವಾ ತಮ್ಮ ಅಂತಸ್ತನ್ನು ಮೆರೆಸಲು ಮದುವೆ ಮುಂಜಿವೆಗಳ ಮೂಲಕ ಆ ಹಣವನ್ನು ವೆಚ್ಚಮಾಡಬಹುದು. ಕೆಲವರು ಆಸ್ತಿ-ಪಾಸ್ತಿಗಳನ್ನು ಕೊಳ್ಳಬಹುದು, ಈ ಹಣವು ಜನಸಾಮಾನ್ಯರಿಂದ ಬಂದದ್ದಾಗಿದ್ದರೆ ಜೀವನಾವಶ್ಯಕ ವಸ್ತುಗಳ ಬೇಡಿಕೆ ಕಡಿಮೆಯಾಗಿ. ಸುಖೋಪಭೋಗಿ ವಸ್ತುಗಳ ಬೇಡಿಕೆ ಹೆಚ್ಚುತ್ತದೆ. ಆದರೆ ಇಂಥ ಹಣವು ಶ್ರೀಮಂತ ವರ್ಗದ ಜನರಿಂದಲೇ ಬಂದದ್ದಾಗಿದ್ದರೆ ಜನರ ವೆಚ್ಚಮಾಡುವ ರೀತಿಯಲ್ಲಿ ಯಾವ ಬದಲಾವಣೆಗಳೂ ಕಾಣುವದಿಲ್ಲ.

ಕಪ್ಪು ಹಣವು ವ್ಯಾಪಾರಸ್ಥರಿಗೆ ಹಾಗೂ ಉದ್ದಿಮೆದಾರರಿಗೆ ಸಂದಾಯವಾದರೆ ಅವರು ಅದನ್ನು ಹೇಗೆ ವೆಚ್ಚಮಾಡುತ್ತಾರೆಂಬುವನ್ನಷ್ಟು ನಾವು ಕಂಡುಕೊಳ್ಳುವಾ. ಕಪ್ಪು ಹಣದ ಕೆಲವೊಂದು ಭಾಗವನ್ನು ಇವರು ಸುಖೋಪಭೋಗಿ ವಸ್ತುಗಳ ಮೇಲೆ ವೆಚ್ಚಮಾಡಬಹುದು. ಆದರೆ ಉಳಿದ ಹಣವನ್ನು ಅವರು ಬಂಡವಾಳ ರೂಪವಾಗಿ ಚಿಕ್ಕ ಉದ್ದಿಮೆಗಳಲ್ಲಿ ಅಥವಾ ವ್ಯಾಪಾರದಲ್ಲಿ ತೊಡಗಿಸಬಹುದು. ಆದರೆ ಇಂಥ ಬಂಡವಾಳ ಜೋಡಣೆಯು ಒಳ್ಳೆಯದೆಂದು ಯಾರೂ ಭಾವಿಸಬಾರದು. ಬೇರೆ ಜನರು ಇದನ್ನು ಉದ್ದಿಮೆಗಳಲ್ಲಿ ತೊಡಗಿಸುವ ಬದಲು ಕಪ್ಪು ಹಣ ಗಳಿಸುವವರು ಅದನ್ನು ಜನರಿಂದ ಪಡೆದು ತಾವು ಇದನ್ನು ಉದ್ದಿಮೆಗಳಲ್ಲಿ ತೊಡಗಿಸಿ ಮತ್ತಷ್ಟು ಶ್ರೀಮಂತರಾಗುತ್ತಾರೆ.

ಆದ್ದರಿಂದ ಕಪ್ಪು ಹಣವು ಜನಸಾಮಾನ್ಯರಿಂದ ಹರಿದು ಹೋಗಿ ಶ್ರೀಮಂತ ವರ್ಗದ ಜನರ ಕೈಸೇರುತ್ತದೆ. ಇಂಥ ಕಪ್ಪು ಹಣದ ಕೆಲವೊಂದು ಭಾಗವನ್ನು ಅವರು ತಮ್ಮ ಸುಖಲೋಲುಪತೆಗಾಗಿ ವೆಚ್ಚಮಾಡಿ ಇನ್ನುಳಿದ ಭಾಗವನ್ನು ವ್ಯಾಪಾರ ಮತ್ತು ಉದ್ದಿಮೆಗಳಲ್ಲಿ ತೊಡಗಿಸುತ್ತಾರೆಂದು ಹೇಳಬಹುದು. ಆದ್ದರಿಂದ ಜನಸಾಮಾನ್ಯನ

ಪರಿಸ್ಥಿತಿ ಕೆಡುತ್ತಾ ಹೋಗುತ್ತದೆ ಮತ್ತು ಶ್ರೀಮಂತರ ಪರಿಸ್ಥಿತಿ ಸುಧಾರಿಸುತ್ತಾ ಹೋಗುತ್ತದೆ. ಕಪ್ಪು ಹಣವು ಬಡವ ಬಲ್ಲಿದರ ಅಂತರವನ್ನು ಇನ್ನೂ ಹೆಚ್ಚಿಸುತ್ತಾ ಹೋಗುತ್ತದೆ.

ಕಪ್ಪು ಹಣದಿಂದಾಗುವ ಪರಿಣಾಮಗಳನ್ನು ನಾವೀಗ ಕಂಡುಕೊಂಡಂತಾಯಿತು. ಇನ್ನು ಈ ಕಪ್ಪು ಹಣವನ್ನು ಹೇಗೆ ಕಡಿಮೆ ಮಾಡುವದು ಅಥವಾ ನಿರ್ಮೂಲನೆ ಮಾಡುವದೆಂಬುದನ್ನಷ್ಟು ನೋಡುವಾ. ಕಪ್ಪು ಹಣವನ್ನು ಹೊರಗೆ ತರಲು ಕೆಲ ಅರ್ಥಶಾಸ್ತ್ರಜ್ಞರು ಮತ್ತು ರಾಜಕಾರಣಿಗಳು ದೊಡ್ಡ ಮೊತ್ತದ ಕರೆನ್ಸಿ ನೋಟುಗಳನ್ನು ರದ್ದುಪಡಿಸಿ ಹೊಸ ಕರೆನ್ಸಿ ನೋಟುಗಳನ್ನು ಚಲಾವಣೆಯಲ್ಲಿ ತರಬೇಕೆಂದು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ನಮ್ಮ ದೇಶದಲ್ಲಿ ೧೯೭೮ನೆ ಜನೆವರಿ ೧೬ನೇ ತಾರೀಖಿನ ದಿವಸ ರಾಷ್ಟ್ರಪತಿಯವರ ಸುಗ್ರೀವಾಜ್ಞೆಯ ಪ್ರಕಾರ, ಸರಕಾರವು ೧೦೦೦, ಮತ್ತೂ ಅದಕ್ಕೂ ಹೆಚ್ಚಿನ ಬೆಲೆಯ ಕರೆನ್ಸಿ ನೋಟುಗಳನ್ನು ಚಲಾವಣೆಯಿಂದ ರದ್ದುಗೊಳಿಸಿತು. ಆದರೆ ದೊಡ್ಡ ಮೊತ್ತದ ಕರೆನ್ಸಿ ನೋಟುಗಳ ರದ್ದಾವಣೆಯಿಂದ ಕಪ್ಪು ಹಣದ ನಿರ್ಮೂಲನೆಯಾಗಲಾರದು. ಕಪ್ಪು ಹಣ ಗಳಿಸಿದ ಜನರು ಕೆಲವೊಂದು ಭಾಗವನ್ನು ದೊಡ್ಡ ಮೊತ್ತದ ಕರೆನ್ಸಿ ನೋಟುಗಳ ರೂಪದಲ್ಲಿ ಸಂಗ್ರಹಿಸಿಡಬಹುದು. ಅವರು ಕಪ್ಪು ಹಣವನ್ನು ಸಣ್ಣ ಮೊತ್ತದ ಕರೆನ್ಸಿ ನೋಟುಗಳಿಗೂ ಪರಿವರ್ತಿಸಬಹುದು. ಬೆಳ್ಳಿ, ಭಂಗಾರ ರೂಪವಾಗಿ ಸಂಗ್ರಹಿಸಿಡಬಹುದು, ವಜ್ರ, ವೈಡೂರ್ಯಗಳ ರೂಪದಲ್ಲಿಯೂ ಅವರು ಅದನ್ನು ಸಂಗ್ರಹಿಸಿಡಬಹುದು. ಆದ್ದರಿಂದ ಕೇವಲ ದೊಡ್ಡ ಮೊತ್ತದ ಕರೆನ್ಸಿ ನೋಟುಗಳ ರದ್ದಾವಣೆಯಿಂದ ಕಪ್ಪು ಹಣದ ನಿರ್ಮೂಲನೆಯಾಗಲಾರದು. ನಿಜವಾಗಿ ನೋಡಿದರೆ ಕಪ್ಪು ಹಣ ಸಂಗ್ರಹಿಸಿದ ಜನರು ಅದನ್ನು ಬೇರೆ ರೀತಿಯಾಗಿ ಪರಿವರ್ತಿಸಿ ಪಾರಾಗಿ ಬಿಡುತ್ತಾರೆ.

ಕರೆನ್ಸಿ ನೋಟುಗಳ ರದ್ದಾವಣೆಯು ಕಪ್ಪು ಹಣವನ್ನು ನಿರ್ಮೂಲನೆ ಮಾಡ ದಿದ್ದರೆ ಇನ್ನು ಬೇರೆ ಮಾರ್ಗಗಳಾವವೆಂಬುದನ್ನಷ್ಟು ನಾವು ನೋಡುವಾ. ಇಲ್ಲಿ ನಮಗೆ ಬೇರೆ ದೇಶಗಳ ಅನುಭವಗಳು ಮಾರ್ಗದರ್ಶಕಗಳಾಗಬಹುದು. ಫ್ರಾನ್ಸ ದೇಶದಲ್ಲಿ ಮೊದಲನೆ ಮಹಾಯುದ್ಧದ ನಂತರ ಕಪ್ಪು ಹಣದ ಪ್ರಭಾವ ವಿಪರೀತವಾಗಿ ಬೆಳೆದು ಬಿಟ್ಟಿತ್ತು. ಫ್ರಾನ್ಸ ದೇಶದ ಸರಕಾರವು ಕಪ್ಪು ಹಣದ ಪ್ರಭಾವ ಕಡಿಮೆಮಾಡಲು ಆದಾಯ ತೆರಿಗೆಗಳನ್ನು ಕಡಿಮೆ ಮಾಡಿತು. ಇದರಿಂದ ಕಪ್ಪು ಹಣದ ಪ್ರಭಾವ ಕಡಿಮೆ ಯಾಗಿ ಜನರು ಸರಿಯಾಗಿ ಸರಕಾರಕ್ಕೆ ತೆರಿಗೆ ಕೊಡಹತ್ತಿದರು.

ನಮ್ಮ ದೇಶದಲ್ಲಿಯೂ ಸಹಿತ ಕೇಂದ್ರ ಸರಕಾರವು ೧೯೭೬-೭೭ರ ಮುಂಗಡ ಪತ್ರ ದಲ್ಲಿ ಆದಾಯ ತೆರಿಗೆ, ಸಂಪತು ತೆರಿಗೆಗಳನ್ನು ಕಡಿಮೆ ಮಾಡಿದೆ. ಕೆಲವು ವರ್ಷಗಳ ಹಿಂದೆ ಆದಾಯ ಕರಗಳು ಹೆಚ್ಚಿಗಿದ್ದವು. ಕೆಲವೊಂದು ಉತ್ಪನ್ನದ ಮಟ್ಟದಲ್ಲಿ ಒಬ್ಬ ವ್ಯಕ್ತಿಯು

ತಾನು ಗಳಿಸುವ ಪ್ರತಿ ನೂರು ರೂಪಾಯಿಗಳಿಗೆ ೯೭.೫೦ ಪೈಸೆ ಆದಾಯ ತೆರಿಗೆಯೆಂದು ಕೊಡಬೇಕಾಗುತ್ತಿತ್ತು. ಈಗ ಆದಾಯ ತೆರಿಗೆಗಳ ಪ್ರಮಾಣದಲ್ಲಿ ಕಡಿಮೆಮಾಡಲಾಗಿದೆ. ಮೊದಲು ಆದಾಯ ತೆರಿಗೆಯ ವಿನಾಯತಿ ಮಟ್ಟವೂ ಕಡಿಮೆ ಇತ್ತು. ಅಂದರೆ ಒಬ್ಬ ವ್ಯಕ್ತಿ ಒಂದು ವರುಷಕ್ಕೆ ೬ ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಗಳಿಸಿದರೆ ಅವನು ಆದಾಯಕರವನ್ನು ಕೊಡಬೇಕಾಗುತ್ತಿತ್ತು. ಈಗ ಸರಕಾರವು ಆ ಮಟ್ಟವನ್ನು ಇನ್ನೂ ಹೆಚ್ಚಿಸಿದೆ. ಅಂದರೆ ಈಗ ಒಬ್ಬ ವ್ಯಕ್ತಿಯು ಒಂದು ವರ್ಷಕ್ಕೆ ೮ ಸಾವಿರ ರೂಪಾಯಿಗಳಿಗಿಂತ ಕಡಿಮೆಗಳಿಸಿದರೆ ಆದಾಯ ಕರವನ್ನು ಕೊಡಬೇಕಾಗಿಲ್ಲ. ಅದೇ ರೀತಿಯಾಗಿ ೧೯೭೫ರಲ್ಲಿ ಸರಕಾರವು ಕಪ್ಪು ಹಣವಿದ್ದ ವ್ಯಕ್ತಿಗಳಿಗೆ ಸ್ವಯಂ ಪ್ರೇರಣೆಯಿಂದ ಮುಂದೆ ಬಂದು ತಮ್ಮಲ್ಲಿಯ ಕಪ್ಪು ಹಣವೆಷ್ಟಿದೆಯೆಂಬುದನ್ನು ತಿಳಿಸಿ ಅದಕ್ಕೆ ಯೋಗ್ಯರೀತಿಯಲ್ಲಿ ತೆರಿಗೆಗಳನ್ನು ಕೊಟ್ಟು ಜನರು ಪ್ರಾಮಾಣಿಕರಾಗಿ ಬಾಳಲು ಅನುವು ಮಾಡಿಕೊಟ್ಟಿತು. ಎಷ್ಟೋ ಜನರು ಇವರ ಲಾಭ ಪಡೆದುಕೊಂಡರು. ಸರಕಾರಕ್ಕೆ ಇದರಿಂದ ತೆರಿಗೆಯ ರೂಪದಲ್ಲಿ ಆದಾಯಸಂದಾಯವಾಯಿತು, ಆದರೆ ಇದರಿಂದ ಕಪ್ಪು ಹಣದ ನಿರ್ಮೂಲನೆಯಾಗಿದೆಯೆಂದು ನಾವು ಭಾವಿಸಬಾರದು. ನಮ್ಮ ಸರಕಾರವು ಪಂಚವಾರ್ಷಿಕ ಯೋಜನೆಗಳ ಮೂಲಕ ದೇಶದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಕಳೆದ ೨೭ ವರುಷಗಳಿಂದ ಪ್ರಯತ್ನಮಾಡುತ್ತಿದೆ. ಇದಕ್ಕೆಲ್ಲ ಸರಕಾರಕ್ಕೆ ಹಣಬೇಕು. ಸರಕಾರಕ್ಕೆ ಬರುವ ಉತ್ಪನ್ನವೆಂದರೆ ಜನರಿಂದ ಬರುವ ತೆರಿಗೆಗಳು. ಜನರು ಹೆಚ್ಚು ಪ್ರಾಮಾಣಿಕರಾಗಿ ತೆರಿಗೆಗಳನ್ನು ಕೊಟ್ಟರೆ ಸರಕಾರದ ಉತ್ಪನ್ನ ಹೆಚ್ಚಿ ಇನ್ನೂ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸರಕಾರವು ತೆಗೆದುಕೊಂಡು ದೇಶದ ಅಭಿವೃದ್ಧಿಯನ್ನು ತ್ವರಿತ ಗತಿಯಲ್ಲಿ ಸಾಧಿಸಬಹುದು. ಅದ್ದರಿಂದ ಜನರು ಹೆಚ್ಚಿಗೆ ಪ್ರಾಮಾಣಿಕರಾಗುವದರಿಂದ ತಮ್ಮ ಅಭಿವೃದ್ಧಿಯನ್ನು ಸಾಧಿಸುತ್ತಾರೆ. ಬಡಜನರ ಕಲ್ಯಾಣವೂ ಇದರಿಂದಾಗುತ್ತದೆ. ತಮ್ಮ ದೇಶದ ಪ್ರತಿಯೊಬ್ಬ ಅಧಿಕಾರಿ, ವ್ಯಾಪಾರಿ, ಉದ್ದಿಮೆದಾರ ಪ್ರಾಮಾಣಿಕರಾಗಿ ನಡೆದುಕೊಂಡರೆ ದೇಶವು ಸುಖ–ಸಂಮೃದ್ಧಿಗಳಿಂದ ಮೆರೆಯುವದರಲ್ಲಿ ಯಾವ ಸಂದೇಹವೂ ಇಲ್ಲ.

ಗ್ರಂಥ ಋಣ

R. J. Ball : Inflation and the theory of money. George Allen & Unwin (2cd Edition) 1973.

D. R. Samant : Inflation and Economic Development Bombay, Populaer, 1974.

Gyam Chand : Menace of Inflation. Jaipur. Rawat Publications 1978.

ಲಕ್ಷ್ಮೇಶ್ವರ ದೇಸಾಯಿಯುವರಿಗೆ ಬರೆದುಕೊಟ್ಟ ಕ್ರಯಪತ್ರ

● **ಡಾ. ಕೆ. ಎನ್. ಚಿಟ್ನೀಸ**

ಪುಣೆಯಲ್ಲಿಯ ಭಾರತ ಇತಿಹಾಸ ಸಂಶೋಧಕ ಮಂಡಳದಲ್ಲಿ ಲಕ್ಷ್ಮೇಶ್ವರ ದೇಸಾಯರಿಗೆ ಸಂಬಂಧಿಸಿದ ಕಾಗದಪತ್ರಗಳ ಒಂದು ಗಂಟು ಇದೆ. ಇವಕ್ಕೆ ಮರಾಠಿಯಲ್ಲಿ 'ರುಮಾಲು' ಅನ್ನುತ್ತಾರೆ. ಇದರಂತೆಯೇ ಬೇರೆ ಬೇರೆ ಸರದಾರರಿಗೆ ಸಂಬಂಧಿಸಿದ ಎಷ್ಟೋ ರುಮಾಲುಗಳು ಇಲ್ಲಿವೆ. ಲಕ್ಷ್ಮೇಶ್ವರ ದೇಸಾಯರಿಗೆ ಸಂಬಂಧಿಸಿದ ಮಹತ್ವದ ಕಾಗದಪತ್ರಗಳನ್ನು ಪರೀಕ್ಷಿಸಿ ಅವುಗಳ ಪ್ರತಿಯನ್ನು ನಾನು ಬರೆದುಕೊಂಡಿದ್ದೇನೆ. ಇವೆಲ್ಲ ಕಾಗದಗಳು ಆಗಿನ ಕನ್ನಡ ಭಾಷೆಯಲ್ಲಿದ್ದು ಕನ್ನಡ ಲಿಪಿಯಲ್ಲಿಯೇ ಬರೆಯಲ್ಪಟ್ಟಿವೆ. ಕ್ರಯವಿಕ್ರಯ. ತೆರಿಗೆ ಮುಂತಾದವುಗಳಿಗೆ ಸಂಬಂಧಿಸಿದ ಭಾಷೆಯಲ್ಲಿ ಎಷ್ಟೋ ಮರಾಠಿ ಶಬ್ದಗಳೂ ಬಂದಿವೆ. ಯಾಕೆಂದರೆ ಉತ್ತರ ಕರ್ನಾಟಕದ ಸಂಬಂಧವು ಪೇಶವೆಯವರ ಜೊತೆಗೆ ಬಂದಿತು. ಅದರಂತೆಯೇ ಲಿಪಿಯು ಕನ್ನಡವಲ್ಲಿದ್ದರೂ ಬರೆಯುವ ಪದ್ಧತಿಯು ಮರಾಠಿ ಕಾಗದಪತ್ರಗಳಂತೆ ಇದೆ.

ಪ್ರಾರಂಭದಲ್ಲಿ ಲಕ್ಷ್ಮೇಶ್ವರ ದೇಸಾಯರು ವಿಜಾಪುರದ ಆದಿಲಶಹಾನ ಮಾಂಡಲಿಕರಿದ್ದರು. ಅವರು ಬಂಕಾಪುರ 'ಮಾಮಲೆ'ಯಲ್ಲಿಯ ಲಕ್ಷ್ಮೇಶ್ವರ 'ಪರಗಣೆ'ಯ ದೇಸಾಯರಿದ್ದರು. ನಂತರ ಕ್ರಮಕ್ರಮವಾಗಿ ಕೊಪ್ಪಳ ಕಿಲ್ಲೆ, ಯಲಬುರ್ಗಿ ಪರಗಣೆ ಹಾಗೂ ರಾಯರಹುಬಳಿ ಪರಗಣೆ ಇವುಗಳ ನಾಡಗೌಡಿಕೆಯನ್ನೂ. ಧಾರವಾಡ ಪರಗಣೆಯ ರಸನಾಡಗೌಡಿಕೆಯನ್ನೂ. ಕರಡಗಿ ಕಮತರಣೆ 'ಸಮ್ಮತ'ದ ಸರಮೊಕದ್ದಮಿಯನ್ನೂ, ತೊರಗಲ್ಲ ಸರಕಾರದಲ್ಲಿಯ ಬಾದಾಮಿ ಕಿಲ್ಲೆಯ ಕೆಳಗೆ ಇದ್ದ ಬೆನಾಪುರ ಊರಿನಪಾಟೀಲಕಿ–ಕುಲಕರಣಿಕೆಗಳನ್ನೂ. ಸಿರಗುಪ್ಪೆ ಊರಿನ ಪಾಟೀಲಕಿಯನ್ನೂ ಅವರು ಪಡೆದುಕೊಂಡರು.

ಲಕ್ಷ್ಮೇಶ್ವರ ದೇಸಾಯರು ಧಾರವಾಡ ಜಿಲ್ಹೆಯಲ್ಲಿ ೧೬ನೆಯ ಶತಮಾನದಿಂದ ೧೮ನೆಯ ಶತಮಾನದವರೆಗೆ ದೇಶಮುಖಿಯನ್ನು ಮಾಡುತ್ತಿದ್ದರು. ವೀರಣಗೌಡ ದೇವಣಗೌಡ ದೇಸಾಯಿ ಇವನು ಲಕ್ಷ್ಮೇಶ್ವರ ದೇಸಾಯರ ಮೂಲಪುರುಷನು. ಇವನು ಕ್ರಿ. ಶ. ೧೫೭೯–೮೦ರಲ್ಲಿ ದೇಶಮುಖಿಯನ್ನು ಮಾಡುತ್ತಿದ್ದನೆಂದು ತೋರುತ್ತದೆ. ಈ ವಂಶದಲ್ಲಿ ಒಟ್ಟು ೧೨ ಜನ ಆಳಿದರು. ಕೊನೆಯ ದೇಸಾಯಿ ೬ನೆಯ ಕೆಂಚಣಗೌಡ ಕ್ರಿ. ಶ. ೧೭೬೦ರ ವರೆಗೆ ರಾಜ್ಯಭಾರ ಮಾಡಿದನು.*

ಈಗ ಭಾರತ ಇತಿಹಾಸ ಸಂಶೋಧಕ ಮಂಡಳದಲ್ಲಿಯ ೨೦೪೪ ಲ.ದೇ. ಈ ಕ್ರಮಾಂಕದ ರುಮಾಲಿನಲ್ಲಿಯ ಒಂದು ಕ್ರಯಪತ್ರದ ಬಗ್ಗೆ ಇಲ್ಲಿ ವಿವೇಚನೆಯನ್ನು ಮಾಡಲಾಗಿದೆ. ಈ ಕ್ರಯಪತ್ರವನ್ನು ಕ್ರಿ. ಶ. ೧೭೧೦ನೆಯ ಎಪ್ರಿಲ ೧೨ನೇ ದಿನಾಂಕಕ್ಕೆ ಕದಡಿ ಕರಿ ಸೋಮಣಗೌಡನ ಭರಮಣಗೌಡನ ಮಗ ದೇಮಣಗೌಡನು ಲಕ್ಷ್ಮೇಶ್ವರ ದೇಸಾಯಿ ೫ನೇಯ ಕೆಂಚಣಗೌಡನಿಗೆ ಬರೆದುಕೊಟ್ಟನು. ಈ ಕೆಂಚಣಗೌಡನು ಕ್ರಿ. ಶ. ೧೭೦೧ರಿಂದ ೧೭೧೯ರ ವರೆಗೆ ರಾಜ್ಯಭಾರಮಾಡಿದನು. ಈ ಕ್ರಯಪತ್ರದಲ್ಲಿ ಲಕ್ಷ್ಮೇಶ್ವರಕ್ಕೆ ಲಕ್ಷ್ಮಣೇಶ್ವರ ಎಂದಿದ್ದು ಈಗಿನ ಆ ಊರಿನ ಹೆಸರು ಲಕ್ಷ್ಮಣೇಶ್ವರದ ಅಪಭ್ರಂಶವಿರ ಬಹುದೆಂದು ತೋರುತ್ತದೆ. ಕ್ರಯಪತ್ರದಲ್ಲಿ ಶಾಲಿವಾಹನ ಶಕ ವರ್ಷ ೧೬೩೨ ವಿಕೃತ ನಾಮ ಸಂವತ್ಸರದ ಚೈತ್ರ ವದ್ಯ ೧೦ನೆಯ ದಿನ ದೇಮಣನು ತನ್ನ ಆಸ್ತಿಯ ¼ಭಾಗ ವನ್ನು ಕೆಂಚಣಗೌಡನಿಗೆ ಮಾರಿದನೆಂದು ಹೇಳಲಾಗಿದೆ. ಆಗ್ಗೆ ಕೆಂಚಣಗೌಡನ ಪರಗಣೆ ಲಕ್ಷ್ಮೇಶ್ವರ ಸೀಮೆಯ ದೇಸಾಯಿಯಲ್ಲದೆ ಕೊಪ್ಪಳ ಕಿಲ್ಲೆ ಸೀಮೆ ಮತ್ತು ಪರಗಣೆ ರಾಯರಹುಬಳಿ ಸೀಮೆಯ ನಾಡಗೌಡನೂ ಇದ್ದನು.

ಗೌಡಿಕೆಯ ¼ಭಾಗದ ಕ್ರಯದ ವಿವರಗಳು ಕೆಳಗಿನಂತಿವೆ. ಕದಡಿ ಗೌಡಿಕೆಯ ಒಟ್ಟು ಆಸ್ತಿಯ ಅರ್ಧಭಾಗವನ್ನು ದೇವರ ಗೌಡಿಕೆಯೆಂದು ತೆಗೆದಿಟ್ಟು ಉಳಿದ ಅರ್ಧದಲ್ಲಿ ದೇಮಣ, ಲಿಂಗಣಗೌಡ ಹಾಗೂ ಕೆಂಬಾವಿಗೌಡ ಈ ಮೂವರು ಹಕ್ಕುದಾರರಲ್ಲಿ ಪಾಲು ಮಾಡಲಾಯಿತು.ಕ್ರಯಪತ್ರದಲ್ಲಿ ಲಿಂಗಣಗೌಡ ಮತ್ತುಕೆಂಬಾವಿಗೌಡ ಇವರಿಗೆ ದೇಮಣನ 'ಅಣ್ಣ ತಮ್ಮ' ಎಂದು ಕರೆಯಲಾಗಿದೆ. ಇವರ ಪಾಲಿನ ಗೌಡಿಕೆಯ ಭೂಮಿಯು ೨೯¼ ಮಾರು ಇದ್ದು ಅದರಲ್ಲಿ ಜೂಡಿಮಾನ್ಯ ಹಾಗೂ ಸತಿಮಾನ್ಯ ಕೂಡಿ ೨೭ ಮಾರು ಮತ್ತು ಸರ್ವಮಾನ್ಯ ೨¼ ಮಾರು ಇದ್ದವು. ಈ ೨೯¼ ಮಾರು ಹೊಲವು ಮೂರು ಹಕ್ಕದಾರರಲ್ಲಿ ಕೆಳಗಿನಂತೆ ವಿಭಾಗಿಸಲ್ಪಟ್ಟಿತ್ತು.

(ಅ) ೧೩–ಮಾರು ಭರಮಣಗೌಡನ ಮಗ ಲಿಂಗಣಗೌಡನಿಗೆ (೧೨ ಮಾರು–ಜೂಡಿತೆರಮಮಾನ್ಯ + ೧ ಮಾರು ಸರ್ವಮಾನ್ಯ).

---

* ಲಕ್ಷ್ಮೇಶ್ವರ ದೇಸಾಯರ ಹೆಸರುಗಳನ್ನು ಪರಿಶಿಷ್ಟದಲ್ಲಿ ನೋಡಬಹುದು.

(ಬ) ೮¾ ಮಾರು–ಚಿಕಣಗೌಡನ ಮೊಮ್ಮಗ ಕೆಂಬಾಪಿಗೌಡನಿಗೆ (೭⅞ ಮಾರು ಜೂಡಿ ತೆರುವಮಾನ್ಯ + ⅜ ಮಾರು ಸರ್ವಮಾನ್ಯ). ೮⅞ ಮಾರು–ಭರಮಣಗೌಡನ ಮಗ ದೇವಣಗೌಡನಿಗೆ(೭⅞ ಮಾರು ಜೂಡಿತೆರುವಮಾನ್ಯ + ⅜ ಮಾರು ಸರ್ವಮಾನ್ಯ.

ದೇವಣಗೌಡನು ತನ್ನ ಪಾಲಿಗೆ ಬಂದ ೮¾ ಮಾರು ಹೊಲದ ¼ ಭಾಗ ಅಂದರೆ ೨⁵⁄₁₆ ಮಾರು ಹೊಲವನ್ನೂ ಹಾಗೂ ಗೌಡಿಕೆಯ ಜೊತೆಗೆ ಬಂದ ಲಾಯವರ್ತನೆ ಮುಂತಾದ ಹಕ್ಕುಗಳ ¼ ಭಾಗವನ್ನೂ ಕೆಂಚಣಗೌಡನಿಗೆ ೫೦ ವರಹಕ್ಕೆ ಮಾರಿದನು. ಈ ಕ್ರಯಪತ್ರದ ಮೇಲೆ ಕೆಲವು ಸಾಕ್ಷೀದಾರರು ಸಹಿ ಮಾಡಿದ್ದಾರೆ.

ಈ ಕ್ರಯಪತ್ರದೊಳಗೆ ಕೆಲವು ಗಮನಾರ್ಹ ಸಂಗತಿಗಳಿವೆ. ಗೌಡಿಕೆಯಲ್ಲಿ ಹೊಲದ ಜೊತೆಗೆ ಕೆಲವು ಹಕ್ಕುಗಳೂ ಇರುತ್ತಿದ್ದವು. ಈ ಹಕ್ಕುಗಳನ್ನೂ ಇಲ್ಲವೆ ಅವುಗಳ ಕೆಲವು ಭಾಗಗಳನ್ನೂ ಮಾರಲಿಕ್ಕೆ ಬರುತ್ತಿತ್ತು. ಇಲ್ಲಿ ನಮೂದಿಸಿದ ಹಕ್ಕುಗಳು ಯಾವವೆಂದರೆ ಲಾಯವರ್ತನೆ, ತಯಿನಾತು. ತಶ್ರೀಫು. ಮೂಲವೀಸ. ಗೌಡಗಾಸು. ಕಾರಕ, ಕಂಠವಣ, ಹಡದಿ, ಹಾಸಿಕೆ. ಪಸಿಗೆ, ಪಳಿಗೆ. ಹೊಲೆಆಳು. ಇವುಗಳಲ್ಲಿ ಕೆಲವು ಕನ್ನಡ ಹೆಸರುಗಳೂ ಕೆಲವು ಮರಾಠಿ ಹೆಸರುಗಳೂ ಮತ್ತು ಕೆಲವು ಫಾರಸೀ ಹೆಸರುಗಳೂ ಇರುತ್ತವೆ. . ಲಾಯವರ್ತನೆ, ಮೂಲವೀಸ. ಗೌಡಗಾಸು. ಕಾರಕ. ಕಂಠವಣ. ಹಡದಿ, ಹಾಸಿಕೆ, ಹೊಲೆಆಳು ಇವು ಕನ್ನಡ ಶಬ್ದಗಳು. ಪಸಿಗೆ. ಪಳಿಗೆ. ಇವು ಬಹುಶಃ ಮರಾಠಿ ಶಬ್ದಗಳು·, ತಯಿನಾತು. ತಶ್ರೀಫು ಇವು ಫಾರಸೀ ಶಬ್ದಗಳು. ಕರ್ನಾಟಕದ ಈ ಭಾಗವು ಮೊಗಲರ ಹಾಗೂ ಮರಾಠರ ಸಂಬಂಧದಲ್ಲಿ ಬಂದಿದ್ದರಿಂದ ಫಾರಸೀ ಹಾಗೂ ಮರಾಠಿ ವರ್ಚಸ್ಸು ಕಂಡುಬರುತ್ತದೆ. ಲಾಯವರ್ತನೆಯೆಂದರೆ ಗೌಡನ ಕುದುರೆ ಲಾಯದ ಸಲುವಾಗಿ ಗ್ರಾಮಸ್ಥರು ಅವನಿಗೆ ತಮ್ಮ ಉತ್ಪನ್ನದೊಳಗಿಂದ ಕೊಡುವ ಅಲ್ಪಭಾಗವು. ಮಾಲಿನ ಬೆಲೆಯ ೧⁄₁₆ನೆಯ ಭಾಗವೆಂದರೆ ಮೂಲವೀಸ. ಕಾರಕವೆಂದರೆ ವ್ಯಾಪಾರ ಸುಂಕ. ಕಂಠವಣವೆಂದರೆ ಶಾನುಭೋಗನಿಗಾಗಿ ಇಲ್ಲವೆ ಬರೆಹಗಾರನಿಗಾಗಿ ಕೊಡುವ ಸುಂಕ.* ಹಡದಿಯೆಂದರೆ ಅಗಸನ ಸುಂಕ. ಹೊಲೆ ಆಳಿನ ಸಲುವಾಗಿ ಗ್ರಾಮಸ್ಥರು ಕೊಡುವ ಸುಂಕದಿಂದ ಹೊಲೆ ಆಳನ್ನು ಇಡಲಾಗುತ್ತಿತ್ತು. ಗೌಡಗಾಸು ಇದರ ಅರ್ಥವು ಸ್ಪಷ್ಟವಿದೆ. ಗೌಡನಿಗೆ ಗ್ರಾಮಸ್ಥರು ಕೊಡುವ ಹಣ ಎಂದು ಹೇಳಬಹುದು. 'ಹಾಸಿಕೆ' ಎಂದರೆ 'ಹಸುಗೆ'ಯ ಇನ್ನೊಂದು ರೂಪವಿರಬಹುದು. ಹಸುಗೆಯೆಂದರೆ ಧಾನ್ಯದ ಕೆಲವು ನಿಶ್ಚಿತ ಭಾಗ. ಪಸಿಕೆ ಮತ್ತು ಪಳಿಗೆ ಇವು ಮರಾಠಿ ಶಬ್ದಗಳೋ ಇಲ್ಲವೆ ಕನ್ನಡ ಶಬ್ದಗಳೋ ಎಂಬುದನ್ನು ನಿಶ್ಚಿತ ಹೇಳಲು ಕಠಿಣವಿದೆ.

· ಈ ಶಬ್ದಗಳು ೧೨ನೇ ಶತಮಾನದ ಕನ್ನಡ ಶಾಸನಗಳಲ್ಲಿ ಉಕ್ತವಾಗಿದ್ದು ಅವು ಕನ್ನಡದ ಪದಗಳೆಂದು ಕರ್ನಾಟಕ ವಿಶ್ವವಿದ್ಯಾಲಯದ ಡಾ. ರಿತ್ತಿ ಅವರು ತಿಳಿಸುತ್ತಾರೆ.

*Wilson's Glossary ಯಲ್ಲಿ ಇದಕ್ಕೆ ಇನ್ನೊಂದು ಅರ್ಥವನ್ನು ಹಚ್ಚಿದ್ದಾರೆ. ಇಲ್ಲಿ 'ಕಂಟವಣ'ವೆಂದರೆ, a tax on looms, a fee levied by the head village officers from the money changers of the village ಎಂದು ಬರೆದಿದ್ದಾರೆ.

ಮರಾಠಿಯಲ್ಲಿ 'ಘಸಕೀ' ಎಂಬ ಶಬ್ದವಿದ್ದು ಅದರ ಅರ್ಥವು "ಕೈತುಂಬ ಬರುವಷ್ಟು ಧಾನ್ಯ" ಎಂದಾಗುವದು. ಧಾನ್ಯದ ಪ್ರತಿಯೊಂದು ಮಾಪಿ (measure)ನಲ್ಲಿ ಒಂದು ಕೈಗೆ (ಮುಷ್ಟಿಯಲ್ಲಿ) ಬರುವಷ್ಟು ಧಾನ್ಯ ಗೌಡನಿಗೆ ಕೊಡಬೇಕಾದುದು ಎಂದು ಅರ್ಥವನ್ನು ಮಾಡಬಹುದು. ಆದರೆ 'ಪಸಿಕೆ' ಅಥವಾ 'ಪಸಿಗೆ' ಈ ಶಬ್ದವು ಕನ್ನಡದಲ್ಲಿಯೂ ಇದ್ದು ಅದರ ಅರ್ಥವು "ಸುಂಕವನ್ನು ತೆಗೆದುಕೊಳ್ಳಲು ಬರುವ ಸರಕಾರೀ ಅಧಿಕಾರಿಗಳಿಗೆ ಕೊಡುವ ಹಣ ಅಥವಾ ಲಂಚ" ಎಂದು Wilson's Glossary ಯಲ್ಲಿ ಹೇಳಲಾಗಿದೆ. ಆದರೆ ಕಿಟ್ಟೆಲ್‌ರ ನಿಘಂಟಿನಲ್ಲಿ (ಧಾನ್ಯದ) ಒಂದು ಭಾಗವೆಂದು ಅರ್ಥವನ್ನು ಹಚ್ಚಲಾಗಿದೆ. 'ಪಳಿಗೆ'ಯು ಬಹುಶಃ ಮರಾಠಿ ಶಬ್ದವಿದ್ದು ಎಣ್ಣೆಯ ಪ್ರತಿಯೊಂದು ಮಾಪಿನ ಒಂದು ಸೌಟಿನಷ್ಟು ಭಾಗ ಎಂದು ಇದರ ಅರ್ಥ ಮಾಡಬಹುದು. ತಯಿನಾತು ಮೂಲತಃ ಫಾರಸೀ ಶಬ್ದವಿದ್ದರೂ ಅದು ಮರಾಠಿ ಕಾಗದ ಪತ್ರಗಳಲ್ಲಿ 'ಸೈನ್ಯಕ್ಕಾಗಿ ಸಂಬಳ' ಎಂಬರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ. ಇಲ್ಲಿ ಗೌಡನಿಗೆ ಕಾವಲುಗಾರರನ್ನು ಇಡಲು ಗ್ರಾಮಸ್ಥರು ಕೊಡುವ ಹಣ ಎಂದು ತಿಳಿಯಬಹುದು. Wilson's Glossary ಯಲ್ಲಿ ತಶ್ರೀಫ ಎಂದರೆ "in the south of India, complimentary present made by the cultivators to the native revenue officers at the time of fixing the annual assessment" ಎಂದು ಅರ್ಥವನ್ನು ಕೊಟ್ಟಿದ್ದಾರೆ. ಇದಲ್ಲದೆ ಮಾನಮರ್ಯಾದೆಯನ್ನು ತೋರಿಸುವ ಸಲುವಾಗಿ ಕೊಡುವ ಕಾಣಿಕೆಯೆಂದೂ ಇದರ ಅರ್ಥಮಾಡಬಹುದು.

ಈ ಕ್ರಯಪತ್ರದಲ್ಲಿ ಭೂಮಿಯ ವಿಶಿಷ್ಟ ಅಳತೆಗೆ 'ಮಾರು' ಎಂಬ ಶಬ್ದವನ್ನು ಉಪಯೋಗಿಸಿದ್ದಾರೆ. ಒಂದು 'ಮಾರಿ'ನಲ್ಲಿ ೮ 'ಬೇಳೆ'ಗಳೂ, ಒಂದು 'ಬೇಳೆ'ಯಲ್ಲಿ ೨ 'ವೀಸ'ಗಳೂ ಹಾಗೂ ಒಂದು 'ವೀಸ'ದಲ್ಲಿ ೨ ಅರೆವೀಸಗಳೂ ಇದ್ದವು. ಈ ಎಲ್ಲ ಭಾಗಗಳು ಕ್ರಯಪತ್ರದಲ್ಲಿ ಬರುತ್ತವೆ. ಇವೇ ಶಬ್ದಗಳನ್ನು ಕೆಲವು ಸೀಮೆಗಳಲ್ಲಿ ಹಣದ ಭಾಗಗಳಿಗೂ ಉಪಯೋಗಿಸುತ್ತಿದ್ದರು. ವರಹದ ಹತ್ತನೇ ಭಾಗಕ್ಕೆ ಹಣವೆಂದೂ, ಹಣದ ಎಂಟನೇ ಭಾಗಕ್ಕೆ ಬೇಳೆಯೆಂದೂ, ಹಣದ ಹದಿನಾರನೇ ಮತ್ತು ಮೂವತ್ತೆರಡನೆಯ ಭಾಗಗಳಿಗೆ ಅನುಕ್ರಮವಾಗಿ ವೀಸ, ಅರೆವೀಸಗಳೆಂದೂ ಹೆಸರುಗಳಿದ್ದವು.

ಗೌಡಿಕೆಯಲ್ಲಿದ್ದ ಹೊಲಗಳು ಜೋಡಿಮಾನ್ಯ, ಸತಿಗೆಮಾನ್ಯ ಮತ್ತು ಸರ್ವಮಾನ್ಯ ಎಂದು ಮೂರು ಪ್ರಕಾರದ್ದು ಇದ್ದವೆಂದು ಈ ಕ್ರಯಪತ್ರದಿಂದ ತಿಳಿಯುತ್ತದೆ. ಜೋಡಿಮಾನ್ಯವೆಂದರೆ ಜಿಲ್ಲೆಯ ಅಧಿಕಾರಿಗಳಿಂದ ತೆಗೆದುಕೊಳ್ಳುವ ಒಂದು ಪ್ರಕಾರದ ವೈಯಕ್ತಿಕ ಕರ. ಇದು ಸಾಧಾರಣವಾಗಿ ಅಲ್ಪ ಪ್ರಮಾಣದಲ್ಲಿ ಇರುತ್ತಿತ್ತು. ಸತಿಗೆಮಾನ್ಯ ಈ ಶಬ್ದದ ಅರ್ಥವನ್ನು ಹಚ್ಚುವದು ಕೊಂಚ ಕಠಿಣವಿದೆ. ಇದೂ ಸಹ ಗ್ರಾಮದ ಇಲ್ಲವೆ ಸೀಮೆಯ ಅಧಿಕಾರಿಗಳು ಕೊಡುವ ಒಂದು ಪ್ರಕಾರದ ಅಲ್ಪ ಕರ ಎಂದು ಹೇಳಬಹುದು. ಆದರೆ 'ಸತಿಗೆ' ಎಂದರೇನು? ಎಂಬ ಪ್ರಶ್ನೆಯು ಉಳಿಯುವದು. ಈ

ಹಣವನ್ನು 'ಸತಿ'ಯ ಸಲುವಾಗಿ ಉಪಯೋಗಿಸುತ್ತಿದ್ದರೇನು? ಅಂದರೆ ಯಾವ ಪ್ರಕಾರ ಉಪಯೋಗಿಸುತ್ತಿದ್ದರು? ಇದಕ್ಕೆ ಸಮಾಧಾನಕಾರಕ ಉತ್ತರ ಸಿಗುವದು ಕಠಿಣ. ಹಾಗಾದರೆ ಇದರ ಅರ್ಥವು ಬೇರೆ ಇರಬಹುದೇ? Wilson's Glossary ಯಲ್ಲಿ 'ಸತ್ತ' ಎಂದರೆ "An engagement to supply articles or grain, etc., on consideration of specified advances" ಎಂದು ಅರ್ಥವನ್ನು ಹೇಳಲಾಗಿದೆ. ಈ ಕ್ರಯಪತ್ರದಲ್ಲಿ ಈ ಮಾನ್ಯಕ್ಕೆ ಸತ್ತಿಗೆಮಾನ್ಯವೆಂದು ಬರೆದಿದೆ. ಅಂದರೆ ಯಾವ ಹೊಲಕ್ಕೆ ಒಂದು ಪ್ರಕಾರದ 'ವ್ಯಾಪಾರೀ ಕರ'ವನ್ನು ಕೊಡಬೇಕಾಗುತ್ತಿದೆಯೋ ಆ ಹೊಲ ಅಂದರೆ ಸತ್ತಿಗೆಮಾನ್ಯ ಎಂದು ತಿಳಿಯಬಹುದೋ? ಕಿಟ್ಟೆಲ್‌ರ ನಿಘಂಟಿನಲ್ಲಿಯೂ ಸಮಾಧಾನಕಾರಕ ಉತ್ತರ ಸಿಗುವದಿಲ್ಲ. ಆದ್ದರಿಂದ ಈ ಮಾನ್ಯದ ಬಗ್ಗೆ ಖಚಿತವಾಗಿ ಏನೂ ಹೇಳಲು ಬರುವದಿಲ್ಲ.* ಸರ್ವಸಾಮಾನ್ಯವೆಂದರೆ ಈ ಭೂಮಿಯ ಮೇಲೆ ಯಾವ ಪ್ರಕಾರದ ಕರವನ್ನೂ ತೆಗೆದುಕೊಳ್ಳುತ್ತಿದ್ದಿಲ್ಲ. ಇದು ಸಂಪೂರ್ಣ ಕರಮುಕ್ತ ವಿರುತ್ತಿತ್ತು.

ಪರಿಶಿಷ್ಟ

ಲಕ್ಷ್ಮೇಶ್ವರ ದೇಸಾಯರು ಹಾಗೂ ಅವರು ಆಳಿದ ಕಾಲವು[೧]

೧.	ವೀರಣಗೌಡ ದೇವಣಗೌಡ ದೇಸಾಯಿ	೧೫೭೯–೮೦
೨.	೧ನೆಯ ಕೆಂಚಣಗೌಡ[೨]	...
೩.	೧ನೆಯ ಖಾನಗೌಡ	೧೬೨೨–೩೪
೪.	೨ನೆಯ ಕೆಂಚಣಗೌಡ	೧೬೩೪–
೫.	೨ನೆಯ ಖಾನಗೌಡ	೧೬೪೧–೪೪
೬.	೩ನೆಯ ಕೆಂಚಣಗೌಡ	೧೬೪೯–೭೩
೭.	೩ನೆಯ ಖಾನಗೌಡ	೧೬೭೫–
೮.	೪ನೆಯ ಕೆಂಚಣಗೌಡ	೧೬೭೭–೮೫
೯.	೪ನೆಯ ಖಾನಗೌಡ	೧೬೮೬–೯೬
೧೦.	೫ನೆಯ ಕೆಂಚಣಗೌಡ	೧೭೦೧–೧೯
೧೧.	೫ನೆಯ ಖಾನಗೌಡ	೧೭೨೭–
೧೨.	೬ನೆಯ ಕೆಂಚಣಗೌಡ	೧೭೩೯–೪೦

*ಸತ್ತಿಗೆ ಇದು ಛತ್ರದ ತದ್ಭವ ರೂಪ. ಛತ್ರ, ಅಧಿಕಾರದ ಪ್ರತೀಕ. ಸತ್ತಿಗೆ ಮಾನ್ಯ ಅಂದರೆ ಸರಕಾರಕ್ಕೆ ಕೊಡಬೇಕಾಗಿದ್ದ ಕರದಿಂದ ಮುಕ್ತವಾದ ಭೂಮಿಯಿರಬಹುದು ಎಂದು ಡಾ. ರಿತ್ತಿಯವರು ಅಭಿಪ್ರಾಯಪಡುತ್ತಾರೆ.

೧. ಲಕ್ಷ್ಮೇಶ್ವರ ದೇಸಾಯರ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಶ್ರೀ ಗ. ಹ. ಖರೆಯವರಿಗೆ ಅರ್ಪಿಸಿದ ಗೌರವಗ್ರಂಥದಲ್ಲಿಯ ಇದೇ ಲೇಖಕನ ಲಕ್ಷ್ಮೇಶ್ವರ ದೇಸಾಯರ ಮೇಲಿನ ಲೇಖನವನ್ನು ನೋಡಬಹುದು.

೨. ೧ನೆಯ ಕೆಂಚಣಗೌಡ, ೨ನೆಯ ಕೆಂಚಣಗೌಡ, ೩ನೆಯ ಖಾನಗೌಡ ಹಾಗೂ ೫ನೆಯ ಖಾನಗೌಡ ಇವರು ಆಳಿದ ಕಾಲವು ನಿಶ್ಚಿತ ತಿಳಿದು ಬಂದಿಲ್ಲ. ೧ನೆಯ ಕೆಂಚಣಗೌಡನ ಆಳಿಕೆಯ ಕಾಲದ ಬಗ್ಗೆ ಏನೂ ತಿಳಿಯುವದಿಲ್ಲ. ಆದರೆ ೧ನೆಯ ಖಾನಗೌಡನಕಿಂತ ಮುಂಚೆ ಅವನು ಆಳಿದವನೆಂದು ತಿಳಿಯಲು ಆಧಾರಗಳವೆ. ೨ನೆಯ ಕೆಂಚಣಗೌಡ, ೩ನೆಯ ಖಾನಗೌಡ ಮತ್ತು ೫ನೆಯ ಖಾನಗೌಡ ಇವರ ಆಳಿಕೆಯ ಕಾಲದ ಪ್ರಾರಂಭದ ವರ್ಷಗಳು ಮಾತ್ರ ತಿಳಿದಿವೆ. ಅವರ ಆಳಿಕೆಯ ಕೊನೆಯನ್ನು ನಿಶ್ಚಯಿಸಲು ಇನ್ನೂವರೆಗೂ ಆಧಾರಗಳು ಸಿಕ್ಕಿಲ್ಲ.

ಲಕ್ಷ್ಮೇಶ್ವರ ದೇಸಾಯಿಯವರಿಗೆ ಬರೆದುಕೊಟ್ಟ ಕ್ರಯಪತ್ರ

(ಭಾರತ ಇತಿಹಾಸ ಸಂಶೋಧಕ ಮಂಡಳ, ಪುಣೆಯಲ್ಲಿಯ ೩೦೪ ಲ. ದೇ. ಎಂಬ ಕ್ರಮಾಂಕದ ಕ್ರಿ. ಶ. ೧೭೭೦, ಎಪ್ರಿಲ ೧೨ನೆ ದಿನಾಂಕದ ಕ್ರಯ ಪತ್ರವು)

೦॥ ರಾಜ್ಯ ಶ್ರಿ ಪ॥ ಲಕ್ಷಮಣೆಸ್ವರದ
ಸಿಮೆದೆಶಾಯಿ ವಾಕಿಲ್ಲೆ ಕೊಪಳ
ದ ಸಿಮೆ ವಾ ಪ॥ ರಾಯರ ಹುಬಳಿ
ಸಿಮೆ ನಾಡಗೌಡರಾದ ಕೆಂಚಣ
ಗೌಡರ ಪಾದಕ್ಕೆ
೦॥ ಸ್ವಸ್ತಿ ಶ್ರಿ ಜ್ಯಯಾಭ್ಯುದಯಾನ್ರುಪಶಾಲಿ
ವಾಹನಶಖವರುಶ ೧೬೩೨ನೆ ವಿಕ್ರುತು
ನಾಮ ಸಂ। ರದಚ್ಯಯಿತ್ರ ಬ ೧೦ ಲು ರಾ॥
ಸಿಂಮುಕದಡಿ ಕರಿ ಸೋಮಣಗೌಡ
ನ ಭರಮಣಗೌಡನ ಮಗ ದೆಮಣ ಗೌ
ಡನು ಬರಕೊಟಸ್ವಾಸ್ತಿಕ್ರಯಪತ್ರದ ಕಾ
ಗದ ಕ್ರಮವೆಂತೆಂದರೆ ಅದಾಗಿ। ಕದಡಿ
ಗೌಡಿಕೆ ಸಮೂದಿ ಸ್ವಾಸ್ತಿವಳಗೆ ದೇವರ
ವರ ಗೌಡಿಕೆ ಪಾಲು ನಿಮೆ ಬದುಕು ಕಳದು
ಉಳಿದ ನಿಮೆ ಬದುಕ್ಕಿನ ಸ್ವಾಸ್ತಿನ ಮಗು ನ
ಂಮ ಅಂಣ ತಂಮಗಳಿಗೆ ಸಾಹಾ ಬಂದು
ಯಿದ ಮಾಂನ್ಯೆಗಳ ವಿವರ ಉ ಜೊಡಿ ಮಾಂ
ನ್ಯೆ ವಾಸತ್ತಿಗೆ ಮಾಂನ್ಯೆದೆಖಿಲು ಮ೨೭ಯಿ
ಪತ್ತ್ರಯೆಳುಮಾರು ಸರ್ವಮಾಂನ್ಯೆ ಊ
ಮ ೨।೦ ಯರಡು ಮಾರುಕಾಲು ಉಭಯ
ಂಮ ೨೯।೦ಯಿಪತವಂಭತು ಮಾರುಕಾ
ಲು ಹ್ಹೊಲಬಂದುಯಿರಲಾಗಿ ನಂಮ ಅಂ
ಣ ತಂಮಗಳ ಪಾಲಿಗೆ ಪಾಲು ವರಾವರ್ಹಿ
ಗೆ ಹೊದ ವಿವರ ಉ
ಮ ೧೩ ಭರಮಣಗೌಡನ ಮಗ ಲಿಂಗಣ
ಗೌಡನ ಪಾಲಿಗೆ ಬಂದುದು
ಮ ೧೨ ಜೂಡಿತ್ತೆರುವಾ ಮಾಂನ್ಯೆ
ಮ ೧ ಸರ್ವಮಾಂನ್ಯೆ ಉ
ಮ ೧೩

ಮ ೮೯=ಚಿಕಣಗೌಡನ ಪೊಂಮಗ ಕೆಂಬಾ
ವಿಗೌಡನ ಪಾಲಿಗೆ ಬಂದಿದು–
ಮ ೭॥೦ ಜೂಡಿತೆರುವ ಮಾಂನ್ಯೆ
ಮ ೦॥= ಸರ್ವಮಾಂನೆ ಉ

ಮ ೮೯=
ಮ ೨೧೯= ಅಂತಯಿಪತವಂದು ಮಾರು
ಬೆಳೆ ಹೊಲಂನು ಉಭಯತರ ಪಾಲಿಗೆ ಕ
ಳದು ಉಳಿದು ನಂನ ಪಾಲಿಗೆ ಮ ೮೯=
ಯೆಂಟಮಾರು ಬೆಳ್ಕೆ ಹೊಲಬಂದು
ಯಿದಲ್ಲಿ ಮಾಂನ್ಯೆಗಳ ವಿವರ ಉ ಜೂ
ಡಿತೆರುವಾಮಾಂನ್ಯೆ ಮ ೭॥೦ ಯೆಳವರ್ರೆ
ಮಾರುಸರ್ವಮಾನ್ಯೆವ ೦॥= ಅರೆವಾರು
ಬೆಳೆಯಿಮರಿಯಾದೆಲಿಯೆಂಟು ಮಾ
ರು ಬೆಳೆಹೊಲನು ಬಂದುಯಿಂದಿತೆನಂಮ
ಅವಸರನಿಮಿತ್ಯೆವಾಗಿ ವೆವರವರ ಕೃ
ಯಲಿ ಸಂಣಗೆರ್ರೆನಾಂಣೆ. ಟಿ
ಗ ೫೦ ಅಕ್ಷಾರದಲ್ಲಿ ಅಯಿವತು ವರ
ಹಾಂನುಯಿಸುಕೊಂಡು ವಂಮ ಪಾಲಿಗೆ
ಬಂದ ಸಲುವಳಿ ಸ್ವಾಸ್ತಿವಳಗೆ ನಾಕರಲಿ
ವಂದು ಪಾಲು ಸಂದಮಾರುನಿಂದ ಕ್ರಯಾ
ಮಾಡಿಕೊಟುಯಿಧೆನೆ ನಾಕರಲಿ ವಂದು
ಪಾಲಿಗೆ ಬಂದ ಮಾಂನ್ಯೆಗಳು ಜೂಡಿತೆ
ರುವಾಮಾಂನ್ಯೆ ಮ ೧॥। =ವಂದು ಮಾರು
ಮುಕಾಲು ಬೆಳೆ ಸರ್ವಮಾನ್ಯೆಮಂ ९=॥೦
ಬೆಳೆ ಅರವಿಸ ಅಂತು ಮ ೨९॥೦ಯರ
ಡುಮಾರು ಅರೆವಿಸದಹೊಲಯಿದರ ಹೊ
ರತು ಗೌಡಿಕೆ ಬದುಕ್ಕಿಗೆ ಬಂದಲಾಯುವ
ರ್ತನೆತಯಿನಾಡಿ ತಶ್ರಿಫಮೂಲಿವಿನಗೌ
ಡಗಾಸುಕಾರಕ ಕಂಠವಣ ಹಡದಿ ಹಾ
ಸಿಕೆ ಪಶಿಗೆ ಪಳಿಗೆ ಹೊಲೆಆಳು ಮತೆನು
ಂಪಾದಕ್ಕೆ ಜೋಪಾರ್ಜನೆ ಸಾಹವಾಗಿ ನಾ
ಕರಲಿ ವಂದು ಪಾಲನು ನಿಮಗೆ ಕ್ರಯಮಾ

ಡಿಕೊಟುಯಿಧೆನೆ ನಿಮಗೆ ಕೊಟಿಯ
ಯರಡು ಮೂರು ಅರವಿಸದ ಹೊಲದಾಗೆ ನಿಧಿ
ನಿಕ್ಷೆಪಜ್ಯಲ ಸಿಲಿಯೆನು ಯಿದರು ನಿ
ಂಮನೆ ಕೂಡಿದು ಯಿೂರಿ ತಿಲಿ ನಂಮು ಆ
ತ್ಮ ಸಂತೊಶದಿಂದಾ ಕ್ರಯಕೆಕೊಟು
ಯಿಧೆನೆನಿಂಮು ಪುತ್ರ ಪಉತ್ರ ಪಾ
ರಂಫರಿಯಾಗಿ ಭೂಮಿ
ಸೂರ್ಯಾಚೆಂದ್ರ ಉಳಪರಿಯಂತ್ರಉ
ಸುಖದಲ್ಲಿ ಉಂಡುಕೊಂಡು ಯಿಹ
ದು ಯೆಂದು ನಂಮು ತ್ರಿಕರುಣ ಸುಧವಾ
ಗಿ ಬರಕೊಟ ಸ್ವಾಸ್ತಿ ಕ್ರಯ ಪತ್ರದ
ಕಾಗದಉ
ಕದಡಿ ಕರೆಸೊಮಂಣ ನಾವುಗಾಭರಮಂಣಗೌಡ
ನದೆಮಂಣಗೌಡನು ಲೆಕಣಿಕಿ ಹಿಡದಾ...ತದಿಂದಾ
ಬರಕೊಟಪತ್ರಉ

ಯಿದಕೆ ಸಾಕ್ಷಿಗಳು

ಳಿವಾಡ ಡವಿಗೆ ನಾಡ ಮ
ಲ್ಲಿಗೆವಾಡದ ದೆವಣಗಉಡ
ಕ್ರಷ್ಣಗಉಡರ ಸಾಕ್ಷಿ
ಕದಡಿಯಭರಮಂಣಗೌಡನಾ
ಮಗಾ ಲಿಂಗಣಗೌಡನ ಸಾಕ್ಷಿ
ಅಬೆಗೆರೆಯ ಲಿಂಗಣಗೌ
ಡನ ಮಗ ಶಿರಕಣಗೌಡ
ನ ಸಾಕ್ಷಿ

ಸಿರಪಟಿ ಚೆಂನಪಗೌಡ
ನ ಸಕ್ಷಿ ೧
ಸಿರಪಟಿಸೆನಭೊಗಾ ಜೊಗರ
ಸೈನಾ ಸಾಕ್ಷಿ ೧

ಹಲಗೆರಿ ಯಿರಣಗೌ
ಡನ ಮಗ ಲ್ಲಿಂಗಣ ಗೌ
ಡನ ಸಕ್ಷಿ

ಯಿಂತಿವರ ಸನ್ಮತದಿಂದಾ ಬರದಾತ ದೆ
ಶಕುಲಕರಣಿ ಮಿೂನಪನ ಮಗ ವೆಂ
ಕಟರಾಯನ ಸೂಹಸ್ತದ ಬರಹಾಉ

———

ಚಿತ್ರಕಂಠ[1]

● ಸಿ. ವ್ಹಿ. ರಂಗಸ್ವಾಮಿ

ಒಂದು ಸಾಮ್ರಾಜ್ಯದ ರಕ್ಷಣೆ ಹಾಗೂ ಭದ್ರತೆಗೆ ಅತ್ಯಾವಶ್ಯಕವಾಗಿ ಬೇಕಾದ ಸೈನಿಕ ವ್ಯವಸ್ಥೆಯಲ್ಲಿ ಅಶ್ವದಳವು ಪ್ರಮುಖವಾದ ದಳವೆನಿಸಿದೆ. ಈ ಸವಾರರ ದಳಕ್ಕೆ ಅಶ್ವಗಳನ್ನು ಆಯ್ಕೆಮಾಡಲು ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿದ್ದ ಪದ್ಧತಿಯೊಂದಿತ್ತು. ಅತ್ಯಂತ ಶ್ರೇಷ್ಠವಾದ ಅಶ್ವಕ್ಕಿರಬೇಕಾದ ಲಕ್ಷಣಗಳನ್ನು ಕೌಟಿಲ್ಯನ ಅರ್ಥಶಾಸ್ತ್ರವು[2] ತಿಳಿಸುತ್ತವೆ. ಪ್ರಾಚೀನ ಭಾರತ. ಹಾಗೂ ಕರ್ನಾಟಕದ ಅರಸರು

---

೧. ಬಾದಾಮಿ ಚಾಲುಕ್ಯ ಅರಸರು ಯುದ್ಧಕಾಲದಲ್ಲಿ ಉಪಯೋಗಿಸುತ್ತಿದ್ದ 'ಚಿತ್ರಕಂಠ' ಎಂಬ ಅಶ್ವದ ಶಾಸನೋಕ್ತಿಗೆ ಸಂಬಂಧಿಸಿದ ಜಿಜ್ಞಾಸಾ ಲೇಖನ. (ಇದಕ್ಕೆ ಸಂಬಂಧಿಸಿದಂತೆ ಒಂದು ಭಾವಚಿತ್ರವನ್ನು ಇಲ್ಲಿ ಕೊಡಲಾಗಿದೆ.)

೨. ಅತ್ಯುತ್ತಮವಾದ ಅಶ್ವದ ಮುಖವು ೩೨ ಅಂಗುಲ ಉದ್ದವಾಗಿರಬೇಕು. ಅಶ್ವದ ಉದ್ದವು ಅದರ ಮುಖದ ಐದರಷ್ಟಿರಬೇಕು. ಅದರ ಮೀನಖಂಡವು ೩೦ ಅಂಗುಲವೂ, ಅಶ್ವದ ಎತ್ತರವು ಮೀನಖಂಡದ ನಾಲ್ಕರಷ್ಟಿರಬೇಕು. (**Arthasastra**. Tr. Shamasastry Book II, Chapter–3) ಈ ಲಕ್ಷಣಗಳನ್ನು ಕುರಿತು ಪಾಶ್ಚಾತ್ಯ ತಜ್ಞರಾದ ಎಚ್. ಜಿ. ವಾಲ್‌ಹೌಸರು ನೀಡಿರುವ ಅಭಿಪ್ರಾಯವನ್ನು ಇಲ್ಲಿ ಉಲ್ಲೇಖಿಸುವುದು ಅನೌಚಿತ್ಯವಾಗಲಾರದು. ಅವರು ಅತ್ಯುತ್ತಮ ಅಶ್ವಕ್ಕಿರಬೇಕಾದ ಲಕ್ಷಣಗಳನ್ನು ವರ್ಣಿಸುತ್ತಾ ಅಂತಹ ಅಶ್ವದ ಮೂಲಕ ಅಶ್ವದ ಒಡೆಯನಿಗೆ ಅವನ ಅದೃಷ್ಟದ ಶುಭಾಶುಭದ ವಿಚಾರವಾಗಿ ಹೀಗೆ ಹೇಳಿರುತ್ತಾರೆ. "ಎಲ್ಲ ದೃಷ್ಟಿಯಿಂದ ಪರಿಪೂರ್ಣವಾದ ಲಕ್ಷಣಗಳುಳ್ಳ ಅಶ್ವವು ನಾಲ್ಕು ಗೊರಸುಗಳನ್ನು ಹೊಂದಿರಬೇಕು. ಅದರ ಶಿರಸ್ಸು ಮತ್ತು ಬಾಲವು

ತಮ್ಮ ಅಶ್ವದಳಕ್ಕೆ ಅಶ್ವಗಳನ್ನು ಆಯ್ಕೆಮಾಡುವ ಸಮಯದಲ್ಲಿ ಅಶ್ವಕ್ಕಿರಬೇಕಾದ ಈ ಶುಭ ಚಿಹ್ನೆಗಳಿಗೆ ವಿಶೇಷ ಮಹತ್ವವನ್ನು ಕೊಡುತ್ತಿದ್ದರು. ಅಂತಹ ಅಶ್ವಗಳೇ ಅರಸನಿಗೆ ಯುದ್ಧದಲ್ಲಿ ವಿಜಯವನ್ನೂ, ತನ್ನ ಸಾಮ್ರಾಜ್ಯ ವಿಸ್ತರಣೆಯ ಕಾರ್ಯದಲ್ಲಿ ಯಶಸ್ಸನ್ನೂ ಸಾಮ್ರಾಜ್ಯಕ್ಕಾಗಿ ಅಗತ್ಯವಾದ ಸಂಪದಭಿವೃದ್ಧಿಯನ್ನೂ ಗಳಿಸಿಕೊಡಲು ಯೋಗ್ಯವೆನಿಸಿದ್ದವು. ಅಂತೆಯೇ ಅಶ್ವಗಳನ್ನು ಸೈನ್ಯಕ್ಕೆ ಆಯ್ಕೆಮಾಡುವಾಗ ಉತ್ತಮ ಲಕ್ಷಣಗಳುಳ್ಳ ಅಶ್ವಗಳನ್ನು ಆರಿಸಿಕೊಳ್ಳುವ ಪದ್ಧತಿಯು ಸಹಜವಾಗಿ ಬೆಳೆದು ಬಂದಿತು.

ಪ್ರಾಚೀನ ಭಾರತ ಇತಿಹಾಸದಲ್ಲಿ ಚಿತ್ರಕಂಠವೇ ಅಲ್ಲದೆ ಉಳಿದ ಒಂದೆರಡು ಉತ್ತಮ ಅಶ್ವಗಳ[3] ನಿದರ್ಶನಗಳನ್ನು ಹೇಳಬಹುದಾಗಿದೆ. ಭದ್ರಾವತಿ ನಗರಿಯ [ಉತ್ತರ ಭಾರತದ ಹಿಮಾಲಯ ಪರ್ವತ ಪ್ರದೇಶ] ಅರಸನಾದ ಯೌವನಾಶ್ವನಲ್ಲಿ ಶ್ರೇಷ್ಠ ಲಕ್ಷಣಗಳುಳ್ಳ ಅಶ್ವಗಳಿದ್ದವೆಂದೂ [ಅಶ್ವದ ನಿರ್ದಿಷ್ಟ ಹೆಸರು ದೊರಕುವುದಿಲ್ಲವಾದರೂ] ಮತ್ತು ಯಜ್ಞಕಾಲದಲ್ಲಿ ಹಾಗೂ ಯುದ್ಧದಲ್ಲಿ ವಿಜಯಗಳಿಸಲು ಅವು ಶ್ರೀಲಕ್ಷ್ಮಿಯ ಸಂಕೇತವೆನಿಸಿದ್ದರಿಂದ ಅವನ್ನು ಭೀಮನು ಯುದ್ಧದಲ್ಲಿ ಗೆದ್ದುತಂದ

ಸಂಪೂರ್ಣವಾಗಿ ಶ್ವೇತವರ್ಣವುಳ್ಳದ್ದಾಗಿರಬೇಕು. ಇಂತಹ ಅಶ್ವಕ್ಕೆ 'ಜಾತ್ಯಾಶ್ವ' ಎಂದು ಹೆಸರು. ಅದರ ಮುಂಗುರುಳು ಹಿಂದಕ್ಕೆ ಬಾಚಿದಂತಿರಬೇಕು. ತಲೆಯ ಮೇಲೆ ಅಂತಹ ಎರಡು ಮುಂಗುರುಳುಗಳೂ, ಮತ್ತೆರಡು ಎದೆಯ ಮೇಲೂ, ಮತ್ತೆರಡು ಒಂದೊಂದರಂತೆ ಎರಡು ಪಾರ್ಶ್ವಗಳಲ್ಲಿಯೂ ಮತ್ತೊಂದು ಕುತ್ತಿಗೆಯ ಹಿಂಭಾಗದಲ್ಲಿ ಗುಳಿ ಬಿದ್ದಂತೆಯೂ ಇರಬೇಕು."

(IA I, 364); ಮುದ್ದಣ : ರಾಮಾಶ್ವಮೇಧ ಆಶ್ವಾಸ ೧೬, ಪು. ೧೬೫.

೩. ಚತುರ ಪದಹತಿಯ ಸರಸಧ್ವನಿಯ ವರ್ಣಶೋಭಿತದಲಂಕಾರದ ಸುಲಕ್ಷಣದ ಲಲಿತ।
ಶ್ರುತಿರಂಜನದ ವಿಶೇಷಾರ್ಥ ಸಂಬಂಧದ ವಿಸ್ತಾರದಿಂ ಪೊಸತೆನಿಸುವನುತಸತ್ಕವಿ ಪ್ರೌಢತರ
ಸುಪ್ರಬಂಧದಂ। ಅತಿಮನೋಹರವಾದ ವಾಜಿಯಂ ಕಂಡು ಹರ್ಷಿತನಾಗಿ ನೋಡುತಿರ್ದಂ
ಕಲಾವಿದನಪ್ಪ ಮಾರುತಿ ಮಹೋತ್ಸವದೊಳು ॥
[ಜೈಮಿನಿಭಾರತ, ಸಂಧಿ ೪, ಪದ್ಯ-೮]

ಅಶ್ವಮೇಧಯಾಗಕ್ಕೆ ಯೋಗ್ಯ ಕುದುರೆಯನ್ನು ತರಬೇಕಾದ ಸಮಯದಲ್ಲಿ ವೇದವ್ಯಾಸರು ಧರ್ಮರಾಯನಿಗೆ ಹೇಳಿದ್ದೇನೆಂದರೆ, "ಸ್ವಚ್ಛತರ ಧವಳಾಂಗದಲೆ ಮನೋಹರ ಪೀತ। ಪುಚ್ಛದ ಸುಗಮನದೊಂದೇ ಕಿವಿಯೊಳಿಸೆವ ನೀಲಚ್ಛವಿಯ ಕೋಮಲ ತುರಂಗಮಂ ಸಾಧಿಸಿ ಮಹಾಕ್ರತುವನಾಚರಿಪೊಡೆ......ಜೈಮಿನಿಭಾರತ, ಸಂಧಿ-೨, ಪದ್ಯ-೨೬

ನೆಂದು] ಹೇಳಿದೆ.[4] ಇದರಂತೆಯೇ ಗ್ರೀಕ್ ಅರಸರಲ್ಲಿ ಖ್ಯಾತಿಹೊಂದಿದ ಅಲೆಗ್ಸಾಂಡರನು ಯುದ್ಧದಲ್ಲಿ ಬಳಸುತ್ತಿದ್ದ ತನ್ನ ನೆಚ್ಚಿನ ಕುದುರೆಗೆ 'ಬ್ಯೂಸಿಫ್ಯಾಲಸ್' ಎಂಬ ಹೆಸರಿತ್ತು, ಭಾರತದೇಶದ ಮೇಲೆ ಅಲೆಗ್ಸಾಂಡರನು ದಂಡೆತ್ತಿ ಬಂದಾಗ ಪುರೂರವನೊಡನೆ ರೆಝೀಲಂ ನದಿಯ ದಂಡೆಯ ಮೇಲೆ ನಡೆದ ಯುದ್ಧದಲ್ಲಿ ಆ ಅಶ್ವವು ಮರಣ ಹೊಂದಿತು. ಆ ಸಮಯದಲ್ಲಿ ಅಲೆಗ್ಸಾಂಡರನು ಬಹಳ ದುಃಖಿತನಾದನಂತೆ. ಈ ಅಶ್ವವು ಮುಂದಲೆ ಮತ್ತು ವಿಶಾಲವಾದ ಹಣೆ ಉಳ್ಳದ್ದಾಗಿದ್ದರಿಂದ ಅದಕ್ಕೆ 'ಬ್ಯೂಸಿ ಫ್ಯಾಲಸ್' ಎಂದು ಹೆಸರು ಬಂದಿತ್ತು. ಅದು ಅತ್ಯಂತ ಶ್ರೇಷ್ಠ ಅಶ್ವವಾದುದರಿಂದ ಅವನು ಎಲ್ಲ ಕಡೆ ಜಯಗಳಿಸಲು ಸಹಾಯವಾಯಿತು.

ಕರ್ನಾಟಕ ಅರಸುಮನೆತನಗಳಲ್ಲಿ ಬಾದಾಮಿ ಚಾಲುಕ್ಯರು ತಮ್ಮ ಅಪ್ರತಿಮ ಸಾಹಸ ಮತ್ತು ಶೌರ್ಯದಿಂದ ವಿಶಾಲ ಸಾಮ್ರಾಜ್ಯವನ್ನು ನಿರ್ಮಾಣ ಮಾಡಿದರು. ಈ ಕಾರ್ಯದಲ್ಲಿ ಅವರಿಗೆ ಅವರ ಸೈನ್ಯ ಬಲದ ನೆರವು ಇದ್ದೇ ಇತ್ತು. ಮುಂದೆ ರಾಷ್ಟ್ರಕೂಟ ಸಾಮ್ರಾಜ್ಯ ಸ್ಥಾಪನೆ ಮಾಡಿದ ದಂತಿದುರ್ಗನು ತಾನು ಪಾಂಡ್ಯ, ಕೇರಳ ಮೊದಲಾದ ನಾಲ್ಕು ದಿಕ್ಕುಗಳಲ್ಲಿದ್ದ ವೈರಿಗಳನ್ನು ಗೆದ್ದು ವಿಜಯೋತ್ಸಾಹಗಳಿಂದ ಚಾಲುಕ್ಯ ಸೇನೆಯಾದ ಕರ್ನಾಟ ಬಲವನ್ನು ಸ್ವಾಧೀನಪಡಿಸಿಕೊಂಡನೆಂದು ತನ್ನ ಸಾಮಂಗಡ[5] ಶಾಸನದಲ್ಲಿ ಹೇಳಿಕೊಂಡಿರುವನು. ಇಂತಹ ಕರ್ನಾಟ ಬಲದಲ್ಲಿನ ಅಶ್ವದಳದ [ಗಜಸೇನೆಯೊಡನೆ] ಅಶ್ವಗಳು ಶ್ರೇಷ್ಠವಾದ್ದಾಗಿರಲೇಬೇಕು. ಗಜಸೈನ್ಯದ ಶೌರ್ಯದ ಉಲ್ಲೇಖವು ಇಮ್ಮಡಿ ಪುಲಕೇಶಿಗೆ ಸಂಬಂಧಿಸಿದಂತೆ ದೊರೆತಿದ್ದರೆ ಅಶ್ವದಳದ ಪರಾಕ್ರಮವನ್ನು ಒಂದನೆಯ ವಿಕ್ರಮಾದಿತ್ಯನ ಮತ್ತು ಆತನ ತರವಾಯ ಬಂದ ಅರಸರ ಶಾಸನಗಳು ಉಲ್ಲೇಖಿಸಿರುತ್ತವೆ. ಇಮ್ಮಡಿ ಪುಲಕೇಶಿಯ ಮರಣಾನಂತರ ಚಾಲುಕ್ಯ ಸಾಮ್ರಾಜ್ಯದಲ್ಲಿ ತಲೆದೋರಿದ ಕ್ಷೋಭೆಯನ್ನು ಕೊನೆಗಾಣಿಸಿ ಭದ್ರತೆಯನ್ನು ತಂದುಕೊಟ್ಟ ಒಂದನೆಯ ವಿಕ್ರಮಾದಿತ್ಯನು ಬಳಸುತ್ತಿದ್ದ ಅಶ್ವಕ್ಕೆ 'ಚಿತ್ರಕಂಠ' ಎಂಬ ಹೆಸರಿತ್ತು. ಈ ಅಶ್ವದ ಪರಾಕ್ರಮದಿಂದಾಗಿ ಅಂದಿನಿಂದ ವಿಕ್ರಮಾದಿತ್ಯನ ತರುವಾಯ ಆಳಿದ ಅರಸರೆಲ್ಲರೂ ತಮ್ಮ ಅಶ್ವವನ್ನು 'ಚಿತ್ರಕಂಠ' ಎಂಬ ಹೆಸರಿನಿಂದಲೇ ಹೆಸರಿಸುವುದಕ್ಕಾರಂಭಿಸಿರಬಹುದು. ಹಲವಾರು ಚಾಲುಕ್ಯರ ಶಾಸನಗಳು ಚಿತ್ರಕಂಠದ ಹೆಸರನ್ನು ಹೇಳುವುದಲ್ಲದೇ ಅದರಿಂದ ಅವುಗಳ ಅರಸರು ಗಳಿಸಿದ ದಿಗ್ವಿಜಯವನ್ನೂ ವರ್ಣಿಸುತ್ತವೆ.

---

೪. ಅಧಿಕಬಲ ಯೌವನೋತ್ಸಾಹವನಿವನೈಶ್ವರ್ಯ ವಧುವಿನ ಕಟಾಕ್ಷದಂತೊಪ್ಪುವ ತುರಂಗಮಂ।
ಉದರೋಪಮಾನ ಪವಮಾನಜಂ ಕಂಡು ನೆರೆ ಸುಂಮಾನಮಂ ತಾಳ್ದನು ॥
[ಜೈಮಿನಿಭಾರತ, ಸಂಧಿ ೪, ಪದ್ಯ ೭]

5. I. A.. XVIII, 38

ಒಂದನೆಯ ವಿಕ್ರಮಾದಿತ್ಯನು ಚಿತ್ರಕಂಠದ ನೆರವಿನಿಂದ ತನ್ನ ಖಡ್ಗವನ್ನು ಝಳಪಿಸುತ್ತಾ ತನ್ನ ಸಾಮ್ರಾಜ್ಯವು ಅವನಿಪತಿತ್ರಿತಯಾಂತರಿತಗೊಂಡಿದ್ದಾಗ ತನ್ನ ಶತ್ರುಗಳನ್ನೆಲ್ಲಾ ನಿರ್ಮೂಲಮಾಡಿ ಸಾಮ್ರಾಜ್ಯದಲ್ಲಿ ಶಾಂತಿಸ್ಥಾಪನೆ ಮಾಡಿದನು. ಯಾರೊಬ್ಬರ ಸಹಾಯವೂ ಇಲ್ಲದೆ ಸ್ವಸಾಮರ್ಥ್ಯದಿಂದ ಸೈನ್ಯದ ನಾಯಕತ್ವವನ್ನು ವಹಿಸಿಕೊಂಡು ತನ್ನ ದಿಗ್ವಿಜಯವನ್ನು ಸಾಧಿಸಿದನೆಂದು ಆತನ ತಲಮಂಚಿ[6] ಶಾಸನವು ತಿಳಿಸುತ್ತದೆ. ಇದರಂತೆಯೇ ಕ್ರಿ. ಶ. ೭೫೭ರ ಎರಡನೆಯ ಕೀರ್ತಿವರ್ಮನ ವಕ್ಕಲೇರಿ[7] ಶಾಸನವು ಒಂದನೆಯ ವಿಕ್ರಮಾದಿತ್ಯನು ಚೋಳ. ಪಾಂಡ್ಯ, ಕೇರಳ ಮತ್ತು ಕಳಭ್ರರನ್ನು ಗೆದ್ದು ಕಾಂಚೀಪತಿಯ ಸೊಕ್ಕನ್ನು ಮುರಿದದ್ದು ಚಿತ್ರಕಂಠದ ನೆರವಿನಿಂದಲೇ ಎಂದು ಸಾರುತ್ತದೆ. ತನ್ನ ಶತ್ರುಗಳಲ್ಲಿದ್ದ ಗಜಸೇನೆಯನ್ನು ಸಿಂಹರೂಪದಂತಹ ಚಿತ್ರಕಂಠವೆಂಬ ಅಶ್ವದಿಂದ ಸೋಲಿಸಿದನಂತೆ.

ಚಿತ್ರಕಂಠ ಎಂಬ ಹೆಸರಿನ ಅಶ್ವಗಳನ್ನು ಯುದ್ಧದಲ್ಲಿ ಬಳಸಿದವರಲ್ಲಿ ಒಂದನೆ ವಿಕ್ರಮಾದಿತ್ಯ ನಂತರ ವಿನಯಾದಿತ್ಯ. ವಿಜಯಾದಿತ್ಯ. ಎರಡನೆಯ ವಿಕ್ರಮಾದಿತ್ಯ ಮತ್ತು ಎರಡನೆಯ ಕೀರ್ತಿವರ್ಮರನ್ನು ಹೇಳಬಹುದು. ಇವರು ತಮ್ಮ ಅಶ್ವಬಲ ದಿಂದ ರಣರಂಗದಲ್ಲಿ ತಮ್ಮ ವೈರಿಗಳನ್ನು ಸೋಲಿಸಿ ವಿಜಯಗಳಿಸಿದರೆಂದು ಅವರ ಶಾಸನಗಳು ತಿಳಿಸುತ್ತವೆ.

ಚಿತ್ರಕಂಠವನ್ನು ಕುರಿತು ಜಿಜ್ಞಾಸೆ ಮಾಡುವಾಗ ಎರಡು ಮುಖ್ಯಾಂಶಗಳು ಹೊರ ಬೀಳುತ್ತವೆ. ಒಂದು ಚಿತ್ರಕಂಠ ಎಂಬ ಅಶ್ವವು ಶಾಸ್ತ್ರೀಯ ಉತ್ತಮ ಲಕ್ಷಣಗಳನ್ನು ಹೊಂದಿತ್ತೇ ಇಲ್ಲವೇ ? ಎರಡನೆಯದು ಚಿತ್ರಕಂಠವೆಂಬ ಹೆಸರು ಒಂದನೆಯ ವಿಕ್ರಮಾ ದಿತ್ಯನು ಬಳಸಿದ ಅಶ್ವಕ್ಕೆ ಮಾತ್ರ ಅನ್ವಯಿಸುತ್ತದೆಯೋ ಅಥವಾ ಮುಂದೆ ಈ ಮನೆತನದ ಇತರ ಅರಸರು ಬಳಸಿದ ಅಶ್ವದಜಾತಿಯ ಎಲ್ಲ ಕುದುರೆಗಳಿಗೂ ಅನ್ವಯಿಸುವ ಹೆಸರೋ ಎಂದು. ಒಂದನೆಯ ಆಕ್ಷೇಪಕ್ಕೆ ಚಾಲುಕ್ಯ ಅರಸರ ಶಾಸನಗಳಲ್ಲಿ [ಒಂದನೆಯ ವಿಕ್ರಮಾದಿತ್ಯನ ಕಾಲದಿಂದೀಚೆಗೆ] ಚಿತ್ರಕಂಠದ ಲಕ್ಷಣಗಳ ಸಾಕ್ಷರಶಃ ವರ್ಣನೆಯು ದೊರೆಯುವುದಿಲ್ಲ. ಈ ಅಶ್ವಗಳನ್ನು ಆಯ್ಕೆಮಾಡುವಾಗ ಅದರ ಉತ್ತಮ ಲಕ್ಷಣಗಳನ್ನು ನೋಡಿಯೇ ರಾಜರೇ ಆಗಲೀ ಅಥವಾ ಸಾಮಾನ್ಯ ಜನರೇ ಆಗಲಿ [ವಜ್ರ ಮತ್ತು ಬೆಲೆ ಬಾಳುವ ಹರಳುಗಳನ್ನು ಕೊಳ್ಳುವಾಗ ಅದನ್ನು ಪರೀಕ್ಷಿಸುವಂತೆ] ಅಶ್ವಗಳನ್ನು ಕೊಳ್ಳು ವಾಗ ಅಶ್ವಪರೀಕ್ಷೆಯನ್ನು ಮಾಡಿಯೇ ಕೊಳ್ಳುತ್ತಿದ್ದರು. ಈ ಪದ್ಧತಿಯು ಪ್ರಾಚೀನ ಕಾಲದಿಂದಲೂ ಇದ್ದಿತು. ಅರ್ವಾಚೀನ ಕಾಲದಲ್ಲಿಯೂ ಮೈಸೂರಿನ ಅರಸರು ತಮ್ಮ

---

6. E. I: IX, 100
"ಚಿತ್ರಕಂಠಾಖ್ಯ ಪ್ರವರ ತುರಂಗಮ ನೈಕೇನೈವ ಪ್ರತಿತಾನೇಕಸ" —
]LII] " He who, at the head of many famous battles (assisted) by none but (his) noble steed named chitrakantha......"

7. I A, VIII 25.

ಪಟ್ಟದಕುದುರೆಯನ್ನು ಆಯ್ಕೆ ಮಾಡಲು ಕುದುರೆಯ ಮೈ ಬಣ್ಣ ಬಿಳಿಯಿರುವ, ಕೆಂಪು ಬಾಲದ, ಸುಳಿ ಮತ್ತು ಹಣೆಯ ಮೇಲೆ ತಿಲಕವಿರುವಂತಹ ಕುದುರೆಯನ್ನೇ ಆಯ್ಕೆ ಮಾಡುತ್ತಿದ್ದರು. ಆದ್ದರಿಂದ ಒಂದನೆಯ ವಿಕ್ರಮಾದಿತ್ಯನು ಸಾಮ್ರಾಜ್ಯವನ್ನು ಶತ್ರುಗಳಿಂದ ವಿಮುಕ್ತಗೊಳಿಸಿ ತನ್ನ ಅಧಿಕಾರವನ್ನು ಮತ್ತು ಶಾಂತಿಸ್ಥಾಪನೆಯನ್ನು ಮಾಡುವ ಮಹತ್ಕಾರ್ಯದಲ್ಲಿ ತನ್ನ ನೆಚ್ಚಿನ ಅಶ್ವಬಲದಿಂದಲೇ ವಿಜಯಗಳಿಸಿದನೆಂಬ ಅಂಶವು ಆ ಅಶ್ವದಲ್ಲಿದ್ದ ಉತ್ತಮ ಅಂಶದಿಂದಲೇ ಎಂಬುದರಲ್ಲಿ ಮೂಲತಃ ಯಾವ ಸಂಶಯವೂ ಇರುವುದಿಲ್ಲ.[೮]

(ಎರಡನೆಯ ಆಕ್ಷೇಪದ ಬಗೆಗೆ ಹೇಳುವುದಾದರೆ) ಅತ್ಯಂತ ಶೌರ್ಯ ಪರಾಕ್ರಮಕ್ಕೆ ಹೆಸರಾದ ಅಶ್ವದ ಹೆಸರನ್ನು ವಿಕ್ರಮಾದಿತ್ಯನ ನಂತರ ಬಂದ ಅರಸರು ತಮ್ಮ ತಮ್ಮ ಅಶ್ವಗಳನ್ನು ಅದೇ ಹೆಸರಿನಿಂದ ಕರೆದಿರುವುದು ಔಚಿತ್ಯಪೂರ್ಣವೆನಿಸುತ್ತದೆ. ಹೀಗೆ ಚಿತ್ರಕಂಠದಷ್ಟೆ ಪರಾಕ್ರಮವನ್ನು ಹೊಂದಿದ್ದ ಕುದುರೆಯ ಒಂದು ವಿಶಿಷ್ಟ ಜಾತಿಗೆ ಚಿತ್ರಕಂಠ ಎಂಬ ಹೆಸರೇ ಬಂದಿರಬಹುದು. ಈ ಹೆಸರನ್ನು ಹೀಗೇ ಬಳಲಾಸಗಿದೆ ಎಂದು ಹೇಳುಲು ಸಾಕಷ್ಟು ಸಾಧನಗಳು ದೊರೆತಿಲ್ಲ ಆದರೆ ವಿಕ್ರಮಾದಿತ್ಯನಿಂದೀಚೆಗೆ ಆಳಿದ ಅರಸರು ಚಿತ್ರಕಂಠದ ಹೆಸರನ್ನು ತಮ್ಮ ಶಾಸನಗಳಲ್ಲಿ ಹೇಳಿಕೊಂಡಿರುವುದರಿಂದ ಆ ಅಶ್ವವು ಒಂದು ಜಾತಿಯ ಕುದುರೆ ಎಂದು ಹೇಳುವುದರಲ್ಲಿ ತಪ್ಪಾಗಲಾರದು

---

8. Rangaswami, C. V. **Goernment and Administration under the Coālukyas of Bādāmi**[Unpublished thesis of K.U. L. Dharwad 1971.]

———

ಏಕಸ್ವಾಮ್ಯತೆಯ ತತ್ವ

● ಟಿ. ಆರ್. ಚಂದ್ರಶೇಖರ

ಪ್ರಸ್ತಾವನೆ

"ಒಂದು ದೇಶದ ಉತ್ಪಾದನಾ ವ್ಯವಸ್ಥೆ ಆ ದೇಶದ ಚರಿತ್ರೆಯ ಪಥವನ್ನು ನಿರ್ಧರಿಸುತ್ತದೆ" ಎಂದು ಮಾರ್ಕ್ಸ್ ಹೇಳಿದರೆ ಗಾಲ್‌ಬ್ರೆತ್‌ರವರು "ಒಂದು ಕೈಗಾರೀಕರಣಗೊಂಡ ದೇಶ ತನ್ನ ಮಾರುಕಟ್ಟೆ ವ್ಯವಸ್ಥೆಯ ಮುಖಾಂತರ ಜನಸಮುದಾಯದ ಅಭಿರುಚಿಯನ್ನು ರೂಪಿಸುತ್ತದೆ" ಎನ್ನುತ್ತಾರೆ. ಇದರಿಂದ ನಮಗೆ ತಿಳಿಯುವುದೇನೆಂದರೆ "ಉತ್ಪಾದನಾ ವ್ಯವಸ್ಥೆ" ದೇಶದ ಆರ್ಥಿಕರಚನೆಯಲ್ಲಿ ಆಯಕಟ್ಟಿನ ರಂಗ ಎಂಬುದಾಗಿದೆ. ಇಲ್ಲಿ ಪ್ರಶ್ನೆಯೆಂದರೆ ಇಂತಹ ಒಂದು ಆಯಕಟ್ಟಿನ ರಂಗ ಹೇಗೆ ಕಾರ್ಯ ನಿರ್ವಹಿಸುತ್ತದೆ? ಮತ್ತು ನಿರ್ವಹಿಸಬೇಕು? ಈ ಬೃಹತ್ ಕಾರ್ಯಾಗಾರ ಎಲ್ಲಾ ನಿರ್ಬಂಧಗಳನ್ನು ಮೀರಿ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕೇ–ಅಥವಾ ಹತೋಟಿಕ್ರಮಗಳಿಂದ ಈ ಕಾರ್ಯವನ್ನು ನಿರ್ದೇಶನಕ್ಕೆ ಒಳಪಡಿಸಬೇಕೇ–ಇತ್ಯಾದಿ ಪ್ರಶ್ನೆಗಳು ಮುಖ್ಯವಾಗುತ್ತವೆ. ಈ ಕೆಲವು ಪ್ರಶ್ನೆಗಳು ಈ ಶತಮಾನದ ಆದಿಭಾಗದಲ್ಲಿ ಪ್ರಮುಖಚರ್ಚೆಯ ವಿಷಯಗಳಾಗಿದ್ದುವು. ಪ್ರಪಂಚದ ಅಭಿವೃದ್ಧಿಶೀಲ ದೇಶಗಳಲ್ಲಿ ಇಂದಿಗೂ ಇದು ಸಮಸ್ಯೆಯಾಗೇ ಉಳಿದಿದೆ.

ಉತ್ಪಾದನಾ ವ್ಯವಸ್ಥೆಯನ್ನು ಮತ್ತು ಅದಕ್ಕೆ ಸಂಬಂಧಿಸಿದ ಮೂಲ ಪ್ರಶ್ನೆಗಳಾದ ಏನನ್ನು ಉತ್ಪಾದಿಸಬೇಕು, ಹೇಗೆ ಉತ್ಪಾದಿಸಬೇಕು ಮತ್ತು ಯಾರಿಗಾಗಿ ಉತ್ಪಾದಿಸಬೇಕು? ಎಂಬುದನ್ನು ಎರಡು ರೀತಿಯಲ್ಲಿ ಸಾಮಾನ್ಯವಾಗಿ ನಿಭಾಯಿಸಬಹುದು.

i) ಹತೋಟಿ ಕ್ರಮಗಳಿಂದ ಕೂಡಿದ ಕೇಂದ್ರೀಕೃತ ಮತ್ತು ನಿರ್ದೇಶಿತ ವ್ಯವಸ್ಥೆ.

ii) ಹತೋಟಿಗಳಿಂದ ಮುಕ್ತವಾದ ವಿಕೇಂದ್ರೀಕೃತ ಮತ್ತು ಸ್ವತಂತ್ರ ವ್ಯವಸ್ಥೆ.


ಮುಂದೆ ಕೊಟ್ಟಿರುವ ಚಾರ್ಟಿನಲ್ಲಿ ಮಾರುಕಟ್ಟೆಯ ಸ್ವತಂತ್ರ ಸಾಧನಗಳಿಂದ ನಿರ್ದೇಶಿಸಲ್ಪಡುವ ವಿಕೇಂದ್ರೀಕೃತ ಮುಕ್ತಸಮಾಜದ ಆರ್ಥಿಕ ಚಕ್ರದ ರಚನೆಯನ್ನು ಬಿಡಿಸಲಾಗಿದೆ.

ಚಿತ್ರದ ವಿವರಣೆ :

ಈ ಚಿತ್ರದಲ್ಲಿ ಮೇಲಿನ ಭಾಗವನ್ನು ಉತ್ಪಾದನಾರಂಗ ಮತ್ತು ಕೆಳಗಿನ ಭಾಗವನ್ನು ಉತ್ಪಾದನಾಂಗಗಳ ರಂಗ ಎಂದು ವಿಭಾಗಿಸಬಹುದು. ಮೇಲಿನ ಭಾಗದಲ್ಲಿ ಉತ್ಪಾದನಾ ರಂಗದ ನೀಡಿಕೆ ಒಲವು, ಮಾರುಕಟ್ಟೆಯಲ್ಲಿನ ಬೇಡಿಕೆ ಒಲವಿನೊಂದಿಗೆ ಕೂಡಿಕೊಂಡು ಏನನ್ನು ಉತ್ಪಾದಿಸಬೇಕು–ಎಂಬುದನ್ನು ನಿರ್ಧರಿಸುತ್ತದೆ. ಕೆಳಗಿನ ಭಾಗದಲ್ಲಿ ಉತ್ಪಾದನಾರಂಗಗಳು ಸರಬರಾಜು ಮಾಡುವ ತಮ್ಮ ಸೇವೆಯ ನೀಡಿಕೆಯು ಉತ್ಪಾದನಾ ರಂಗದಲ್ಲಿರುವ ಇವುಗಳ ಬೇಡಿಕೆಯ ತೀವ್ರತೆಯ ಆಧಾರದಿಂದ ಉತ್ಪಾದನಾರಂಗಗಳ ಮೌಲ್ಯ ನಿರ್ಧಾರವಾಗುತ್ತದೆ. ಹೀಗೆ ಮುಕ್ತ ವ್ಯವಸ್ಥೆಯೊಂದರಲ್ಲಿ ಉತ್ಪಾದನಾ ರಚನೆಯು ಮಾರುಕಟ್ಟೆ ಮತ್ತು ಬೆಲೆ ವ್ಯವಸ್ಥೆಯಿಂದ ನಿರ್ದೇಶಿಸಲ್ಪಡುತ್ತದೆ.

ಮೇಲೆ ವಿವರಿಸಿದ ಕಾರ್ಯಾಚರಣೆ ಮುಕ್ತಬಂಡವಾಳಶಾಹಿ ವ್ಯವಸ್ಥೆಯೊಂದರ ಆದರ್ಶಕಲ್ಪನೆ. ವಾಸ್ತವಿಕ ವಿಶ್ವದಲ್ಲಿ ಈ ಕಾರ್ಯ ಈ ರೀತಿ ಸರಳವಾಗಿರುವುದಿಲ್ಲ. ಪರಿಪೂರ್ಣ ಪೈಪೋಟಿ, ಮತ್ತು ಶುದ್ಧ ಮಾರುಕಟ್ಟೆ ವ್ಯವಸ್ಥೆಗಳು ಇಂದು ಅರ್ಥಶಾಸ್ತ್ರದ ಕಡತಗಳಲ್ಲಿರುವ ಅಮೂರ್ತ ಪರಿಭಾವನೆಗಳು. ಇದಕ್ಕೆ ಬದಲಾಗಿ ಅಪರಿಪೂರ್ಣತೆ. ಕೊರತೆ ಯಾ ಸಮೃದ್ಧಿ, ವಿವಿಧ ಪತೋಟಿ ಕ್ರಮಗಳು ಇಂದಿನ ಮಾರುಕಟ್ಟೆ ವ್ಯವಸ್ಥೆಯ ಒಂದು ವಿಶೇಷ ಲಕ್ಷಣವಾಗಿದೆ. ಅಂದರೆ ಉದ್ಯಮಗಳು ಸರಕುಗಳ ಬೆಲೆ ಮತ್ತು ಪ್ರಮಾಣವನ್ನು ನಿಯಂತ್ರಿಸುವ ಬಲ ಪಡೆದುಕೊಂಡಿವೆ. ಹೀಗೆ ಇಂದಿನ ಮಾರುಕಟ್ಟೆ ವ್ಯವಸ್ಥೆಗಳು ಈ ರೀತಿಯ ಪೈಪೋಟಿ ಮತ್ತು ಅಪರಿಪೂರ್ಣ ಪೈಪೋಟಿಗಳ ಮಿಶ್ರವ್ಯವಸ್ಥೆಯಾಗಿದೆ. ಅಪರಿಪೂರ್ಣ ಪೈಪೋಟಿ, ಸಾಮ್ಯಯುತ ಪೈಪೋಟಿ ಮತ್ತು ಏಕಸ್ವಾಮ್ಯತೆಗಳು ಇಂದು ನಿಜವಾಗಿ ಆಚರಣೆಯಲ್ಲಿರುವ ಮಾದರಿಗಳು.

ಪೈಪೋಟಿ ವ್ಯವಸ್ಥೆಯಿಂದ ಸಿಡಿದು ಬಂದು ಇಂದು ಪ್ರಚಾರದಲ್ಲಿರುವ ಈ ವ್ಯವಸ್ಥೆಗಳು ಹಲವಾರು ವಿರೂಪಗಳಿಗೆ ಕಾರಣವಾಗಿವೆ. ಈ ಮಾರುಕಟ್ಟೆ ವಿರೂಪಗಳು ಹಲವಾರು ಹಾನಿಕಾರಕ ಪರಿಣಾಮಗಳನ್ನು ಉಂಟುಮಾಡುತ್ತವೆ. ಅಭಿವೃದ್ಧ ದೇಶಗಳಿಗೆ ಈ ಪರಿಣಾಮಗಳ ತೀವ್ರತೆಯನ್ನು ನಿಯಂತ್ರಿಸುವ ತಾಕತ್ತು ಇರುತ್ತದೆ. ಆದರೆ ಅಭಿವೃದ್ಧಿಶೀಲ ದೇಶಗಳಲ್ಲಿ ಈ ವಿರೂಪಗಳು ತ್ವರಿತ ಅಭಿವೃದ್ಧಿಗೆ ಕಂಟಕಪ್ರಾಯಗಳಾಗಿ ಪರಿಣಮಿಸಿವೆ. ಇದರಿಂದ ಉಂಟಾಗಬಹುದಾದ ಸಾಮಾಜಿಕ ಅಸಮಾಧಾನವು ಉತ್ಪಾದನೆಗೆ ದಕ್ಕೆ ಉಂಟು ಮಾಡಬಹುದಾಗಿದೆ. ಪರಿಪೂರ್ಣ ಪೈಪೋಟಿಯ ಲಾಭಗಳಾದ ಗರಿಷ್ಠ ಉತ್ಪಾದನೆ. ಕನಿಷ್ಠ ವೆಚ್ಚ ನ್ಯಾಯಯುತ ಬೆಲೆ. ಆದರ್ಶ ಉತ್ಪಾದನಾ ಹಂತ ಇವುಗಳಿಂದ ಈ ದೇಶಗಳು ವಂಚಿತವಾಗಿವೆ. ಈ ಏಕಸ್ವಾಮ್ಯತೆ ಮಾರುಕಟ್ಟೆಯ ತಾತ್ವಿಕ ವಿಚಾರ ಮತ್ತು ಅದರ ವಿರೂಪಗಳನ್ನು ಚರ್ಚಿಸುವುದೇ ಈ ಪುಟ್ಟ ಲೇಖನದ ಉದ್ದೇಶ.




ಮಾರುಕಟ್ಟೆ ಆಧರಿತ ಪೈಪೋಟಿ ವ್ಯವಸ್ಥೆಯೊಂದರ ಕಾರ್ಯಚಕ್ರ

ಏಕಸ್ವಾಮ್ಯತೆಯಲ್ಲಿ ಬೆಲೆ ಮತ್ತು ಉತ್ಪಾದನೆ.

ಏಕಸ್ವಾಮ್ಯತೆ ಎಂದರೆ ಸರುಕುಗಳ ಬೆಲೆ ಮತ್ತು ಉತ್ಪಾದನೆಗಳ ಮೇಲೆ ಒಬ್ಬನೇ ಅಥವಾ ಒಂದೇ ಉದ್ಯಮದ ನಿಯಂತ್ರಣವಿರುವುದು ಎಂದು ಹೇಳಬಹುದು. ಅಂದರೆ ವಸ್ತುವಿನ ಉತ್ಪಾದನೆಯಲ್ಲಿ ಈ ಉದ್ಯಮಿಯೇ ಏಕಮೇವಪ್ರಭು...

ಈ ಪ್ರಭುತ್ವದ ಪ್ರಾಪ್ತತೆ ಇದರ ಮುಖ್ಯ ಲಕ್ಷಣ. ವಾಸ್ತವಿಕವಾಗಿ ನೋಡಿದರೆ ಏಕಸ್ವಾಮ್ಯ ಉದ್ಯಮಿ ತನ್ನ ವಸ್ತುವಿನ ಬೆಲೆ ಮತ್ತು ಉತ್ಪನ್ನ ಎರಡನ್ನೂ ನಿಯಂತ್ರಿಸಲು ಸಾಧ್ಯವಿಲ್ಲ. ತನ್ನ ಅನುಕೂಲಕ್ಕೆ ತಕ್ಕಂತೆ ಯಾವುದಾದರೂ ಒಂದನ್ನು ನಿಯಂತ್ರಿಸಿ ಅಧಿಕ ಲಾಭ ಪಡೆಯಬಹುದಾಗಿದೆ. ಕೆಳಗಿನ ಚಿತ್ರದಲ್ಲಿ ಏಕಸ್ವಾಮ್ಯ ಉದ್ಯಮದ ಸಮತೋಲನ ಸ್ಥಿತಿಯನ್ನು ತೋರಿಸಲಾಗಿದೆ.

ಈ ಉದ್ಯಮದ ಬೇಡಿಕೆ ರೇಖೆ ಎಡದಿಂದ ಬಲಕ್ಕೆ ಇಳಿಮುಖವಾಗಿದೆ. ಅಂದರೆ ಉತ್ಪನ್ನದಲ್ಲಿ ಬದಲಾವಣೆಯಾದರೂ ಬೆಲೆಯಲ್ಲಿ ಅದರ ಪರಿಣಾಮ ಕಾಣಬಹುದು. ಇದರಿಂದಾಗಿ ಸೀಮಾಂತ ಆದಾಯ(MR) ರೇಖೆ ಉದ್ಯಮದ ಸರಾಸರಿ ಆದಾಯ



ಚಿತ್ರ - ೭


(AR) ರೇಖೆಗಿಂತ ಕೆಳಗೆ ಇದೆ. ಈ ಎರಡಕ್ಕೂ ಇರುವ ಅಂತರ ಏಕಸ್ವಾಮ್ಯತೆಯ ಪ್ರಮಾಣವನ್ನು ತೋರಿಸುತ್ತದೆ.

ಮೇಲಿನ ಚಿತ್ರದಲ್ಲಿ ಉದ್ಯಮವು om ಉತ್ಪನ್ನವನ್ನು op ಬೆಲೆಗೆ ಮಾರುತ್ತಿದೆ. ಈ ಸ್ಥಿತಿಯಲ್ಲಿ ಉದ್ಯಮ PENC ಪ್ರದೇಶದಷ್ಟು ಲಾಭಗಳಿಸುತ್ತಿದೆ. ವಿಶೇಷವೆಂದರೆ ಏಕ

ಸ್ವಾಮ್ಯ ಉದ್ಯಮಗಳು ಅಲ್ಪಾವಧಿ ಮತ್ತು ದೀರ್ಘಾವಧಿಗಳೆರಡರಲ್ಲೂ ಅಧಿಕಲಾಭ ಗಳಿಸಬಹುದಾಗಿದೆ.

ಏಕಸ್ವಾಮ್ಯತೆ ಮತ್ತು ಆದರ್ಶ ಉದ್ಯಮ

"ಆದರ್ಶ ಉದ್ಯಮ" ಎಂಬುದು ಅರ್ಥಶಾಸ್ತ್ರಕ್ಕೆ ಮಾರ್ಷಲ್‌ರು ನೀಡಿದ ಮುಖ್ಯ ಪರಿಭಾವನೆ ಕನಿಷ್ಠತಮ ವೆಚ್ಚದ ಮಟ್ಟದಲ್ಲಿ ಗರಿಷ್ಠ ಉತ್ಪಾದನೆ ಮಾಡುವ ಉದ್ಯಮಗಳನ್ನು ಆದರ್ಶ ಉದ್ಯಮವೆನ್ನಬಹುದು. ಪರಿಪೂರ್ಣ ಸ್ಪರ್ಧೆಯಲ್ಲಿ ಈ ಸ್ಥಿತಿ ಸಾಧ್ಯ. ಆದರೆ ಏಕಸ್ವಾಮ್ಯತೆಯಲ್ಲಿ ಉದ್ಯಮಗಳು ಈ ಸ್ಥಿತಿಹೊಂದಲು ಸಾಧ್ಯ ವಿಲ್ಲ. ಏಕೆಂದರೆ AR ರೇಖೆ ಇಳಿಮುಖವಾಗಿರುವುದರಿಂದ AC ರೇಖೆಯನ್ನು ಅದರ ಕನಿಷ್ಠ ಮಟ್ಟದಲ್ಲಿ ಸ್ಪರ್ಶಿಸಲು ಸಾಧ್ಯವಿಲ್ಲ. ಬದಲಾಗಿ ಕನಿಷ್ಠವೆಚ್ಚ ಬಿಂದುವಿನ ಎಡಭಾಗ ದಲ್ಲಿ ಸ್ಪರ್ಶಿಸುವುದರಿಂದ ಉತ್ಪಾದನೆ ಗರಿಷ್ಠವಾಗುವುದಿಲ್ಲ ಮತ್ತು ಉದ್ಯಮ ಇನ್ನೂ ಇಳಿಮುಖವೆಚ್ಚದ ಹಂತದಲ್ಲೇ ಇರುತ್ತದೆ. ಇದನ್ನು ಚಿತ್ರ–೩ರಲ್ಲಿ ಕಾಣಬಹುದು.



ಚಿತ್ರ-3

ಏಕಸ್ವಾಮ್ಯತೆಯ ವಿರೂಪಗಳು

ಏಕಸ್ವಾಮ್ಯ ಉದ್ಯಮದಿಂದ ಕೂಡಿರುವ ಮಾರುಕಟ್ಟೆ ಹಲವಾರು ವಿರೂಪಗಳಿಂದ ಕೂಡಿದೆ. ಏಕಸ್ವಾಮ್ಯ ಉದ್ಯಮಗಳ ಚಟುವಟಿಕೆಗಳು ಹಲವಾರು ಹಾನಿಕಾರಕ ಪರಿಣಾಮಗಳನ್ನು ಉಂಟುಮಾಡುತ್ತವೆ.


೧ ಉತ್ಪಾದನೆಯ ಮೇಲಿನ ಪರಿಣಾಮ:

ಸಮತೋಲನ ಮಟ್ಟವಾದ MC=MR ನಲ್ಲಿ ಉತ್ಪನ್ನವು ಗರಿಷ್ಠ ಇರುವುದಿಲ್ಲ. ಕಾರಣ MR ಏಕಸ್ವಾಮ್ಯತೆಯಲ್ಲಿ ARಗಿಂತ ಕಡಿಮೆಯಿರುತ್ತದೆ. ಪೈಪೋಟಿ ಉದ್ಯಮದ ರೀತಿ ಇಲ್ಲಿ ಉತ್ಪನ್ನವನ್ನು ಗರಿಷ್ಠ ಮಟ್ಟದಲ್ಲಿ ಪಡೆಯಲು ಸಾಧ್ಯವಿಲ್ಲ. ಇಲ್ಲಿ ಉದ್ಯಮ ಅದಕ್ಷತೆಯಿಂದ ಕೂಡಿರುವುದಲ್ಲದೆ. 'ಸಾಮಾಜಿಕ ಕನಿಷ್ಠ ಸೀಮಾಂತವೆಚ್ಚ ಬೆಲೆ' ಸಾಧ್ಯವಿಲ್ಲ. ಆರ್ಥಿಕತೆಗೆ ಇದರಿಂದ ನಷ್ಟವೇ ಹೆಚ್ಚು [ಚಿತ್ರ-೪ನ್ನು ನೋಡಿ].

೨ ಬೆಲೆಯ ಮೇಲಿನ ಪರಿಣಾಮ:-

ಏಕಸ್ವಾಮ್ಯತೆಯ ಸರಾಸರಿ ಆದಾಯ ರೇಖೆ (AR) ಎಡದಿಂದ ಬಲಕ್ಕೆ ಇಳಿಯುತ್ತಿರುವುದರಿಂದ ಸೀಮಾಂತ ಆದಾಯ (MR) ಅದರಿಂದ ಬಿನ್ನವಾಗಿ ತಳಮಟ್ಟದಲ್ಲಿ ರುತ್ತದೆ. ಅಂದರೆ ಸಮತೋಲನ ಸ್ಥಿತಿಯಲ್ಲಿ ಬೆಲೆಯು MCಗಿಂತ ಎತ್ತರದಲ್ಲಿ ನಿರ್ಧಾರ ವಾಗುತ್ತದೆ.

ಈ ಮೇಲಿನ ಎರಡು ವಿರೂಪಗಳನ್ನು, ಪೈಪೋಟಿ-ಏಕಸ್ವಾಮ್ಯತೆ ಉದ್ಯಮ ಗಳ ಸಮತೋಲನ ಸ್ಥಿತಿಯ ಹೋಲಿಕೆಯಿಂದ ತಿಳಿಯಬಹುದು. ಇದನ್ನು ಚಿತ್ರ-೪ರಲ್ಲಿ ತೋರಿಸಿದೆ.




ಚಿತ್ರ-4

೩ ಸಾಮ್ಯುಲ್‌ಸನ್‌ರ 'ಜಡಭಾರ ಹಾನಿ' ವಿಶ್ಲೇಷಣೆ[೧]

ಏಕಸ್ವಾಮ್ಯತೆಯು ಒಂದು ವಿರೂಪವನ್ನು "ಜಡಭಾರಹಾನಿ" (Dead weight loss) ಎಂಬ ಪರಿಭಾಷೆಯಿಂದ ತೋರಿಸಬಹುದು. ಇದನ್ನು ಚಿತ್ರ-೫ರಲ್ಲಿ ನೋಡಬಹುದು.

೧ Samuelson. A. paul. Economics. 10/e p. 519.



ಚಿತ್ರ-5

ಈ ಚಿತ್ರದಲ್ಲಿ ಪೈಪೋಟಿ ಸಮತೋಲನ 'G' ಸ್ಥಾನದಲ್ಲಿದೆ. ಏಕೆಂದರೆ MC = MR ಮತ್ತು AC = AR ಈ ಸ್ಥಿತಿಯಲ್ಲಿ ಮಾರ್ಷಲ್‌ರವರ ಅನುಭೋಗಿಮಿಗುತೆ "Pc GD" ಪ್ರದೇಶದಷ್ಟಿದೆ.

ಆದರೆ ಏಕಸ್ವಾಮ್ಯತೆಯ ಬೆಲೆ P_m ಇರುವುದರಿಂದ ಅನುಭೋಗಿ ಮಿಗುತೆ 'P_m E S P_c 'ಯಷ್ಟು ಹಾನಿಯಾಗುತ್ತದೆ. ಏಕೆಂದರೆ ಅದು ಇಲ್ಲಿ ಏಕಸ್ವಾಮ್ಯತೆಯ ಲಾಭಾಂಶವಾಗಿದೆ. ಏಕಸ್ವಾಮ್ಯತೆಯ ದುರಂತವೆಂದರೆ ಅದು ಮೂಲ 'ಮಿಗುತೆಯ' ಒಂದು ಭಾಗವಾದ 'E S G'ಯನ್ನು ಕೂಡಿ ನುಂಗಿಕೊಂಡುಬಿಡುತ್ತದೆ. ಈ ಫಲ ಯಾರಿಗೂ ದಕ್ಕದೆ ಉಳಿದುಹೋಗುತ್ತದೆ. ಇದು ಸಾಮ್ಯುಲ್‌ಸನ್‌ರ ಪ್ರಕಾರ ನಾಗರಿಕರಿಗೆ ಮತ್ತು ಆರ್ಥಿಕತೆಗೆ ತಗಲುವ 'ಹೆಣಭಾರಹಾನಿ'.

ಕೊನೆಯದಾಗಿ ಇವರ ಮತ್ತೊಂದು ವಿಕೃತವೆಂದರೆ ಸಂಪತ್ತಿನ ಕೇಂದ್ರೀಕರಣಕ್ಕೆ ಇಂಬುಕೊಡುತ್ತದೆ. ಆರ್ಥಿಕ ಅಸಮಾನತೆಗೆ ಏಕಸ್ವಾಮ್ಯತೆಯ ಪ್ರಭುತ್ವ ಒಂದು ಪ್ರಬಲ ಕಾರಣ.

ಪುಸ್ತಕ ವಿಮರ್ಶೆ

"ಸಾರ್ವಜನಿಕ ಆಡಳಿತ"

● **ಎಸ್. ಎ. ಪಾಟೀಲ**

ಲೇಖಕರು: ಎಮ್. ಎನ್. ನಂಜುಂಡರಾಜೇ ಅರಸ್
ಅಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
ಬೆಲೆ: ಸಾದಾ ಪ್ರತಿ ರೂ. ೧೮-೦೦, ಉತ್ತಮ ಪ್ರತಿ ರೂ. ೩೦-೦೦
ಪ್ರಕಾಶಕರು: ಆದಿಶಕ್ತಿ ಪ್ರಕಾಶನ, ಸರಸ್ವತಿ ಪುರಂ, ಮೈಸೂರು
ಪುಟಗಳು XIV + 406.

ಸ್ವರಾಜ್ಯ ಪ್ರಾಪ್ತಿಯ ನಂತರ ದಿನಗಳು ಕಳೆಯುತ್ತಿರಲು. ಪ್ರಾಂತಾಭಿಮಾನ ಮತ್ತು ಮಾತೃಭಾಷಾಭಿಮಾನಗಳು ಭಾರತೀಯರಲ್ಲಿ ಬೆಳೆದು ಬಂದವು. ಕಾಲಗತಿಯಲ್ಲಿ ಅವು ಕೆಲಮಟ್ಟಿಗೆ ಆಂದೋಲನ ಸ್ವರೂಪ ತಳೆದವು. ಪರಿಸ್ಥಿತಿಯು ಕಠಿಣವಾಗುತ್ತಿರುವವನ್ನು ಮನಗಂಡು. ಆಗ ಪ್ರಧಾನಿಯಾಗಿದ್ದ ಶ್ರೀ ಜವಾಹರಲಾಲ ನೆಹರು, ಭಾಷಾವಾರ ಪ್ರಾಂತ ರಚನೆಗೆ ಒಪ್ಪಿಗೆಯಿತ್ತರು. ಅಂದಿನಿಂದ ಮಾತೃಭಾಷೆ. ಪ್ರಾಂತ ಭಾಷೆಗಳ ಅಭಿವೃದ್ಧಿಗೆ ಜನರು ಅಣಿಯಾಗಿದ್ದಾರೆ.

ಭಾರತದಲ್ಲಿ ಪ್ರೌಢಮತದಾನ ಪದ್ಧತಿಯು ಬಳಕೆಯಲ್ಲಿದೆಯಷ್ಟೆ! ಜನರು ಜನರಿಗೋಸ್ಕರ, ಜನರಿಂದ ನಡೆಸುವ ಸರಕಾರ ಎಂದರೇನೆಂಬುದು ಶ್ರೀ ಸಾಮಾನ್ಯನು ಅರಿತುಕೊಳ್ಳುವದು ಅವಶ್ಯವೆನಿಸಿದೆ. ತನ್ನ ಮತದಾನದಿಂದ ಆರಿಸಿಬಂದ ಪ್ರತಿನಿಧಿಗಳು ಯಾವ ಕೆಲಸ ನಡೆಸುತ್ತಾರೆ ಮತ್ತು ಅವರಿಂದಾಗುವ ಹಿತಾಸಕ್ತಿಗಳನ್ನು ಅವನು ತಿಳಿಯಲು ಅಪೇಕ್ಷಿಸುತ್ತಾನೆ. ರಾಜಕಾರಣಿಗಳ ಆಡಳಿತೆ ಮುಂತಾದ ಸಾಮಾಜಿಕ ಕಾರ್ಯಗಳ ಅಡಿಪಾಯದಲ್ಲಿದ್ದುಕೊಂಡು ಶ್ರೀ ಸಾಮಾನ್ಯನು ಕೆಲಸ ಮಾಡುವನು. ದಿನದಿನದ ಆಗುಹೋಗುಗಳನ್ನು ಅವನು ಅರಿತಿರಬೇಕಾದರೆ ಆಡಳಿತ ಶ್ರೇಣಿಯ ಎಲ್ಲ ಹಂತಗಳಲ್ಲಿ

ಅವನಿಗೆ ಸುಲಭವಾಗಿ ಸರಳವಾಗಿ ತಿಳಿಯುವ ಅವನ ಮಾತೃಭಾಷೆಯೇ ಬೇಕು. ಪ್ರಾಂತ ಭಾಷೆಬೇಕು.

ಇತ್ತ ಜೀವನೋಪಾಯದ ಸ್ಥಿತಿ–ಗತಿ, ಜೀವನಾವಶ್ಯಕ ವಸ್ತುಗಳು ಯೋಗ್ಯ ಬೆಲೆಯ ಅಂಗಡಿ ವ್ಯವಹಾರಗಳು, ಗುತ್ತೆ ಮಾರಾಟದ ವಿವರಗಳು, ಯಾವದೋ ಒಂದು ವಿದೇಶಿ ಭಾಷೆಯ ಮುಖಾಂತರ ನಡೆದರೆ ಹೇಗೆ! ಹೀಗೆ ಭಾರತದ ರಾಜಕಾರಣ, ಆಡಳಿತೆಯ ಹಂತಗಳು, ಅಲ್ಲಿ ಕೆಲಸ ಮಾಡುವ ಅಧಿಕಾರಿಗಳು ಅವರ ಕಾರ್ಯಕ್ಷೇತ್ರಗಳ ಜ್ಞಾನ ಶ್ರೀ ಸಾಮಾನ್ಯನಿಗೆ ಬೇಕೇ ಬೇಕು. ಈ ಎಲ್ಲ ಸಂಗತಿಗಳನ್ನು ಅವನಿಗೆ ಮಾತೃ ಭಾಷೆಯಲ್ಲಿಯೇ ಹೇಳಿ ಕೇಳಿದರೆ ಕೂಡಲೇ ಅರ್ಥವಾಗುವದು; ವ್ಯವಹಾರವು ತೊಡಕಿಲ್ಲದೆ ಸಾಗುವದು. ಈ ಎಲ್ಲ ಕಾರಣಗಳಿಂದಾಗಿ ಶಿಕ್ಷಣದಲ್ಲಿ ಬೋಧಭಾಷೆಯಾಗಿ, ಆಡಳಿತೆಯಲ್ಲಿ ಸಂಪರ್ಕ–ಭಾಷೆಯಾಗಿ, ನ್ಯಾಯಾಲಯದ ಆಡಳಿತ ಮತ್ತು ತೀರ್ಪುಗಳ ಭಾಷೆಯಾಗಿ ಕನ್ನಡವು (ಕರ್ನಾಟಕದಲ್ಲಿ) ತಲೆಯೆತ್ತಲು ಪ್ರಾರಂಭಿಸಿದೆ.

ಶಿಕ್ಷಣ ರಂಗದಲ್ಲಿ ಕನ್ನಡ ಮಾಧ್ಯಮವು ಯಶಸ್ವಿಯಾಗದಿರಲು ಪಠ್ಯಪುಸ್ತಕಗಳ ಅಭಾವವೇ ಕಾರಣ ಎಂದು ಕೆಲವರು ಹೇಳುವದುಂಟು. ಅದು ಅರ್ಥಹೀನವಾದ ಮಾತು. ಕಲಿಸುತ್ತ ಹೋದಂತೆ, ಅವಶ್ಯವೆನಿಸಿದಾಗ, ಪಠ್ಯಪುಸ್ತಕಗಳು ತಾವಾಗಿಯೇ ಮೈದಾಳಿ ಹೊರಬರುವವು. ಈ ಮಾತಿನ ನಿದರ್ಶನಕ್ಕಾಗಿ "ಸಾರ್ವಜನಿಕ ಆಡಳಿತ" ಹೊತ್ತಿಗೆಯ ಉದಾಹರಣೆಯನ್ನೇ ಮುಂದೆ ಮಾಡಬಹುದು.

ಮೈಸೂರು ವಿಶ್ವವಿದ್ಯಾಲಯದ ಬಿ. ಎ. (ರಾಜ್ಯಶಾಸ್ತ್ರ) ತರಗತಿಯ ಪಠ್ಯಪುಸ್ತಕವೆಂದು ಈ ಗ್ರಂಥವನ್ನು ನಿರ್ದಿಷ್ಟಗೊಳಿಸಲಾಗಿದೆ. ಗ್ರಂಥಕರ್ತರು ಪಠ್ಯಸೂಚಿ ಮತ್ತು ವಿದ್ಯಾರ್ಥಿಗಳ ಅಧ್ಯಯನ ಸಮಸ್ಯೆಗಳನ್ನು ಮನದಂದು ಈ ಗ್ರಂಥವನ್ನು ರಚಿಸಿದ್ದಾರೆ. ಆಂಗ್ಲ ಭಾಷೆಯಲ್ಲಿಯ ಆಡಳಿತ ವಿಷಯದ ಪ್ರಮುಖ ಗ್ರಂಥಗಳನ್ನು ಅಭ್ಯಾಸ ಮಾಡಿ ಸಂಗ್ರಹಿಸಿದ ವಿಷಯವನ್ನು ಗ್ರಂಥಕರ್ತರು ತಿಳಿಯಾದ ನೇರವಾದ ಕನ್ನಡ ಭಾಷೆಯಲ್ಲಿ ಹೇಳಿದ್ದಾರೆ. ಕೇವಲ ಪರೀಕ್ಷೆಗಾಗಿ ಓದುವ ವಿದ್ಯಾರ್ಥಿಗಳಷ್ಟೇ ಅಲ್ಲ; ರಾಜಕಾರಣ ಮತ್ತು ಪ್ರತ್ಯಕ್ಷ ಆಡಳಿತದ ಒಳ-ಹೊರ ಪದರುಗಳನ್ನು ತಿಳಿಯಲು ಅಪೇಕ್ಷೆ ಪಡುವ ಎಲ್ಲ ಸಮಾಜ ಕಾರ್ಯಕರ್ತರಿಗೂ ಈ ಹೊತ್ತಿಗೆಯು ಸಹಾಯಕಾರಿಯಾಗಿದೆ. ರಾಜಕಾರಣದಿಂದ ಆಡಳಿತ ಕ್ರಿಯೆಯನ್ನು ವಿಂಗಡಿಸಿ ಬೇರ್ಪಡಿಸಿ ಈ ಹೊತ್ತಿಗೆಯಲ್ಲಿ ವಿವೇಚಿಸಲಾಗಿದೆ. ಭಾರತದಲ್ಲಿ ಆಡಳಿತೆಯು ನಡೆದು ಬಂದ ದಾರಿಯನ್ನು ಇದರಲ್ಲಿ ಎತ್ತಿ ತೋರಿಸಲಾಗಿದೆ. ಕೌಟಿಲ್ಯ, ಅಶೋಕ, ಹರ್ಷ, ಪುಲಿಕೇಶಿ, ಅಕಬರ ಮುಂತಾದವರು ಕುಶಲ ಆಡಳಿತಗಾರರೆಂದು ಇಲ್ಲಿ ಉಲ್ಲೇಖಿಸಲ್ಪಟ್ಟಿದ್ದರೂ ಅವರ ಕುಶಲತೆಯ ಮರ್ಮವನ್ನು ಎತ್ತಿ ತೋರಿಸಿಲ್ಲ. ಕರ್ನಾಟಕದ ವಿಜಯನಗರ ಆಡಳಿತಕ್ರಮ ಎಲ್ಲಿಯೂ ಉಲ್ಲೇಖವಾಗಿಲ್ಲ.

ಈ ಹೊತ್ತಿಗೆಯಲ್ಲಿ ಒಟ್ಟು ೮ ಅಧ್ಯಾಯಗಳಿವೆ. ಅಧ್ಯಾಯ ಒಂದರಲ್ಲಿ ಪ್ರಸ್ತಾವನೆಯನ್ನು ಒಂದನೆಯ ಅಧ್ಯಾಯವೆಂದು ಪರಿಗಣಿಸಲಾಗಿದೆ. ಇದರಲ್ಲಿ ಆಡಳಿತದ ಒಳ-ಹೊರ ಪದರುಗಳ ಸ್ಥೂಲ ವಿವೇಚನೆ ಇದೆ.

ಅಧ್ಯಾಯ ೨ರಲ್ಲಿ "ಸಂಘಟನೆ" ವಿಷಯದ ವಿವರಣೆ ಇದೆ. ಸುಲಭ ಅರ್ಥದಲ್ಲಿ, ಸಂಘಟನೆ ಎಂಬುದು ಎಲ್ಲ ಸಮಾಜ ಹಂತಗಳಲ್ಲಿ ಕಂಡುಬರುವದು. ಉದಾ: ಸೈನ್ಯ, ಶಾಲೆ, ಆಸ್ಪತ್ರೆ ಮುಂತಾದವುಗಳು. ಈ ಗ್ರಂಥದಲ್ಲಿ "ಸಂಘಟನೆ" ತತ್ವಗಳನ್ನು ಮೂಲ ಸಿದ್ಧಾಂತಗಳನ್ನು ಆಧರಿಸಿ ವಿವೇಚಿಸಲಾಗಿದೆ. ಮುಖ್ಯ ಕಾರ್ಯ ನಿರ್ವಾಹಕ; ಸಲಹಾ ಸಮಿತಿ; ಸಹಾಯಕ ವರ್ಗಗಳು; ಇಲಾಖೆಯ ಕೇಂದ್ರ ಸ್ಥಾನ ಮುಂತಾದ ವಿಷಯಗಳು ಈ ಅಧ್ಯಾಯದಲ್ಲಿ ಚರ್ಚಿಯಾಗಿವೆ.

ಅಧ್ಯಾಯ ೩ ರಲ್ಲಿ ಆಡಳಿತೆಯ ನಾಯಕತ್ವದ ವಿವರಣೆ ಇದೆ. ಆಡಳಿತೆಯ ನಿರ್ವಹಣೆಯು ಸಾಮೂಹಿಕ ಕ್ರಿಯೆಯಾಗಿದೆ. ಒಬ್ಬನಿಂದಲೇ ಆಡಳಿತ ನಿರ್ವಹಣೆಯಾಗಲಾರದು. ಹೀಗೆ ಇಲಾಖೆಯ ನಿರ್ದೇಶನ, ಸಿಬ್ಬಂದಿ, ಸ್ಥಾನ ಭರ್ತಿ, ಆಯವ್ಯಯ ಕಾನೂನು ಮುಂತಾದ ಸಂಗತಿಗಳ ವಿವೇಚನೆ ಇದೆ.

ಅಧ್ಯಾಯ ೪ರಲ್ಲಿ ಸಿಬ್ಬಂದಿಯ ಕಟ್ಟುನಿಟ್ಟಾದ ಕಾರ್ಯನಿರ್ವಹಣೆಯಲ್ಲಿ ಸಂಪರ್ಕ ಸಂಯೋಜನೆ ಮುಂತಾದವುಗಳು ಬರುವವಲ್ಲದೆ ಸಿಬ್ಬಂದಿಯವರ ಬಡ್ತಿ ನಿವೃತ್ತಿಗಳ ವಿಧಿವಿಧಾನಗಳೂ ವಿವರಿಸಲ್ಪಟ್ಟಿವೆ. ಕಾಲಕಾಲಕ್ಕೆ ಸಲ್ಲುವ ನೀತಿ ನಡತೆ, ವೇತನ ಹೆಚ್ಚಳ, ಸರಕಾರಿ ನೌಕರರ ಸಂಘಗಳ ವಿಷಯವೂ ಚರ್ಚಿಯಾಗಿದೆ.

ಅಧ್ಯಾಯ ೫ ರಲ್ಲಿ ಹಣಕಾಸಿನ ಆಡಳಿತೆ ಮಾತ್ರ ವಿವರಣೆಗೊಂಡಿದೆ. ಪ್ರತಿ ಇಲಾಖೆಯಲ್ಲಿ ಒಬ್ಬಿಬ್ಬ ಗುಮಾಸ್ತರು ಮತ್ತು ಒಬ್ಬ ಅಧಿಕಾರಿ ಹಣಕಾಸಿನ ಲೆಕ್ಕ ಪತ್ರಗಳನ್ನು ನೋಡಿಕೊಳ್ಳುವರು. ಸರಕಾರದ ಇಂಥ ಎಲ್ಲ ಇಲಾಖೆಯವರ ಅಂದಾಜು ಪತ್ರಿಕೆಗಳಿಂದ ವಿಧಾನ ಮಂಡಲದಲ್ಲಿ ಆಯವ್ಯಯ ಪತ್ರಿಕೆಯು ಮಂಡಿಸಲ್ಪಡುವದು.

ಅಧ್ಯಾಯ ೬ರಲ್ಲಿ ಆಡಳಿತ ಅಧಿಕಾರಗಳ ವಿವರಣೆ ಇದೆ. ಕಾನೂನು ನ್ಯಾಯಾಧೀಶರ ತೀರ್ಪುಗಳು. ಪ್ರದರ್ಶನ, ಪ್ರಚಾರ ಕಾರ್ಯ, ಸ್ವಯಂಸ್ಥಾಪಿತ ವಾಣಿಜ್ಯ ಸಂಸ್ಥೆಗಳು ಇವು ದಂಡನಾರಹಿತ ಆಡಳಿತ ಅಧಿಕಾರಗಳಿನಿಸಿವೆ. ಮೇಲಾಗಿ ರಾಜಕೀಯ ನಿಯಂತ್ರಣ. ನ್ಯಾಯಾಂಗ ನಿಯಂತ್ರಣಗಳೂ ಆಡಳಿತ ಅಧಿಕಾರಗಳಾಗುತ್ತವೆ.

ಅಧ್ಯಾಯ ೭ರಲ್ಲಿ ಆಡಳಿತೆಯ ಜವಾಬ್ದಾರಿಯ ಬಗ್ಗೆ ಹೇಳಿದೆ. ಶಾಸಕಾಂಗ ನಿಯಂತ್ರಣ ಇದು ಮುಖ್ಯವಾದದ್ದು. ಕಾರ್ಯಾಂಗ ನಿಯಂತ್ರಣ. ನ್ಯಾಯಾಂಗ ನಿಯಂತ್ರಣಗಳು ಆಡಳಿತ ವರ್ಗದವರ ಸೂತ್ರಗಳಾಗಿವೆ.

ಅಧ್ಯಾಯ ೮ ರಲ್ಲಿ ಸ್ಥಳೀಯ ಸರಕಾರದ ಬಗ್ಗೆ ಹೇಳಿದೆ. ಇಂದಿನ ರಾಜ್ಯಗಳು ರಾಷ್ಟ್ರರಾಜ್ಯಗಳು. ಅವು ವಿಶಾಲವಾದ ಭೂಪ್ರದೇಶವನ್ನು ಹೊಂದಿರುತ್ತವೆ. ಹೀಗೆ

ದ್ದಾಗ ಕಾರ್ಯದಕ್ಷತೆ ಸರಿಯಾಗಿ ಆಗಲಾರದು. ಆದ್ದರಿಂದ ರಾಜ್ಯವನ್ನು ಅನೇಕ ಭಾಗಗಳಲ್ಲಿ ವಿಂಗಡಿಸಿ, ಅಧಿಕಾರಗಳ ವಿಕೇಂದ್ರೀಕರಣ ಮಾಡಿ ಸ್ಥಳೀಯ ಸಮಸ್ಯೆಗಳನ್ನು ನೇರವಾಗಿ ಬಗೆಹರಿಸಿಕೊಳ್ಳಲಾಗುತ್ತದೆ. ಇವಕ್ಕೆ ಸ್ಥಳೀಯ ಸರಕಾರಗಳೆಂಬ ಹೆಸರು.

ಗ್ರಂಥಕರ್ತರು ಈ ಪುಸ್ತಕ ಬರೆಯಲು ವಿಶೇಷ ಶ್ರಮವಹಿಸಿದ್ದಾರೆಂಬುದು ಆಧಾರ ಗ್ರಂಥಗಳ ಪಟ್ಟಿಯಿಂದ ತಿಳಿದು ಬರುತ್ತದೆ. ಆ ಪಟ್ಟಿಯಲ್ಲಿ ೩೦ ಗ್ರಂಥಗಳ ಹೆಸರುಗಳಿವೆ. ಕೊನೆಗೆ ಗ್ರಂಥಕರ್ತರು ಒಂದು ಶಬ್ದಕೋಶವನ್ನೂ ಕೊಟ್ಟಿದ್ದಾರೆ. ಇಂದಿನ ತನಕ ಕೇವಲ ಇಂಗ್ಲೀಷನ್ನೇ ಓದಿ ಬರೆದು ರೂಢಿಸಿಕೊಂಡವರಿಗೆ ಈ ಶಬ್ದಗಳು ಅರ್ಥಸೂಚಿಯಾಗಿವೆ. ಆದರೂ ಪಾರಿಭಾಷಿಕ ಶಬ್ದಗಳು ಮನಟ್ಟಾಗುವ ತನಕ ವಿಷಯ ಸಂಗ್ರಹ ಚೆನ್ನಾಗಿ ಆಗಲಿಕ್ಕಿಲ್ಲ.

ಈ ಗ್ರಂಥಕ್ಕೆ ಮುನ್ನುಡಿ, ಹಾರೈಕೆ ಮತ್ತು ಮೊದಲು ಮಾತುಗಳಿವೆ. ಮುನ್ನುಡಿಯನ್ನು ಅಂದಿನ ಉಪಕುಲಪತಿ. ಕನ್ನಡ ವಿದ್ವಾಂಸರಾದ ಜವರೇಗೌಡರು ಬರೆದಿದ್ದಾರೆ, ಯಶಸ್ಸುಕೋರಿ ಸುಪ್ರಸಿದ್ಧ ರಾಜಕೀಯ ಶಾಸ್ತ್ರಜ್ಞ ಶ್ರೀ ಕೆ. ಬಿ. ವಾಯ್ ತೋಟಪ್ಪನವರು, ಪ್ರಿನ್ಸಿಪಾಲ ಮಾನಸ ಗಂಗೋತ್ರಿ ಮೈಸೂರು ಇವರೂ ಹಾರೈಕೆಯನ್ನು ಬರೆದಿದ್ದಾರೆ. ಇಂಥ ಮಹನೀಯರ ಮಾತುಗಳಿಂದ ಗ್ರಂಥಕ್ಕೆ ಹೆಚ್ಚಿನ ಕಳೆ ಬಂದಿದೆ.

ಹೆಚ್ಚೇನು! ಈ ಗ್ರಂಥವು ಉಪಯುಕ್ತವಾದದ್ದೆಂದು ಸ್ವಯಂವೇದಿತ. ವಿಷಯ ಸಂಗ್ರಹಣೆ, ಕ್ರಮಬದ್ಧ ನಿರೂಪಣೆ, ಸಮರ್ಪಕ ವಿವರಣೆಗಳಿಂದ ಇದು ಸಮಯೋಚಿತ ಮತ್ತು ಪ್ರಯೋಜನಕಾರಿ ಪ್ರಕಟಣೆಯಾಗಿದೆ.

‘ಕಿತ್ತೂರು ನಾಡಿನ ಇತಿಹಾಸ ಹಾಗೂ ಸಂಸ್ಕೃತಿ’ ಪುಸ್ತಕವಿಮರ್ಶೆ:ಒಂದು ಪ್ರತಿಕ್ರಿಯೆ

● ಎಸ್. ಕೆ. ಕೊಪ್ಪಾ

ಮಾನವಿಕ ಭಾರತಿ ಸಂ. ೧–೨ರಲ್ಲಿ ಪ್ರಕಟವಾದ ವಸಂತ ಪಾಟೀಲರ ‘ಕಿತ್ತೂರು ನಾಡಿನ ಇತಿಹಾಸ ಹಾಗು ಸಂಸ್ಕೃತಿ’ ಪುಸ್ತಕ ವಿಮರ್ಶೆ ಓದಿ, ಇದೂ ವಿಮರ್ಶೆಯೇ ಎನ್ನಿಸಿತು. ಇಲ್ಲಿ ಒಂದು ಮಾತು ಮೊದಲಿಗೇ ಹೇಳಿಬಿಡಬೇಕೆಂದರೆ ಇದು ವಿಮರ್ಶೆ ಯಂತೂ ಅಲ್ಲ. ವಿಮರ್ಶೆಯಲ್ಲಿ ಸಮರ್ಪಕ ಸಹಾನುಭೂತಿ ಮತ್ತು ಗ್ರಹಣಸಾಮರ್ಥ್ಯ ದೊಡನೆ ಕೃತಿಯನ್ನು ಲೇಖಕನ ಅನುಭವದ ಸಮಗ್ರರೂಪವೆಂಬಂತೆ ಗಮನಿಸಬೇಕೇ ಹೊರತು ಕೇವಲ ಅಲ್ಲಲ್ಲಿಯ ಅಂಶ ಅಂಶಗಳನ್ನು ಮಾತ್ರ ಅಲ್ಲ. ವಸ್ತುನಿಷ್ಠತೆಯ ಅಭಾವದಿಂದ ವಿಮರ್ಶೆ ಮಾಡ ಹೊರಟ ಪಾಟೀಲರು. ಮೊದಲಿಗೆ ಸಾದರ ಸ್ವೀಕಾರ ಮತ್ತು ಅಲ್ಲಿಯ ‘ಒಪ್ಪ’ ಮುನ್ನುಡಿಯಿಂದ ಪುಸ್ತಕವನ್ನು ಪರಿಚಯಿಸುತ್ತ ಲೇಖನಗಳ ಪುಟ ಸಂಖ್ಯೆ. ದೋಷ ಮತ್ತು ಲೇಖಕರ ವೈಯಕ್ತಿಕದ್ವೇಷಗಳನ್ನು ಎತ್ತಿತೋರಿಸುವುದ ರಲ್ಲಿಯೇ ಮುಂದುವರಿಸುವ ಈ ಲೇಖನ (ವಿಮರ್ಶೆ)ವನ್ನು ಪುಸ್ತಕ ಪರಿಚಯವೆಂದೂ ಹೇಳಲು ಬಾರದು. ಯಾಕೆಂದರೆ ಈ ವಿಮರ್ಶೆ ಓದುವುದರಿಂದ ಪುಸ್ತಕಪರಿಚಯವಾಗು ವದಕ್ಕಿಂತ ಪುಸ್ತಕ ದ್ವೇಷವೇ ಹೆಚ್ಚಾಗುವ ಸಂಭವವಿದೆ. ಈ ನಮೂನೆಯ ವಿಮರ್ಶೆಗೆ ನಮ್ಮಲ್ಲಿ ಏನನ್ನಬೇಕೆಂಬುದು ಸಮಸ್ಯೆಯಾದರೂ ಆಂಗ್ಲಭಾಷೆಯಲ್ಲಿ ಇಂಥವುಗಳನ್ನು ‘ಪ್ರಿಗ್’ (prig) ಗುಂಪಿಗೆ ಸೇರಿಸುತ್ತಾರಂತೆ ! ವಸಂತ ಪಾಟೀಲರು ಕೇವಲ ದೋಷ ಗಳನ್ನೇ ಹುಡುಕುವ ಭರದಲ್ಲಿ ಲೇಖಕರ ಅಭಿಪ್ರಾಯಗಳಿಗೆಲ್ಲ ತಮ್ಮದೇ ಆದ ಅರ್ಥ ಹಚ್ಚುವ ವ್ಯರ್ಥಪ್ರಯತ್ನದಿಂದ ಹೆಚ್ಚುಕಡಿಮೆ ಇಡೀ ಪುಸ್ತಕವನ್ನು ವಿರೋಧಾಭಾಸಕ್ಕೆ ಗುರಿಮಾಡುತ್ತಾರೆ.

ಏಳು ಉಪನ್ಯಾಸಗಳನ್ನು ಹೊಂದಿದ ಈ ಪುಸ್ತಕದ ಮೊದಲ ಲೇಖನವು ಎಸ್. ಎಲ್. ಶಾಂತಕುಮಾರಿಯವರ ‘ಪ್ರಾಚೀನ ಕಿತ್ತೂರು ನಾಡು’ ಎಂಬುದು. ಇಲ್ಲಿ ಪ್ರಾರಂಭಕ್ಕೆ ಬರುವ ವಿಸ್ತಾರವಾದ ಪ್ರಸ್ತಾವನಾರೂಪದ ಸಾಮಾನ್ಯ ಕರ್ನಾಟಕದ ಇತಿಹಾಸ ಎಷ್ಟು ಅನವಶ್ಯಕವೋ ವಿಮರ್ಶಕರ ವಿಮರ್ಶೆಗೆ ಅಷ್ಟೇ ಅನವಶ್ಯಕ ಈ ಭಾಗ.

'ಕಿತ್ತೂರು' ಶಬ್ದದ ಉತ್ಪತ್ತಿಯ ಬಗೆಗೆ ಹೇಳಲು ಶ್ರಮವಹಿಸದೆ ಲೇಖಿಕರು ಇದು "ದುಸ್ತರ" (ಪು.೩) ಎಂದು ಕೈಕೊಡವಿರುವರು. ಸುಮಾರು ಗೋವೆ ಕದಂಬರಾಜ ಜಯಕೇಶಿಯ ಕಾಲದ ಒಂದು ಶಾಸನದಲ್ಲಿ ಈ ಊರಿನ ಹೆಸರು ಕಿತ್ತೂರು ಎಂದೇ ಬರುತ್ತದೆ. (ಪು. ೩). ಎಂದು (ಪ್ರಥಮ) ಉಲ್ಲೇಖವನ್ನು ತೋರಿಸಿರುವರು. ಧಾರವಾಡ ಗೆಜೆಟಿಯರಿನಲ್ಲಿ ಕಿತ್ತೂರಿಗೆ 'ಗಿಜಗನ ಹಳ್ಳಿ' ಎಂದು ಹೆಸರು ಇದ್ದಿತು ಎಂಬುದಕ್ಕೆ ಇವರು ಆಧಾರ ಕೇಳುವರು. ೯ನೆಯ ಶತಮಾನಕ್ಕೆ ಸೇರಿದ ರಾಷ್ಟ್ರಕೂಟರ ಶಾಸನಗಳೊಂದೆರಡು ಇಲ್ಲಿ ದೊರೆತಿರುವುದರಿಂದ ಈ ಹೊತ್ತಿಗಾಗಲೇ ಈ ಊರು ಅಸ್ತಿತ್ವದಲ್ಲಿದ್ದಿತೆಂದು (ಪು. ೩) ಊಹಿಸಿರುವರು. ಆ ಶಾಸನಗಳು ಒಂದೋ ಅಥವಾ ಎರಡೋ ಅವನ್ನೂ ಲೇಖಿಕಿಯರು ಖಚಿತಪಡಿಸಿಕೊಂಡಂತಿಲ್ಲ."—ಎಂದು ತಮ್ಮ ವಿಮರ್ಶಾವೈಖರಿಯ ಪರಿಚಯ ಮಾಡಿಕೊಡುತ್ತ:

"ಹದಿನಾರನೆಯ ಶತಮಾನದ ಕೊನೆಯಲ್ಲಿ ಕಲಬುರ್ಗಿ ಸೀಮೆಯಿಂದ ವಿಜಾಪೂರದ ಸೈನ್ಯದೊಡನೆ ಜಿನಿವಾರರಂತೆ (ಪು. ೧೨) ಹಿರೇಮಲ್ಲ. ಕಿರೇಮಲ್ಲ ಸಹೋದರರು ಸಂಪ ಗಾಂವಿಗೆ ಬಂದು ನೆಲಸಿದರೆಂದು ಮೂಲಪುರುಷರ ಬಗೆಗೆ ಉಲ್ಲೇಖಿಸಲಾಗಿದೆ. ಸುಮಾರು ಹದಿನೇಳನೆಯ ಶತಮಾನದ ಅಂತ್ಯಭಾಗದಲ್ಲಿ ವೀರಮಲ್ಲಪ್ಪ (ಪು. ೧೨) ಪ್ರಬಲ ದೇಸಾಯಿಯರಾದರು. ಮುಂದೆ ಸಂಪಗಾಂವ ಕೇಂದ್ರಾಡಳಿತವನ್ನು 'ಕಿತ್ತೂ' ಈಗಿನ ಕಿತ್ತೂರಿಗೆ ಈ ದೇಸಾಯಿ ಮನೆತನದವರು ಸ್ಥಳಾಂತರಿಸಿರಬಹುದು. ಈ ವಿಷಯ ಸಿ. ವಿ. ಮಠದ ಅವರ 'ಕಿತ್ತೂರು ನಾಡಿನ ವೀರರು' ಎಂಬ ಲೇಖನದಲ್ಲಿ ಬರುವುದು. (ಪು. ೮೪)" ಎಂದು ಹೇಳುತ್ತಾರೆ. ಅಂದರೆ ಇನ್ನುಳಿದ ಕಿತ್ತೂರು ಇತಿಹಾಸ ಲೇಖನ ಪುಸ್ತಕಗಳಲ್ಲಿ ಈ ವಿಷಯ ಬರಲಾರದು! ಇನ್ನು ಕೊನೆಗೆ ಅಲ್ಲಿಲ್ಲದ ಪವಾಡಗಳನ್ನು ತಂದು ಅವುಗಳ ಐತಿಹಾಸಿಕತೆ ಮತ್ತು ಶಾಸ್ತ್ರೀಯತೆ ಪ್ರಶ್ನಿಸುವದಂತೂ ಪ್ರಾಸಂಗಿಕತನ ವಾಗದು. ಮಾನುಷ ಪ್ರಮಾಣಗಳ ಅಭಾವವಿರುವಾಗ ನ್ಯಾಯಪ್ರತಿಪಾದನೆಗಾಗಿ ವಿವಿಧ "ದಿವ್ಯ"ಗಳನ್ನು ನಮ್ಮ ಪೂರ್ವಜರು ನಡೆಸುತ್ತಿರುವುದಾಗಿ ಪ್ರಾಚೀನ ಕನ್ನಡ ಶಾಸನ ಮತ್ತು ಕಾವ್ಯಗಳಿಂದ ತಿಳಿದುಬರುತ್ತದಾದರೂ ಅವುಗಳನ್ನು ಅವರು ಪವಾಡ ಎಂದು ಎಲ್ಲಿಯೂ ಕರೆದಿಲ್ಲ. ಅಲ್ಲದೇ ಅವುಗಳನ್ನು ನಡೆಸುವಲ್ಲಿ ಕೆಲವು ನಿರ್ದಿಷ್ಟ ವಿಧಾನಗಳಿರುವುದು ತಿಳಿದುಬರುತ್ತದೆ. (ನೋಡಿ—ಡಾ. ಎಂ. ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಪು. ೧೮೬). ಆದರೆ ಅವುಗಳ ಸತ್ಯಾಸತ್ಯತೆ ಏಷ್ಟೆಂಬುದು ವಿಚಾರಣೀಯ.

ಎರಡನೆಯ ಲೇಖನವು ಪ್ರೊ. ಎ. ಎಂ. ರಾಜಶೇಖರಯ್ಯನವರ "ಕರ್ನಾಟಕದಲ್ಲಿ ಬ್ರಿಟಿಶರ ಆಳಿಕೆಯ ಆರಂಭ. "ವಿಮರ್ಶಕರ ಹೇಳಿಕೆಯಂತೆ ಆರಂಭದಲ್ಲಿ ಕರ್ನಾಟಕದ "ಭವ್ಯ" ಪರಂಪರೆಯನ್ನು ವಿವರಿಸುತ್ತ ಕನ್ನಡಿಗರ ಸ್ವಾತಂತ್ರ್ಯಪ್ರಿಯತೆಯನ್ನು ಆಧಾರ ಗಳೊಂದಿಗೆ ಇಲ್ಲಿ ವಿವರಿಸಲಾಗಿದೆ. (ಉಲ್ಲೇಖಿಸಲಾಗಿದೆ.) ಇಲ್ಲಿ ವಿಮರ್ಶಕರಿಗೆ

ಬ್ರಿಟಿಷರ ಆಳಿಕೆಯ ಆರಂಭಕ್ಕೆ ಕರ್ನಾಟಕದ 'ಭವ್ಯಪರಂಪರೆ' ಅನವಶ್ಯಕವೆನ್ನಿಸದಿರುವುದು ಸೋಜಿಗವಾದುದು. ಬಂಧನವು ಹೊಲ್ಲ" ಎಂದ ಸರ್ವಜ್ಞನು:

ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ
ಅಡಿಗಶ್ವಮೇಧ ಫಲ, ಸ್ವಾಮಿಕಾರ್ಯಕ್ಕೆ
ಮಡಿಯಲೇಬೇಕು ಸರ್ವಜ್ಞ,

ಈ ವಚನದಲ್ಲಿ ಕರ್ನಾಟಕದ ಸಂಸ್ಕೃತಿಯ ಪರಂಪರೆಯನ್ನು ವಿವರಿಸುವುದರ ಜೊತೆಗೆ ಆದರ ಶೂರಪರಂಪರೆ ಹಾಗೂ ಸ್ವಾಮಿನಿಷ್ಠೆಯನ್ನು ಹೀಗೆ ಹೊಗಳಿದ್ದಾನೆ" ಎನ್ನುವ ಲೇಖಕರ ಮಾತನ್ನು ಏನೋ ತಪ್ಪು ಕಂಡವರಂತೆ ವಿಮರ್ಶಕರು ಹೇಳದೆ ಮುಚ್ಚಿ ಜಾರಿಕೊಳ್ಳುತ್ತಾರೆ. ಕಾರಣ ಸ್ವಾಮಿಕಾರ್ಯಕ್ಕೆ ಹೋರಾಡುವ ವೀರ ಪರಂಪರೆ ಸಂಸ್ಕೃತಿಯ ಪರಂಪರೆ ಹೇಗಾಗುತ್ತದೆ ತಿಳಿಯುವುದಿಲ್ಲವಲ್ಲ ?

ಎಲ್ಲರಲ್ಲಿಯೂ ದೋಷಗಳನ್ನೇ ಕಾಣ ಹೊರಟ ವಿಮರ್ಶಕರು ಇಲ್ಲಿ ಯಾವ ದೋಷಗಳನ್ನು ಕಾಣದ ಹೊಗಳು ಭಟ್ಟಂಗಿಗಳಾಗುತ್ತಾರೆ. "ದೇಶ ಭಕ್ತಿ ಹಾಗು ಶೌರ್ಯ ಕೇವಲ ರಾಣಿಯರಿಗಷ್ಟೇ ಸೀಮಿತವಾಗಿರದೆ ಸಾಮಾನ್ಯ ಹೆಣ್ಣುಮಕ್ಕಳೂ ಅದರಲ್ಲಿ ಪಾಲ್ಗೊಂಡುದಕ್ಕೆ ಚಿತ್ರದುರ್ಗದ ಓಬವ್ವನ ದೃಷ್ಟಾಂತವನ್ನು ಕೊಡಬಹುದು. ಬಹುಶಃ ಇದೇ ಪರಂಪರೆಗನುಗುಣವಾಗಿ ಹನ್ನೆರಡನೆಯ ಶತಮಾನದಲ್ಲಿ ಬಸವೇಶ್ವರರು ಮಹಿಳಾ ಸ್ವಾತಂತ್ರ್ಯವನ್ನು ಎತ್ತಿಹಿಡಿದಿರಬೇಕು" (ಪು. ೩೮-೩೯). ಇದು ವಿಮರ್ಶಕರ ಕಣ್ಣಿಗೆ ಬಿದ್ದೇ ಇಲ್ಲ! ಇಲ್ಲಿಯ ಮಹಿಳಾ ಸ್ವಾತಂತ್ರ್ಯ ಯೋಧೆಯರಿಗೂ ಮಹಿಳಾಸ್ವಾತಂತ್ರ್ಯಕ್ಕೂ ಇರುವ ವ್ಯತ್ಯಾಸವನ್ನು ಓದುಗರೇ ನಿರ್ಣಯಿಸಬೇಕು. ಇದೇ ಪರಂಪರೆಗೆ (ಬೆಳವಡಿ ಮಲ್ಲಮ್ಮ, ಕಿತ್ತೂರು ಚೆನ್ನಮ್ಮ, ಓಬವ್ವ) ಅನುಗುಣವಾಗಿ ಹನ್ನೆರಡನೆಯ ಶತಮಾನದಲ್ಲಿ ಬಸವೇಶ್ವರರು ಮಹಿಳಾಸ್ವಾತಂತ್ರ್ಯವನ್ನು ಎತ್ತಿಹಿಡಿದರಂತೆ! ಎಂಥ ಅಸಂಬದ್ಧವಾದ ಮಾತು. "ಕೂಟಕ್ಕೆ ಸತಿಪತಿಯಲ್ಲದೆ ಬೂಟಕ್ಕೆ ಸತಿಪತಿಯೇ ಮಾರಯ್ಯ" ಎಂದು ತನ್ನ ಪತಿಗೆ ಹೇಳುವ ವಿಚಾರ ಸ್ವಾತಂತ್ರ್ಯದ ಶರಣೆ ಲಕ್ಕಮ್ಮಗೂ ಇಲ್ಲಿಯ ಸ್ವಾತಂತ್ರ್ಯ ಯೋಧೆಯರಿಗೂ ಸಾಕಷ್ಟು ಭಿನ್ನತೆಯಿದೆ. ಇದು ಕನ್ನಡಿಗರ ಸ್ವಾತಂತ್ರ್ಯಪ್ರಿಯತೆಯನ್ನು ಆಧಾರಸಹಿತವಾಗಿ ಹೇಳುವ ಭವ್ಯಪರಂಪರೆ! ಇನ್ನು ಮರಾಠರು ಹಾಗೂ ನಿಜಾಮನು ಹೈದರಾಲಿ ಅಥವಾ ಟಿಪ್ಪುವಿಗೆ ಬ್ರಿಟಿಷರ ವಿರುದ್ಧ ಹೋರಾಡಲು ಸಹಾಯ ಮಾಡಿದ್ದರೆ ಭಾರತದ ಚರಿತ್ರೆಯೇ ಬೇರೆಯಾಗುತ್ತಿದ್ದಿತೇನೊ" (ಪು. ೪೧) ಎಂದು ಲೇಖಕರು ಹೊಸತನವನ್ನು ನಿರೀಕ್ಷಿಸಿದಂತಿದೆ, ಎನ್ನುವ ವಿಮರ್ಶಕರ ಮಾತಂತೂ ಜಾಣತನವಾಗಲಾರದು. ಯಾಕೆಂದರೆ ಈಗ ಘಟಿಸಿಹೋದ ಸಂಗತಿಗಳೆಲ್ಲ ಬೇರೆ ರೀತಿಯಾಗಿ ನಡೆದಿದ್ದರೆ ಅವು ಬೇರೆಯಾಗಿಯೇ ಇರುತ್ತಿದ್ದವು ಎಂಬುದನ್ನು ಯಾರೂ ಒತ್ತಿ ಹೇಳಬೇಕಾಗಿಲ್ಲ. ಕೊನೆಗೆ ೧೮೫೭ರ ಸಿಪಾಯಿ ದಂಗೆಗಿಂತಲೂ ಪೂರ್ವದಲ್ಲಿ ೧೮೨೪ ಅಕ್ಟೋಬರ ೨೩ರಂದು "ಕಿತ್ತೂರಕಿಡಿ" ಹಾರಿ ೧೯೪೨ರ ಚಲೇಜಾವ ಚಳುವಳಿಯ ವರೆಗೆ

ಈ ಲೇಖನ ಓದುಗನನ್ನು ಕೈ ಹಿಡಿದು ಕರೆತರುತ್ತದೆ." ಎನ್ನುವಲ್ಲಿಯಂತೂ ತಮ್ಮ ಪೂರ್ವಗ್ರಹ ಪೀಡಿತ ವ್ಯಕ್ತಿತ್ವವನ್ನು ಸ್ಪಷ್ಟವಾಗಿ ತೆರೆದಿಡುತ್ತಾರೆ.

ಈ ಪುಸ್ತಕದ ಮೂರು ಮತ್ತು ನಾಲ್ಕನೆಯ ಲೇಖನಗಳಾದ "ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಆರಂಭ ಮತ್ತು "ಕಿತ್ತೂರು ನಾಡಿನ ವೀರರು" ಲೇಖನಗಳನ್ನು ಕ್ರಮವಾಗಿ ಸೂರ್ಯನಾಥ ಕಾಮತ್, ಸಿ. ವಿ. ಮಠದ ಅವರು ಬರೆದಿದ್ದು; ಇಲ್ಲೆಲ್ಲ ವಿಮರ್ಶಕರು ಮೂಲಪಠ್ಯದ ಸಂಗ್ರಹವನ್ನು ತಮ್ಮ ಒಂದೆರಡು ಅಭಿಪ್ರಾಯಗಳೊಂದಿಗೆ ಪರಿಚಯಿಸುವ ವೈಖರಿಯನ್ನು ನೋಡಿದರೆ ಮೂಲ ಲೇಖನಗಳನ್ನೇ ಓದುವುದು ಒಳ್ಳೆಯದೆನಿಸುತ್ತದೆ. ಸೂರ್ಯನಾಥ ಕಾಮತ್‌ರ ಲೇಖನವು ಬಂಡಾಯಗಳ ಬಗ್ಗೆ ಸಂಕ್ಷಿಪ್ತ ವಿವರಣೆ ಕೊಡುತ್ತಿದ್ದು "ಕಿತ್ತೂರಿಗಷ್ಟೇ ವಿಶೇಷವಾಗಿ ಸಂಬಂಧಿಸಿರದೇ ಸಾಮಾನ್ಯವಾಗಿ ಭಾರತಕ್ಕೆ ಸಂಬಂಧಿಸಿದ ವಿವರಣೆಗಳಿಲ್ಲಿವೆ" ಎಂದು ವಿಮರ್ಶಕರು ಏನಾದರೂ ದೋಷವನ್ನು ಕಂಡೆಕಾಣುತ್ತಾರೆ. ಬಹುಶಃ ಕಿತ್ತೂರು, ಕರ್ನಾಟಕ ಮತ್ತು ಭಾರತವನ್ನು ಬಿಟ್ಟು ಎಲ್ಲಿಯೋ ಇರುವಂತೆ ಅವರು ಭಾವಿಸಿದಂತೆ ಕಾಣುತ್ತದೆ. ಅಖಂಡ ಭಾರತದ ಚರಿತ್ರೆಯನ್ನು ತೆಗೆದು ನೋಡಿದಾಗ ಕಾಣುವುದು "ಬಹುತ್ವದಲ್ಲಿ ಏಕತೆ". ಇಲ್ಲಿ ನಡೆದ ಪ್ರತಿಘಟನೆಗಳಿಗೆಲ್ಲ ಭಾರತೀಯ ಹಿನ್ನೆಲೆಯಿದೆ. ಇದನ್ನು ವಿಮರ್ಶಕರು ಗಮನಿಸುವುದೇ ಇಲ್ಲ. ಅದಕ್ಕೆಲ್ಲ ಅವರ ಸೀಮಿತ ದೃಷ್ಟಿಕೋನವೇ ಕಾರಣವಾಗಿದೆ. ಇನ್ನು ಸಿ. ವ್ಹಿ. ಮಠದ ಲೇಖನದಲ್ಲಿ ವಿಮರ್ಶಕರು (ಕಿತ್ತೂರು) ವಿವರಣೆಗೆ ಮುಂಚೆ ಕಿತ್ತೂರ ಸಂಸ್ಥಾನದ ಸ್ಥಾಪನೆಯ ವಿವರಣೆ ಇದೆ" ಎನ್ನುತ್ತಾರೆ. ಸದ್ಯ ಪುಣ್ಯಕ್ಕೆ ಇಲ್ಲಿ ಈ ವಿಷಯ ಎಸ್. ಎಲ್. ಶಾಂತಕುಮಾರಿಯವರ "ಪ್ರಾಚೀನ ಕಿತ್ತೂರು ನಾಡು" ಎಂಬ ಲೇಖನದಲ್ಲಿ ಬರುವುದು" ಎಂದಿಲ್ಲ.

ಐದನೆಯ ಲೇಖನ ಪ್ರೊ. ಎಸ್. ಶೆಟ್ಟರ್ ಅವರ "ಕಿತ್ತೂರು ಸಂಸ್ಥಾನದ ಇತಿಹಾಸ." ವಿಮರ್ಶಕರು ವಿಮರ್ಶೆಯಲ್ಲಿ "ಈ ಲೇಖನವು ಸಂಪೂರ್ಣ ವಿವಾದಾತ್ಮಕವಾಗಿದ್ದು, ಇಲ್ಲಿಯವರೆಗೆ ಕಿತ್ತೂರಿನ ಬಗೆಗೆ ಪ್ರಚಲಿತವಿದ್ದ ಎಲ್ಲ ಇತಿಹಾಸವನ್ನೇ ಆಹ್ವಾನಿಸುವ ಎದೆಗಾರಿಕೆ ತೋರಿಸುವ ಲೇಖನವಿದ್ದಂತಿದೆ. ಲೇಖಕರು ಇದನ್ನು ಪ್ರತ್ಯೇಕವಾಗಿ ಸ್ವತಃ ಪ್ರಕಾಶನಗೊಳಿಸಿದ್ದರೆ ಮುಕ್ತವಿಮರ್ಶೆಗೆ ಅನುವಾಗುತ್ತಿದ್ದಿತು." ಎನ್ನುವಲ್ಲಿ ವಿಮರ್ಶಕರು ತಾವು ಮುಕ್ತ ವಿಮರ್ಶೆಮಾಡಿಲ್ಲದಿರುವುದನ್ನು ಒಪ್ಪಿಕೊಳ್ಳುತ್ತಾರೆ. "ಲೇಖನವು ಪ್ರಾರಂಭಕ್ಕೆ ಮತ್ತೊಬ್ಬರ ಮೇಲೆ ದೋಷಾರೋಪಣೆ ಮಾಡಹೊರಟಂತಿದೆ" ಎನ್ನುವ ಪಾಟೀಲರು ತಾವು ವಿಮರ್ಶೆ ಬರೆಯುವ ಪ್ರಜ್ಞೆ, ಇಲ್ಲದೇ ದೋಷಾರೋಪಣೆ ಮಾಡಹೊರಟದ್ದನ್ನು ಮರೆತು ಬೇರೆಯವರಿಗೆ ನೀತಿ ಹೇಳುವಂತಿದೆ.

ಮಲ್ಲಸರ್ಜನನು ಒಂದೆಡೆ ಮರಾಠರು, ಮತ್ತೊಂದೆಡೆ ನಿಜಾಮ, ಮಗುದೊಂದೆಡೆ ಟಿಪ್ಪುಸುಲ್ತಾನ ಹಾಗೂ ಬ್ರಿಟಿಷರ ಮಧ್ಯದಲ್ಲಿ "ರಾಜಕೀಯ ಚದುರಂಗದ ಆಟ" ಆಡಿ,

ಸಮಯ ಸಾಧಿಸಿ, ಸಂಸ್ಥಾನ ದಕ್ಕಿಸಿಕೊಂಡ–ಎಂದು ಲೇಖಕರು ಮಲ್ಲಸರ್ಜನ ಚರಿತ್ರೆಯನ್ನು ನಿಕೃಷ್ಟಗೊಳಿಸಿರುವರು. ಸಾಮೋಪಾಯ, ದಂಡೋಪಾಯ ಮುಂತಾದ ರಾಜಕೀಯ ಮುತ್ಸದ್ದಿತನ ತಳೆಯಬೇಕಾದುದು ರಾಜಕಾರಣಿಗಳ ಕರ್ತವ್ಯ. ಸಮಯ ಸಾಧಕತನ ಮಾಡಿ ಮಲ್ಲಸರ್ಜನ ಎರಡನೆಯವರದನ್ನೇನೂ ಅಪಹರಿಸಲಿಲ್ಲವಲ್ಲ? ಎಂದು ವಿಮರ್ಶಕರು ಜಾಣತನದ ಲಾಗ ಹೊಡೆಯುವುದಕ್ಕೆ ಏನನ್ನಬೇಕೋ ತಿಳಿಯುವುದಿಲ್ಲ. "ರಾಜಕೀಯ ಚದುರಂಗದಾಟ". "ರಾಜಕೀಯ ಮುತ್ಸದ್ದಿತನ"ಗಳಲ್ಲಿ ಭಿನ್ನತೆ ಕಲ್ಪಿಸ ಹೊರಟ ಪಾಟೀಲರು ಚದರಂಗದಾಟವೂ ಮುತ್ಸದ್ದಿತನದ್ದೆಂಬುದನ್ನು ಅರಿತಿಲ್ಲ. ಅಲ್ಲದೆ ಇಲ್ಲಿ ಕರ್ತವ್ಯ. ಅಪಹರಣ, ಉತ್ಕೃಷ್ಟ ಮತ್ತು ನಿಕೃಷ್ಟಗಳ ಪ್ರಶ್ನೆಯೇ ಇಲ್ಲ. ಸಮಯ ಸಾಧಿಸಿ ಸಂಸ್ಥಾನ ದಕ್ಕಿಸಿಕೊಂಡದ್ದು ಸತ್ಯ ಅಷ್ಟೆ. ಇನ್ನು ಶಿವಲಿಂಗರುದ್ರಸರ್ಜನ ರಿಚಿತ್ರೆಯನ್ನಂತೂ ಪೂರ್ತಿ ಮುಗಿಸಿಬಿಟ್ಟಿರುವರು! ಉಪಯೋಗಿಸಿದ ಶೈಲಿ. ಬಳಸಿದ ಶಬ್ದಗಳಂತೂ ತೀರ ಕನಿಷ್ಟ. ಒಬ್ಬ ಬಡಕೂಲಿಕಾರನ ಮನೆತನದ ಚಿತ್ರಣವಿದ್ದಂತಿದೆ." ಎನ್ನುವಲ್ಲಿಯಂತೂ ಪಾಟೀಲರು ಸತ್ರಸಂಪ್ರದಾಯದ ರಾಜಾಶ್ರಯ ಕವಿಗಳ ಭವ್ಯದಿವ್ಯ ಪರಂಪರೆಗೆ ಜೋತುಬೀಳಬೇಕು ಎನ್ನುವಂತಿದೆ. ರಾಜಮನೆತನ ಸಕಲಭೋಗಗಳಿಂದ ತುಂಬಿತುಳುಕುತ್ತಿದ್ದರೂ ಅಲ್ಲಿಯ ರೋಗಗ್ರಸ್ತ ಅನಿವಾರ್ಯ ಪರಿಸ್ಥಿತಿ (ರೋಗ ಪೀಡಿತ ದೇಸಾಯಿ. ಹನ್ನೊಂದು ವರ್ಷದ ಅವನ ಹೆಂಡತಿ, ಮಕ್ಕಳಿಲ್ಲದ ಮನೆ, ವಿಧವೆಯರಾದ ಮಲತಾಯಿ ಮತ್ತು ಅತ್ತಿಗೆಯರು)ಗಳಿಂದ ಆದು ಬಡ ಮನೆತನವಂತೆ ಕಂಡರೆ ಆಶ್ಚರ್ಯಪಡಬೇಕಾದುದು ಏನೂ ಇಲ್ಲವಲ್ಲ.

"ದೇಸಾಯಿ ಸಾಯಲು ಎರಡು ತಿಂಗಳಿರುವಾಗ" (ಪು. ೧೧೫) ಎಂದು ತೀರ ಕನಿಷ್ಠ ರೀತಿಯಲ್ಲಿ ಶಬ್ದ ಬಳಸಿರುವರು ಎನ್ನುವಲ್ಲಿಯಂತೂ ವಿಮರ್ಶಕರ ವಿಮರ್ಶೆ ತೀರ ಚಿಲ್ಲರೆಯಾಗಿಬಿಡುತ್ತದೆ. ಅದೃಷ್ಟವಶಾತ್ ಇಲ್ಲಿ ಅವರು 'ಚೆನ್ನಮ್ಮ' ಎಂಬುದು 'ಚೆನ್ನಮ್ಮನವರು' ಅನ್ನಲಿಲ್ಲ–ಎಂದು ಅಂದಿಲ್ಲ. ತದ್ವಿರುದ್ಧ ವಿಮರ್ಶೆಮಾಡ ಹೊರಟ ವಿಮರ್ಶಕರಿಗೆ ಇಡೀ ಲೇಖನದಲ್ಲಿ ಒಂದಕ್ಕೊಂದು ತದ್ವಿರುದ್ಧ ವಿಚಾರಗಳು ಕಂಡದ್ದರಲ್ಲಿ ವಿಚಿತ್ರವೇನಿಲ್ಲ.

ಓಂದೆ ಭವಿಷತ್ತಿನ ಚಿಂತೆ ಇರಲಿಲ್ಲ ಎಂದು ಹೇಳಿದ ಲೇಖಕರು–"ಜೀವನದ ಆಶೆ ಪೂರ್ಣ ಕೈಬಿಟ್ಟಾಗ, ಹಿತಸಂಬಂಧಿಗಳ ಆಗ್ರಹ ಹೆಚ್ಚಿ (ಈ ಮಾತನ್ನು ವಿಮರ್ಶಕರು ಉದ್ದೇಶಪೂರ್ವಕ ಬಿಟ್ಟಿದ್ದಾರೆ). ಸಾವಿನ ಹಾಸಿಗೆಯಲ್ಲಿದ್ದ ದೇಸಾಯಿಯು ಸಿಂದೊಳ್ಳಿ ಹಾಗೂ ಮಸ್ತಾನಮರಡಿಯಲ್ಲಿದ್ದ ಚಿಕ್ಕಮಲ್ಲಶೆಟ್ಟಿಯ ಮಗನನ್ನು ಕರೆತರಲು ಹೇಳಿದ." (ಪು. ೧೧೫) ಅಂದರೆ ದತ್ತಕ ಕಾರ್ಯ ದೇಸಾಯಿಯವರ ಜೀವಿತಕಾಲದಲ್ಲಿಯೇ ಆಗಿರಬೇಕು ಎನ್ನುವಂತೆ ಬರೆದಿರುವರು. ಮುಂದೆ "ದೇಸಾಯಿ ಮರಣಾನಂತರವೇ ಈ ಕಾರ್ಯವಾಯಿತೆಂದು ಥ್ಯಾಕರೆ ಊಹಿಸಿದುದರಲ್ಲಿ ತಪ್ಪಿಲ್ಲ." (ಪು. ೧೨೦) ಎಂದು ಥ್ಯಾಕರೆಯ ಪರವಾಗಿ ಲೇಖಕರು ವಾದಿಸುವರು, ಎಂದು ವಸಂತ ಪಾಟೀಲರು ಮುದ್ದಾಂ ತದ್ವಿರುದ್ಧತೆ ಕಾಣಲು ಹೊರಡುತ್ತಾರೆ. ಚಿಕ್ಕಮಲ್ಲಶೆಟ್ಟಿಯ ಮಗನನ್ನು

ಕರೆತರಲು ಹೇಳಿದಾಕ್ಷಣ ದತ್ತಕ ಕಾರ್ಯವಾಯಿತೆಂದು ಅಲ್ಲ. "ಮರಣ ಶಯ್ಯೆಯಲ್ಲಿದ್ದ ದೊರೆಯ ಮಾತಿಗಿಂತ ಬದುಕಿ ಬೆಳೆಯಬೇಕಾಗಿರುವ ರಾಣಿವಾಸದವರ ಹಿತಕ್ಕೆ ಸಂಸ್ಥಾನದ ಹಿತೈಷಿಗಳು ಹೆಚ್ಚು ಗಮನಕೊಟ್ಟು ದತ್ತುಕಾರ್ಯವನ್ನು ಮುಂದುವರಿಸಿರಬಹುದು." (ಪು. ೧೧೫). ಅಲ್ಲದೆ "ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮ ಇತಿಹಾಸ"ದ ಸಂಪಾದಕರು ಉದಹರಿಸಿರುವ ಒಂದು ಲಾವಣಿಯ ಬಗ್ಗೆ ಪ್ರೊ. ಶೆಟ್ಟರ್‌ರವರು ಹೇಳುತ್ತ "ದೇಸಾಯಿಯವರ ಕೊನೆಯುಸಿರಿನ ಬಯಕೆಯನ್ನು ಪೂರೈಸಲು ಮಾತ್ರವಲ್ಲದೇ, ಸಂಸ್ಥಾನದ ಹಿತಸಾಧನೆಯ ದೃಷ್ಟಿಯಿಂದಲೂ ಚೆನ್ನಮ್ಮ ಈ ಕಾರ್ಯಕ್ಕೆ ಕೈ ಹಾಕಿದಳೆಂದು ಸಂಪಾದಕರು ಹೇಳಿರುವರು. ಇದರಿಂದ ದತ್ತು ಸ್ವೀಕಾರವಾದದ್ದು ದೇಸಾಯಿಯ ಮರಣಾನಂತರವೇ? ಎಂಬ ಅನುಮಾನ ಉಂಟಾಗದೇ ಇರದು." (ಪು. ೧೧೬) ಎನ್ನುವಲ್ಲಿ ಮತ್ತು "ದೇಸಾಯಿ ಮರಣ ಹೊಂದಿದ್ದು ಸೆಪ್ಟೆಂಬರ್ ೧೧ರ ಶನಿವಾರ ಸಂಜೆ ನಾಲ್ಕು ಘಂಟೆಗೆಂದು ಕೊಣ್ಣೂರು ಮಲ್ಲಪ್ಪ ಭಾನುವಾರ ಬೆಳಿಗ್ಗೆ ನಾಲ್ಕು ಘಂಟೆಗೆಂದು ಕಿತ್ತೂರಿನ ಸರ್ದಾರ ಮಲ್ಲಪ್ಪ ಹೇಳಿದ್ದರಿಂದ, ಅಲ್ಲದೇ ಭಾನುವಾರ ಬೆಳಿಗ್ಗೆ ೮ ಘಂಟೆಗೆ ದತ್ತು ಸ್ವೀಕಾರವಾದುದರಿಂದ ದೇಸಾಯಿಯ ಮರಣಾನಂತರವೇ ಈ ಕಾರ್ಯವಾಯಿತೆಂದು ಥ್ಯಾಕರೆ ಊಹಿಸಿದುದರಲ್ಲಿ ತಪ್ಪಿಲ್ಲ" ಎಂದು ಹೇಳುವಲ್ಲೆಲ್ಲ ಮರಣಾನಂತರವೇ ದತ್ತುಸ್ವೀಕಾರದ ನಿರ್ದೇಶನ ಬರುತ್ತಿರುವುದು ಸ್ಪಷ್ಟವಾಗಿಯೇ ಇದೆ. ಇಲ್ಲಿ ವಿಮರ್ಶಕರು ಹೇಳುವಂತೆ ಥ್ಯಾಕರೆ ಪರ ವಾದಿಸಿದಂತೆ ಹೇಗಾಗುತ್ತದೋ ತಿಳಿಯುವುದಿಲ್ಲ.

ಕೇವಲ ದೋಷಾರೋಪಣೆ ಮಾಡುವುದೇ ವಿಮರ್ಶೆಯೆಂದು ಭಾವಿಸಿದ ಈ ವಿಮರ್ಶಕರು ಲೇಖಕರ ವೈಯಕ್ತಿಕತೆಗೂ ಕೈಹಾಕಲು, ಹಿಂದೆಮುಂದೆ ನೋಡುವುದಿಲ್ಲ. "ಲೇಖಕರ ಮುಖ್ಯ ದೋಷಾರೋಪಣೆ ಇರುವುದು ಹಿಸ್ಟ್ರಿ ಆಫ್ ಫ್ರೀಡಮ್ ಮೂವಮೆಂಟ ಇನ್ ಕರ್ನಾಟಕ"ದ ಸಂಪಾದಕರಾದ ಡಾ. ಎಂ. ವಿ. ಕೃಷ್ಣರಾವ್ ಮತ್ತು ಪ್ರೊ. ಜಿ. ಎಸ್. ಹಾಲಪ್ಪರ ಮೇಲಿರುವುದು. ಈ ಲೇಖನದ ಅಡಿಯಲ್ಲಿ ಒಟ್ಟು ೧೩೦ ಅಡಿಟಿಪ್ಪಣೆಗಳಿವೆ. ಅವೆಲ್ಲವೂ ಹೆಚ್ಚಾಗಿ ಇದೊಂದೇ ಪುಸ್ತಕಕ್ಕೆ ಸಂಬಂಧಿಸಿದವು. ಬಹುಶಃ ಲೇಖಕರ ಮನದಲ್ಲಿ ಈ ಸಂಪಾದಕರ ಬಗೆಗೆ ಅದೇನೋ ವೈಮನಸ್ಸು ಇದ್ದಂತೆ ಕಾಣಿಸುತ್ತದೆ. ಅದನ್ನು ಅವರು ಹೊರಗಡವಿಯೂ ಬಿಟ್ಟಿರುವರು. ಬಹುಶಃ ಪ್ರೊ, ಗ. ಸ. ಹಾಲಪ್ಪನವರು ಇತಿಹಾಸ ವಿಷಯಕ್ಕೆ ಸಂಬಂಧವಿಲ್ಲದವರು ಇಂಥ ಕಾರ್ಯ ಮಾಡಿರುವರೆಂಬುದು ಲೇಖಕರ ಮನದಲ್ಲಿ ಹೆಪ್ಪುಗಟ್ಟಿರಬೇಕು." –ಎಂದು ವ್ಯರ್ಥ ಆಲಾಪನೆ ಮಾಡುವುದನ್ನು ಕಂಡಾಗ ಅಯ್ಯೋ ಪಾಪ ! ಎನ್ನಿಸದಿರದು.

"ಯಾವುದನ್ನು ರಾಜ್ಯ ಕೌಶಲ್ಯದಿಂದ ಉಳಿಸಿಕೊಳ್ಳಬಹುದಾಗಿತ್ತೋ ಅದನ್ನು ಕಿತ್ತೂರಿನ ಕಾರಭಾರಿಗಳು ತಮ್ಮ ಭಾವುಕ ಕ್ರಿಯೆಯಿಂದ ಕಳೆದುಕೊಂಡರು" (ಪು. ೧೨೬) ಇದು ಲೇಖಕರ ಉಪದೇಶ. ಭಂಡಾರಕ್ಕೆ ಮುದ್ರೆ ಹಾಕಿ ಕೋಟೆಯ ದ್ವಾರವನ್ನು ಮುಚ್ಚಿಯಲು ಎರಡು ಫಿರಂಗಿಗಳೊಡನೆ ಸನ್ನದ್ಧನಾಗಿ ನಿಂತ ಥ್ಯಾಕರೆಯೊಡನೆ ಇನ್ನೆಂಥ ರಾಜ್ಯ

ಕೌಶಲ್ಯ ತೋರಿಸಬೇಕು? ಎನ್ನುವ ಹುಂಬತನದಲ್ಲಿ ವಿಮರ್ಶಕರು ಪೂರ್ಣವಿವೇಕ ಕಳೆದು ಕೊಳ್ಳುತ್ತಾರೆ. ರಾಜ್ಯಕೌಶಲ್ಯ ಸನ್ನದ್ಧರಾದ ಕೊನೆಯ ಸಂದರ್ಭ ಬಿಟ್ಟು ಸುಮ್ಮನಿದ್ದಾಗ ತೋರಿಸುವುದೇನು? ಹಾಗಿದ್ದರೆ ಅದಕ್ಕೆ ರಾಜ್ಯಕೌಶಲ್ಯವಾದರೂ ಏಕೆನ್ನಬೇಕು. ಬರೀ ವ್ಯಾಪರಕ್ಕಾಗಿ ಬಂದ ಬ್ರಿಟಿಷರಿಗೆ ಒಂದು ವಿಧವಾಗಿ ಇಡಿ ದೇಶವನ್ನೇ ಒಪ್ಪಿಸಿದ್ದು ನಮ್ಮ ಭಾವುಕ ಕ್ರಿಯೆಯಿಂದಲೇ ಎಂಬುದು ವಿಮರ್ಶಕರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಅಲ್ಲದೆ ಸಮರ್ಪಕ ಆಧಾರಗಳ ಹಿನ್ನೆಲೆಯಿಂದ ಹೇಳುವ ಲೇಖಕರ "ಅವಳ ಕಾರ್ಯ ಸಂಸ್ಥಾನದ ಅಳಿವಿಗೆ ದಾರಿಮಾಡಿಕೊಟ್ಟರೂ ಅನಿವಾರ್ಯ ಕಾರಣಗಳಿಂದ ಒಳಗೂಡಿದ್ದು" ಎನ್ನುವಮಾತಿಗೆ ವಿಮರ್ಶಕರು ಸಂಸ್ಥಾನದ ಅಳಿವಿಗೆ ಕಾರಣರು ಚೆನ್ನಮ್ಮನಲ್ಲ. ಮುಖ್ಯವಾಗಿ, ಲಿಂಗಾಯತ ಸಂಸ್ಥಾನವನ್ನು ಹಾಳುಮಾಡಬೇಕೆಂಬ ಉದ್ದೇಶವಿಟ್ಟು ಕೊಂಡ, ಬ್ರಾಹ್ಮಣರಾದ ಶ್ಯಾನುಭೋಗರು, ಶಿರಸ್ತೆದಾರರು, ಜಮಖಂಡಿಯ ಗೋಪಾಲರಾವ ಮುಂತಾದವರು. ಇವರ ಕುಹಕತನಕ್ಕೆ ಮಲ್ಲಪ್ಪಶೆಟ್ಟಿಯಂಥ ವೀರ ಶೈವರೂ ಅನುಕೂಲರಾದರು. ಎಂದು ಸಾಧಿಸಹೊರಡುತ್ತಾರೆ. ಬಹುಶಃ ಇವರೆಲ್ಲ ಒಂದಾಗಿ ಹೋರಾಡಿದ್ದರೆ ಕಿತ್ತೂರು ಉಳಿಯುತ್ತಿತ್ತೆ? ಎಂಬುದು ವಿಚಾರಿಸಬೇಕು.

ಇನ್ನು ಕೊನೆಕೊನೆಗಂತೂ ಥ್ಯಾಕರೆಯನ್ನು ನಾಯಕನನ್ನಾಗಿ ಮಾಡುವ ಭರದಲ್ಲಿ ಲೇಖಕರು ಚೆನ್ನಮ್ಮ ರಾಣಿಯನ್ನು ಖಳನಾಯಕಿಯನ್ನಾಗಿ ಮಾಡಿರುವರು. ದತ್ತಕ ಕಲಮನ್ನು ಮುಂದೆ ಮಾಡಿ ದೇಶಿಸಂಸ್ಥಾನಗಳನ್ನೆಲ್ಲ ಕರಾಳಿಸಿರುವಲ್ಲಿ ಬಹುಶಃ ಲೇಖಕರು ಬಿಳಿಯರಲ್ಲಿ ಹಿರಿಮೆ ಬರವಸೆಯನ್ನು ಕಂಡಿರಬಹುದು! ಇದೂ ಒಂದು ಹೊಸ ಇತಿಹಾಸವೇ ಎನ್ನೋಣವೇ? ಕಿತ್ತೂರಿನ ತರುಣ ಸಂಘದವರ ಮುಖದ ಮೇಲೆ ಲೇಖಕರು ಕೈ ಎಳೆಯುವ ಪ್ರಯತ್ನ ಮಾಡಿದಂತಿದೆ! ಭಾಷಣ ಮುಕ್ತಾಯ ಮಾಡು ವಲ್ಲಿ ಚಪ್ಪಾಳೆ ಪಡೆಯುವ ಆಸೆ ಎದ್ದು ಕಾಣುತ್ತಿದೆ! ಎಂದಿರುವಲ್ಲಿ, ಪಾಟೀಲರು ಓದು ಗರಲ್ಲಿ ವ್ಯರ್ಥಪ್ರಚೋದನೆ ಮಾಡಹೊರಟಂತಿದೆ. ಈ ವಿಮರ್ಶಕರು ಲೇಖನವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುವುದಿರಲಿ, ಲೇಖಕರ ದೃಷ್ಟಿಕೋನಗಳೊಂದಿಗೆ ಬಂದಾಗವೆ ಸಹಾನುಭೂತಿಯನ್ನೂ ಸಹ ಹೊಂದದಿರುವುದು ಆಶ್ಚರ್ಯಕರವಾದುದು. ಹಿನ್ನೆಲೆ ಮುನ್ನೆಲೆಗಳನ್ನು ಗಮನಿಸದೆ ಮಧ್ಯದ ಒಂದು ವಾಕ್ಯಕ್ಕೆ ತಮ್ಮದೇ ರೀತಿಯ ಅರ್ಥ ಹಚ್ಚುತ್ತ, ಲೇಖಕರು ಯಾವುದರ ವಿಚಾರವನ್ನು ಕೂಡ ಮಾಡಿರುವುದಿಲ್ಲವೋ ಅಂಥ ದನ್ನು ತಾವೇ ಆರೋಪಿಸಿ ಬಿಂಬಿಸಹೊರಡುತ್ತಾರೆ. ವಸಂತ ಪಾಟೀಲರು ಇಡೀ ಲೇಖನದುದ್ದಕ್ಕೂ ವಿರೋಧಾಭಾಸ ಕಲ್ಪಿಸುವುದರಲ್ಲಿಯೇ ತೊಡಗಿದಂತೆ ಕಾಣುತ್ತದೆ.

ಆರನೆಯ ಲೇಖನ ಸೋಮಶೇಖರ ಇಮ್ರಾಪೂರರವರ "ಕಿತ್ತೂರನ್ನು ಕುರಿತು ಲಾವಣಿಗಳು ಹಾಗೂ ಇತರ ಸಾಹಿತ್ಯ." ವಿಮರ್ಶಕರು ಈ ಲೇಖನವನ್ನು "ದೇಶಾವರಿ ರೂಪದ ಭಾಷಣದಂತಿದ್ದು, ಕೇವಲ ಪ್ರಾಸಬದ್ಧ ಶಬ್ದಗಳುಳ್ಳ ವಾಕ್ಯಗಳನ್ನು ಹೆಣೆ ಯುವಲ್ಲಿ ಲೇಖಕರು ಪ್ರಯಾಸಪಟ್ಟಿರುವರು" ಎಂದು ಹೀಯಾಳಿಸಿ ಏನೋ ಹೊಸ

ವಿಮರ್ಶೆ ಮಾಡಹೊರಟಂತೆ ಕಿತ್ತೂರು ನಾಡಿಗೆ ಸಂಬಂಧಿಸಿದ ಚೆನ್ನಮ್ಮ, ರುದ್ರಮ್ಮ, ವೀರಮ್ಮ ಮುಂತಾದ ಕಿತ್ತೂರು ರಾಣಿಯರಿಗೆ ಸಂಬಂಧಿಸಿದ ಮತ್ತು ಕಿತ್ತೂರ ಸ್ವಾತಂತ್ರ್ಯ ಸಮರದಲ್ಲಿ ಹೋರಾಡಿ ಮಡಿದ ವೀರರ ಜೀವನವನ್ನು ಬಿಂಬಿಸುವಂಥ ಲಾವಣಿ ಹಾಗೂ ಇತರ ಸಾಹಿತ್ಯದ ನೆರವಿನೊಂದಿಗೆ ಮೊದಲಿನಿಂದ ಕೊನೆಯ ಪುಟದವರೆಗೆ ವಿಷಯವನ್ನು ವಿಶ್ಲೇಷಿಸಬೇಕಿತ್ತು." ಎನ್ನುತ್ತಾರೆ. ಆದರೆ ಅಲ್ಲಿ ಇದ್ದ ಸಾಮಗ್ರಿಗಳೊಂದಿಗೆ ಇಮ್ರಾಪೂರರು ಅದನ್ನೇ ಮಾಡಿದ್ದಾರಲ್ಲಾ !

ಇನ್ನು ಕಿತ್ತೂರಿನ ಬಗ್ಗೆ ಜನಪದದಲ್ಲಿದ್ದ ವಸ್ತುನಿಷ್ಠ ಸಂಗತಿಗಳು ಶಿಷ್ಟಸಾಹಿತ್ಯದಲ್ಲಿ ಅಷ್ಟು ಶಕ್ತಿಯುತವಾಗಿ ಪ್ರಕಟವಾಗಿಲ್ಲ" ಎಂಬುದು ಲೇಖಕರ ಅಭಿಪ್ರಾಯ (ಪು.೧೯೬) ಅಂದರೆ ಜನಪದದಲ್ಲಿ ಸರಿಯಾದ ಇತಿಹಾಸವಿಲ್ಲವೊ? ಅಥವಾ ಶಕ್ತಿಯುತವಾದ ಸಾಹಿತ್ಯ ಕೈಯಲ್ಲಿಲ್ಲವೊ? ಎಂಬ ವಿಮರ್ಶಕರ ಅಸಂಬದ್ಧವಾದ ಮಾತು ಅವರಿಗೆ ಸಾಹಿತ್ಯ ಗಂಧವಿಲ್ಲದುದನ್ನು ಸೂಚಿಸುತ್ತದೆ.

ಕೊನೆಯ ಮತ್ತು ಹನ್ನೆರಡನೆಯ ಲೇಖನ ಸರೋಜಿನಿ ಶಿಂತ್ರಿಯವರ "ವಿಶ್ವದ ಆಡಳಿತಗಾರ್ತಿಯರಲ್ಲಿ ಕಿತ್ತೂರು ಚೆನ್ನಮ್ಮನ ಸ್ಥಾನ". ತೀರ ಸಾಮಾನ್ಯ ವಿಷಯಗಳನ್ನೇ ಚರ್ವಿತ ಚರ್ವಣಗೊಳಿಸಿದ ಈ ಲೇಖನದ ಬಗ್ಗೆ ವಿಮರ್ಶಕರು ಸಂದರ್ಭೋಚಿತವಾಗಿ ಕೆಲವು ಜಾಣತನದ ಮಾತುಗಳನ್ನು ಆಡಿದ್ದು ಗಮನಾರ್ಹವಾದರೂ "ರಾಣಿ ಚೆನ್ನಮ್ಮ ಸ್ವತಃ ಖಡ್ಗ – – –ಹಿಡಿದು–ಜೀವನವನ್ನೇ ಪಣಕ್ಕೆ ಹಚ್ಚಿ ಹೋರಾಡಬೇಕಾಯಿತು. (ಪು. ೨೧೫–೨೧೬)." ಆದರೆ ಇದಕ್ಕೆ ಪ್ರೊ. ಶೆಟ್ಟರ್‌ರ ಇತಿಹಾಸ ಒಪ್ಪಬೇಕಲ್ಲ? ಎಂದು ತೀರ ವೈಯಕ್ತಿಕತೆಯಿಂದ ಅವರದೇ ಆದ ಇತಿಹಾಸ ಕಲ್ಪಿಸಹೊರಟು ಸಂಪೂರ್ಣ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಾರೆ. ಹೀಗಾಗಿ ಈ ವಿಮರ್ಶಕರಿಗೆ ಪ್ರೊ. ಸೆಟ್ಟರ್ ಅವರ ಇತಿಹಾಸ ರಚಿಸುವ ಹೊಸದೃಷ್ಟಿ. ವಿಮರ್ಶಾದೃಷ್ಟಿಕೋನ, ಐತಿಹಾಸಿಕ ಆಕರಗಳ ಸಮರ್ಪಕ ವಿಶ್ಲೇಷಣೆ ಹೊಸ ಬೆಳಕು ಬೀರುವ ಬದಲು ಹೊಸ ಮುಸುಕಾಗಿ ಕಂಡದ್ದರಲ್ಲಿ ಹೊಸತೇನೂ ಇಲ್ಲ. ಕೊನೆಗೆ "ಸಂಸ್ಕೃತಿಯ ಬಗೆಗೆ ಇಲ್ಲಿ ಅವಕಾಶವೇ ಸಿಕ್ಕಿಲ್ಲವೆಂದು ಹೇಳಬಹುದು" ಎಂದು ಕಿತ್ತೂರಿಗೆ ಸೀಮಿತವಾದ ಸಂಸ್ಕೃತಿಯನ್ನು ಹುಡುಕುವ ಹುಚ್ಚುತನಕ್ಕೆ ಹೊರಡುತ್ತಾರೆ. ಶಾಂತಕುಮಾರಿಯವರು ಹೇಳುವ ಶಾಸನಗಳು. ದೇವಾಲಯಗಳು. ಅಗ್ರಹಾರಗಳು, ಎ. ಎಂ. ರಾಜಶೇಖರಯ್ಯನವರು ಆಧಾರಸಹಿತವಾಗಿ ಉಲ್ಲೇಖಿಸುವ ಕರ್ನಾಟಕದ ಭವ್ಯಪರಂಪರೆ: ಸಿ. ವಿ. ಮಠದರವರು ತಿಳಿಸಿದ ಕಿತ್ತೂರು ನಾಡಿನ ವೀರರು, ಇಮ್ರಾಪೂರರ ಕಿತ್ತೂರನ್ನು ಕುರಿತು ಲಾವಣಿಗಳು ಹಾಗೂ ಇತರ ಸಾಹಿತ್ಯ ಇವುಗಳಲ್ಲಿ 'ಸಂಸ್ಕೃತಿ' ಪ್ರತಿಬಿಂಬಿತವಾಗಿಲ್ಲವೆ?

———

ಭಾರತೀಯ ಸಮಾಜದಲ್ಲಿ ಸ್ತ್ರೀಯರ ಚಿತ್ರಣ

ಒಂದು ಪ್ರತಿಕ್ರಿಯೆ

● ಆರ್. ವೆಂಕಟೇಶ

ಕೆ. ಜಿ. ಗುರುಮೂರ್ತಿ ಅವರ "ಬಸವಣ್ಣನವರು ಹಾಗೂ ಆಧುನಿಕ ಸಮಾಜ"[1] ಎಂಬ ಲೇಖನವು ಮಹತ್ವಪೂರ್ಣ ಸಂಗತಿಯನ್ನು ಪ್ರಸ್ತಾಪಿಸಬಹುದಾಗಿತ್ತು! ಆದರೆ ಏಕೋ ಏನೋ ಶೀರ್ಷಿಕೆಗೂ ವಿಷಯ ಪ್ರತಿಪಾದನೆಗೂ ಸಂಬಂಧ ಅಷ್ಟಕ್ಕಷ್ಟೇ ಇದ್ದಂತಿದೆ! ಬಸವಣ್ಣನವರ ಕಾಲದ ಹಾಗೂ ಇಂದಿನ ಕಾಲದ ವಿಸ್ತೃತ ವಿಶ್ಲೇಷಣೆಯಿಂದ ಒಂದು ಸಮಗ್ರ ಚಿತ್ರಣ ಮೂಡಿಸುವ ಅವಕಾಶವನ್ನು ಲೇಖಕರು ಕಳೆದುಕೊಂಡಿದ್ದಾರೆನ್ನದೆ ವಿಧಿಯಿಲ್ಲ. ಇದೇ ವಿಷಯಕ್ಕೆ ಇನ್ನೂ ಹೆಚ್ಚಿನ ಹಾಗೂ ಸ್ವಾರಸ್ಯಪೂರ್ಣ ಚರ್ಚೆ ಸಾಧ್ಯವಿದೆಯೆಂಬುದನ್ನು ಬಹಳ ಹಿಂದೆಯೇ ಎಸ್. ವಿ. ಪರಮೇಶ್ವರಭಟ್ಟರು ತೋರಿದ್ದಾರೆ.[2] ಅದೂ ಅಲ್ಲದೆ ಶ್ರೀ ಗ. ಸ. ಹಾಲಪ್ಪ ಹಾಗೂ ಆಲೂರ ವೆಂಕಟರಾಯರ ಅಭಿಪ್ರಾಯಗಳನ್ನು ಉದ್ಧರಿಸಿ[3] ಸಾಹಿತ್ಯಿಕವಾಗಿ ಬಸವಣ್ಣನವರ ವ್ಯಕ್ತಿತ್ವವನ್ನು ಪ್ರಶಂಸಿಸುವ ಮೂಲಕ ವಿಷಯ ವ್ಯಾಪ್ತಿಯನ್ನೂ ಲೇಖಕರು ದಾಟಿದ್ದಾರೆ. ಅಷ್ಟೇಅಲ್ಲ: "ಸುಮಾರು ೮೦೦ ವರ್ಷಗಳ ಹಿಂದೆ. ಅಂದರೆ ೧೨ನೆಯ ಶತಮಾನದಲ್ಲಿದ್ದ ಬಸವಾದಿ ಶಿವಶರಣರು ನಡೆಸಿದಂತಹ ವಿಚಾರಪೂರ್ಣ. ಆದರ್ಶಮಯ ತುಂಬು ಜೀವನ. ಅವರು ಚರ್ಚಿಸಿದಂತಹ ವಿಚಾರಗಳು ೨೦ನೆಯ ಶತಮಾನದಲ್ಲೂ ದಾರಿದೀಪವಾಗಿವೆ" (ಪುಟ ೩೮. ಮಾನವಿಕ ಭಾರತಿ ಜುಲೈ ೭೭)" ಹೀಗೆ ಸಮಾಜದ ಕೆಳಸ್ತರದಲ್ಲಿದ್ದ ಅಸ್ಪೃಶ್ಯರನ್ನು ೮೦೦ ವರ್ಷಗಳ ಹಿಂದೆಯೇ ಬಸವಣ್ಣನವರು ಉದ್ಧಾರ ಮಾಡಿದ್ದಾರೆ" (ಅಲ್ಲೇ. ಪುಟ ೪೫)" ಹೀಗೆ ಜನಸಾಮಾನ್ಯರಿಗೆ ವೇದ್ಯವಾಗುವಂತೆ ಹೇಳುವ ಈ ಮಾರ್ಗವೊಂದನ್ನು ಬಸವಣ್ಣನವರು ೮೦೦ ವರ್ಷಗಳ ಹಿಂದೆಯೇ ನೀಡಿದ್ದಾರೆ" (ಪುಟ ೪೭)" ಇದನ್ನು ಬಸವಣ್ಣನವರು ೮೦೦ ವರ್ಷಗಳ ಹಿಂದೆಯೇ ಮಾಡಿತೋರಿಸಿದ ಜನತಾ ಸಾಹಿತ್ಯದಿಂದ

---

೧. ಮಾನವಿಕ ಭಾರತಿ ೧-೨, ಜುಲೈ ೭೭.

೨. ನೋಡಿ ಬಸವಣ್ಣನವರು ಚಿತ್ರಿಸಿದ. ಎಸ್. ವಿ. ಪರಮೇಶ್ವರ ಭಟ್ಟ.

೩. ಪುಟ ೪೭, ಮಾನವಿಕ ಭಾರತಿ ಜುಲೈ ೭೭ ಲೋಕದ ಡೊಂಕು ಸೀಳು ನೋಟ :

ಕಲಿಯಬಹುದು" (ಪುಟ ೪೮)" ಹೀಗೆ ೮೦೦ ವರ್ಷಗಳ ಹಿಂದೆ ಬಸವಾದಿ ಶರಣರು ಮಾಡಿದ ಕೃತಿಗಳು, ನುಡಿದ ವಾಣಿ ಇಂದಿಗೂ ಅನ್ವಯಿಸುವಂತಿವೆ" (ಪುಟ ೪೯) ಎಂದು ೧೨ ಪುಟಗಳ ಸಣ್ಣ ಲೇಖನದಲ್ಲಿ ಹೇಳಿದ್ದನ್ನೇ ಹೇಳುತ್ತಾ ಪದಗಳ ಕಸರತ್ತು ಮಾಡಲಾಗಿದೆ. ಅದರೆ ವಿಷಯವನ್ನು ಆಳವಾಗಿ ವಿಶ್ಲೇಷಿಸಿ ಸಮಾಜಶಾಸ್ತ್ರೀಯ ಅಥವಾ ಮಾನವಶಾಸ್ತ್ರೀಯ ಹಿನ್ನೆಲೆಯಲ್ಲಿ ನೋಡುವ ಅಗತ್ಯವಿತ್ತು ಎಂದರೆ ತಪ್ಪಾಗಲಾರದು! ಅನುಭವಮಂಟಪ 'ಬಸವಣ್ಣನವರಸಂಸ್ಥೆ ಎಂದು ಹೇಳಿರುವುದು ಸರಿಯಲ್ಲ.' ಅನುಭವ ಮಂಟಪ'ದಲ್ಲಿ ಯಾವ ವ್ಯಕ್ತಿಯೂ ಪ್ರಧಾನವಾಗಿರಲಿಲ್ಲ. ತತ್ವಗಳನ್ನು ಮುಕ್ತಮನದಿಂದ ಚರ್ಚಿಸುವ ಸಾಮೂಹಿಕ ವಿಚಾರವೇದಿಕೆ ಅದಾಗಿತ್ತು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಅಲ್ಲಿ ಬಸವಣ್ಣನವರಿದ್ದರೂ ಕೂಡ ಅದರ ಸ್ವಾಮ್ಯ ಅವರದಲ್ಲ ಎಂಬುದು ಗಮನಾರ್ಹವಿಷಯ !

ಇನ್ನು ಉತ್ತರಾರ್ಧಕ್ಕೆ ಬರುವುದಾದರೆ ಭಾರತೀಯ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನದ ಬಗ್ಗೆ ಲೇಖಕರು ಅನ್ಯಾಯಮಾಡಿದ್ದಾರೆ ಎಂದು ಎನಿಸದಿರದು."ಬಸವಣ್ಣನವರ ಪೂರ್ವದ ಹಿಂದೂ ಸಮಾಜದಲ್ಲಿ ಸ್ತ್ರೀಗೆ ಸೂಕ್ತ ಸ್ಥಾನವಿರಲಿಲ್ಲ. ವೈದಿಕ ಸಮಾಜವು ಸ್ತ್ರೀಯನ್ನೇ ಮಾಯೆ ಎಂದು ಭ್ರಮಿಸಿ ಹೆಣ್ಣೆಂದು ಕಡೆಗಣಿಸಿತ್ತು" (ಪುಟ ೪೦) "ಅದರೆ ಸಂಪ್ರದಾಯಸ್ಥ ಹಿಂದೂ ಸಮಾಜದಲ್ಲಿ ವೇದಶಾಸ್ತ್ರ ಪುರಾಣಗಳಲ್ಲಿ ಸ್ತ್ರೀಗೆ ಧಾರ್ಮಿಕ ಸ್ವಾತಂತ್ರ್ಯವಿಲ್ಲವಾದ್ದರಿಂದ ಆಕೆ ಸ್ವತಂತ್ರವಾಗಿ ಪೂಜೆಮಾಡಲಾರಳು" (ಪುಟ ೪೧) ಎಂದು ಮುಂತಾಗಿ ಬರೆದು ವೈದಿಕ ಸಮಾಜದ ಕಲ್ಪನೆಯೇ ಇಲ್ಲದೆ ಸ್ತ್ರೀಯು ಸ್ವತಂತ್ರಳಿದ್ದಿಲ್ಲವೆಂದೂ ವಿರಾಗಿಣಿಯಾಗಲು ಅವಕಾಶವಿರಲಿಲ್ಲವೆಂದೂ ಹೆಣ್ಣನ್ನು ಸಂಪೂರ್ಣ ಕಡೆಗಣಿಸಲಾಗಿತ್ತೆಂದೂ ಅಭಿಪ್ರಾಯ ಪಡಲಾಗಿದೆ.

ಭಾರತೀಯ ಸಮಾಜದಲ್ಲಿ ಸ್ತ್ರೀಗೆ ತನ್ನದೇ ಆದ ಸ್ಥಾನವು ಆದಿಕಾಲದಿಂದಲೂ ಸುಪ್ರತಿಷ್ಠಿತವಾಗಿದೆ. ಆ ಬಗೆಗೆ ತಪ್ಪು ಕಲ್ಪನೆ ಪಾಶ್ಚಾತ್ಯರಿಂದ ಹಾಗೂ ವಿಚಾರವಾದಿಗಳೆಂಬ ಜನರಿಂದ ಉಂಟಾಗಿದೆ! ಮನುಸ್ಮೃತಿಯ ಕೆಲ ಶ್ಲೋಕಗಳನ್ನು ಅರ್ಥವಿಸಿಕೊಳ್ಳಲಾಗದ ಜನ ಸ್ತ್ರೀಯ ಬಗೆಗೆ ಕಟ್ಟುಕಥೆಗಳನ್ನು ಹರಡಿ ನಮ್ಮ ಸಮಾಜದ ಬಗ್ಗೆಯೇ ಮೂಗುಮುರಿದು ತಾವೇ ಪ್ರಗತಿಗಾಮಿಗಳೆಂದು ಹಣೆಪಟ್ಟಿ ಅಂಟಿಸಿಕೊಳ್ಳ ತೊಡಗಿದ್ದಾರೆ! "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೆ ತತ್ರ ದೇವತಾ" ಎಂಬ ಮನುವಿನ ವಾಕ್ಯಕ್ಕೆ ಏನು ಅರ್ಥ ಎಂಬುದನ್ನೇಕೆ ಚಿಂತಿಸಬಾರದು ? ವೇದಕಾಲದಲ್ಲಿ ಗಾರ್ಗಿ, ಮೈತ್ರೇಯಿ, ವಿಶ್ವಾವರ ಮುಂತಾದ ಸ್ತ್ರೀಯರ ಜಾಜ್ವಲ್ಯಮಾನ ವ್ಯಕ್ತಿತ್ವ ಎಲ್ಲ ಕಾಲಕ್ಕೂ ಮೇಲ್ಪಂಕ್ತಿಯೇ ಆಗಿದೆ ! ಅದನ್ನೇಕೆ ಕಡೆಗಣಿಸಬೇಕು ? ಕೆಲವು ವೇದಸೂಕ್ತಗಳಿಗೆ ಸ್ತ್ರೀಯರೇ ದ್ರಷ್ಟಾರರಿದ್ದರು ಎಂಬುದೂ ಗಮನಾರ್ಹವಿಚಾರವೇ ! ರೈಕ್ವ ಎಂಬ ಬಂಡಿಹೊಡೆಯುವವ, ತಂದೆತಾಯಿಯ ಪರಿಚಯವಿಲ್ಲದ ಬ್ರಹ್ಮಚಾರಿ, ಜಾತಿಕುಲ ಗೋತ್ರಗಳಿಲ್ಲದ ಅನಾಮಧೇಯರು, ಸ್ತ್ರೀಯರು, ಕ್ಷತ್ರಿಯರು, ಧರ್ಮವ್ಯಾಧನಂತಹ ಶೂದ್ರರು ಎಲ್ಲರೂ ಕೂಡ ಮಹತ್ವಗಳಿಸಿದ ವೇದಕಾಲೀನ ಸಮಾಜದಲ್ಲಿ ಎಲ್ಲರಿಗೂ

ಅವರವರ ಯೋಗ್ಯತೆಗೆ ತಕ್ಕ ಸ್ಥಾನವಿದ್ದೇ ಇತ್ತು ಎಂಬುದು ಸುಸ್ಪಷ್ಟವಾಗಿದೆ. ಗೀತಾಚಾರ್ಯನು "ಸ್ತ್ರಿಯೋವೈಶ್ಯಾಸ್ತಥಾಶೂದ್ರಾಸ್ತೇಽಪಿಯಾಂತಿಪರಾಂಗತಿಂ" ಎಂದು ಅವಿಚಾರವರಿಗೆ, ಸಂಶಯಾತ್ಮರಿಗೆ ಹಾಗೂ ಅಪಪ್ರಚಾರಕರಿಗೆ ಕಂಠೋಕ್ತವಾಗಿಯೇ ತಕ್ಕ ಉತ್ತರಕೊಟ್ಟು ಯಾರು ನೀಚರು ಎಂದು ಜರಳಿಟ್ಟು ತೋರಿಸುತ್ತಿದ್ದರೋ ಅಂಥವರಿಗೂ ಮೋಕ್ಷವುಂಟೆಂಬುದನ್ನು ಎತ್ತಿತೋರಿದ್ದಾನೆ. ಆತ್ಮನಿಗೆ ಯಾವ ಭೇದಗಳೂ (ಸ್ತ್ರೀಪುರುಷ ವೈಷಮ್ಯವೂ ಸೇರಿದಂತೆ) ಇಲ್ಲವೆಂದು ವೇದೋಪನಿಷತ್ತುಗಳೂ ಶ್ರುತಿ ಸ್ಮೃತಿಗಳೂ ಇತಿಹಾಸ ಪುರಾಣಗಳೂ ಸಾರಿಸಾರಿ ಹೇಳುತ್ತಿವೆ. ಪರಕೀಯ ಪ್ರಭಾವಕ್ಕೊಳಗಾದ ಮಧ್ಯ ಕಾಲೀನ ಅಪಪ್ರಚಾರದಿಂದ ಸ್ತ್ರೀಯರ ಸ್ಥಾನಮಾನದ ಬಗೆಗೆ ತಪ್ಪು ಕಲ್ಪನೆಗಳನ್ನು ಹರಡಿ ಭಾರತೀಯ ಸಮಾಜದ ಬಗ್ಗೆ ಅನ್ಯರಲ್ಲಿ ಅನ್ಯಥಾದಾಯಕ ಕಲ್ಪನೆ ಉಂಟಾಗಿದೆ. ಅದನ್ನು ಅಲ್ಲಗಳೆದು ಇದ್ದ ವಿಷಯವನ್ನು ಇದ್ದಂತೆ ಹೇಳಬೇಕಾದುದು ಅತ್ಯನಿವಾರ್ಯಕಾರ್ಯವಾಗಿದೆ! ಸ್ತ್ರೀಯು ಮಾಯೆ ಎಂದು ಹಳಿಯುವ ಕಾರ್ಯ ಕುಹಕಿಗಳಿಂದಾಗಿದೆಯೇ ವಿನಹ ಆಧ್ಯಾತ್ಮವಾದಿಗಳಿಂದಲ್ಲ. ಸ್ತ್ರೀಯ ಸಂಸರ್ಗವಿಲ್ಲದೆ ಸ್ತ್ರೀಯ ಸಹಕಾರವಿಲ್ಲದೆ ಪುರುಷನ ಪ್ರಗತಿ ಸಾಧ್ಯವಾಗುವುದಿಲ್ಲ ಎಂದು ಭಾರತೀಯ ಸಮಾಜ ಕಾಲಕಾಲಕ್ಕೆ ಸಾರುತ್ತಾ ಬಂದಿದೆ. ಜರತ್ಕಾರು ಋಷಿಯ ವೃತ್ತಾಂತದಲ್ಲಿ ಅವನು ಎಷ್ಟೇ ಪಂಡಿತನಾಗಿಯೂ ಸ್ತ್ರೀಯ ಸಂಸರ್ಗವಿಲ್ಲದ್ದರಿಂದ ಅವನ ಪೂರ್ವಿಕರೆಲ್ಲರೂ ನರಕದಲ್ಲೊದ್ದಾಡುವಂತಾಯಿತೆಂಬುದನ್ನು ಮರೆಯುವಂತಿಲ್ಲ. ಮಹಾಭಾರತ ಕಾಲದಲ್ಲಿ ದ್ರೌಪದಿಯು ಎಂತಹ ಧರ್ಮಸೂಕ್ಷ್ಮಗಳನ್ನು ಭೀಷ್ಮ ದ್ರೋಣಾದಿಗಳನ್ನೂ ಮತ್ತಿತರ ವಿದ್ವಾಂಸರಾದ ಗಣ್ಯರನ್ನೂ ಮೀರಿಸುವಂತೆ ಹೊರಗೆಡಹುವ ಅದ್ಭುತ ವಿಚಾರಶೀಲತೆಯನ್ನು ಹೊಂದಿದ್ದಳು ಎಂಬುದೂ ಸಾಮಾನ್ಯ ಪತಿಪರಾಯಣೆಯಾದ ನಾರಿಯೊಬ್ಬಳು ತಪಸ್ವಿಯಾದ ಬ್ರಾಹ್ಮಣನೊಬ್ಬನನ್ನು ಮೀರಿದ ಜ್ಞಾನವಂತಳಾಗಿದ್ದಳೆಂಬುದೂ ಗೊತ್ತಾಗುತ್ತದೆ. ಆದಿಕಾಲದಿಂದ ಇಂದಿನ ಇಪ್ಪತ್ತನೇ ಶತಮಾನದವರೆಗೆ ಭಾರತೀಯ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನಗಳು ಅತ್ಯಂತ ಮಹತ್ವಪೂರ್ಣವಾಗಿದ್ದು ಪ್ರಕೃತಿ ಸಹಜವಾದ ವಿಶಿಷ್ಟತೆಯನ್ನುಳಿಸಿಕೊಂಡು ಇಂದಿಗೆ ಅತ್ಯುನ್ನತಿಯತ್ತ ವಿಕಾಸೋನ್ಮುಖವಾಗಿದೆ. ಅಂದಮಾತ್ರಕ್ಕೆ ಹನ್ನೆರಡನೇ ಶತಮಾನದಲ್ಲಿ ಏನೂ ಆಗಿಲ್ಲ ಎಂದು ಯಾರೂ ಹೇಳುವಂತಿಲ್ಲ. ಹನ್ನೆರಡನೇ ಶತಮಾನದ ಕ್ರಾಂತಿ ಪರ್ವದಲ್ಲಿ ಪುರುಷನಂತೆಯೇ ಸ್ತ್ರೀಯೂ ಸಹ ಸತ್ವ ಶಕ್ತಿಗಳನ್ನು ಹೊಂದಿ ಪ್ರಗತಿಯತ್ತ ಹೆಜ್ಜೆ ಹಾಕುವುದರಲ್ಲಿ ಯಶಸ್ವಿಯಾಗಿದ್ದಾಳೆ. ಒಟ್ಟಿನಲ್ಲಿ ಭಾರತೀಯ ಸಮಾಜದಲ್ಲಿರುವ ಸ್ತ್ರೀಯ ಸ್ಥಾನಮಾನಗಳನ್ನು ಕುರಿತಾದ ಅತಿರಂಜಿತ ಕಲ್ಪನೆಗಳನ್ನು ಬಿಂಬಿಸಿ ಸ್ತ್ರೀ ಪುರುಷರಿಬ್ಬರ ನಿಸರ್ಗ ಸಹಜ ವಿಶಿಷ್ಟತೆಯನ್ನಂಗೀಕರಿಸಬೇಕಾಗಿದೆ.

ಈ ಸಂಚಿಕೆಯ ಲೇಖಕರು

೧. ಶ್ರೀ ಜಿ. ಎಂ. ಹೆಗಡೆ
ಅಧ್ಯಾಪಕರು, ಕಿಟೆಲ್ ಕಾಲೇಜು, ಧಾರವಾಡ

೨. ಶ್ರೀ ಎಚ್. ವ್ಹಿ. ನಾಗೇಶ
ರೀಡರ್ ಮತ್ತು ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ,
ಜೆ. ಎಸ್. ಎಸ್. ಬನಶಂಕರಿ ಆರ್ಟ್ಸ್‌ಕಾಲೇಜು, ವಿದ್ಯಾಗಿರಿ, ಧಾರವಾಡ

೩. ಕು. ವಿದ್ಯಾ ಮರಳಿಹಳ್ಳಿ
ಸಂಶೋಧನ ವಿದ್ಯಾರ್ಥಿನಿ, ಪ್ರಾಚೀನ ಭಾರತ ಚರಿತ್ರೆ ಹಾಗೂ
ಶಾಸನ ವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪. ಶ್ರೀ ಶ್ರೀನಿವಾಸ ಪಾಡಿಗಾರು
ಸಂಶೋಧನ ವಿದ್ಯಾರ್ಥಿ, ಪ್ರಾಚೀನ ಭಾರತ ಇತಿಹಾಸ ಮತ್ತು
ಶಾಸನ ವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ಶ್ರೀ ವ್ಹಿ. ಜಿ. ಪೂಜಾರ
ಸಂಶೋಧನ ವಿದ್ಯಾರ್ಥಿ, ಸ್ನಾತಕೋತ್ತರ ಕನ್ನಡ ವಿಭಾಗ, ಗುಲ್ಬರ್ಗಾ

೬. ಡಾ. ಅ. ಸುಂದರ
ರೀಡರ್, ಪ್ರಾಚೀನ ಭಾರತ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭. ಡಾ. ಕೆ. ಜಿ. ಗುರುಮೂರ್ತಿ
ರೀಡರ್, ಮಾನವ ಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮. ಶ್ರೀ ಎಮ್. ಸಿ. ಕೊಡ್ಲಿ
ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೯. ಡಾ. ಕೆ. ಎನ್. ಚಿಟ್ನೀಸ
ರೀಡರ್, ಇತಿಹಾಸ ವಿಭಾಗ
ಪುಣೆ ವಿಶ್ವವಿದ್ಯಾಲಯ, ಪುಣೆ

೧೦. ಡಾ. ಸಿ. ವ್ಹಿ. ರಂಗಸ್ವಾಮಿ
ಅಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೧. ಶ್ರೀ ಟಿ. ಆರ್. ಚಂದ್ರಶೇಖರ
ಅರ್ಥಶಾಸ್ತ್ರ ವಿಭಾಗ,
ವಿಜಯನಗರ ಕಾಲೇಜ, ಹೊಸಪೇಟೆ

೧೨. ಡಾ. ಎನ್. ಎ. ಪಾಟೀಲ
ಅಧ್ಯಾಪಕರು, ರಾಜಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೩. ಎಸ್. ಕೆ. ಕೊಪ್ಪಾ
ಸಂಶೋಧನ ಸಹಾಯಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೪. ಆರ್. ವೆಂಕಟೇಶ
ಕನ್ನಡ ಬರಹಗಾರ, ತಲಕಾಡು–೫೭೧೧೨೨

ಮಾನವಿಕ ಭಾರತಿ

ಪ್ರಥಮ ಸಂಚಿಕೆ : ಜನವರಿ

ದ್ವಿತೀಯ ಸಂಚಿಕೆ : ಜುಲೈ

ವಾರ್ಷಿಕ ಚಂದಾ : ರೂ. ೬–೦೦ (ಅಂಚೆ ವೆಚ್ಚ ಸಹಿತ)
ಬಿಡಿ ಪ್ರತಿಯ ಬೆಲೆ : ರೂ. ३–೫೦ („ „ ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ४–೦೦

ಹಣವನ್ನು, ಡಿಮಾಂಡ ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ

ಫಾಯನಾನ್ಸ್ ಆಫೀಸರ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–೫೮೦೦೦೩

ಇವರಿಗೆ ಕಳುಹಿಸಬೇಕು.

ಈ ಕುರಿತು ಯಾವದೇ ಪತ್ರವ್ಯವಹಾರ ಕೆಳಗಿನ ವಿಳಾಸಕ್ಕೆ ಮಾಡಿರಿ :

ನಿರ್ದೇಶಕರು :

ವ್ಯಾಸಂಗ ವಿಸ್ತರಣ–ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦೦೦೩